ಏಪ್ರಿಲ್ 27, 2025

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1982

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಕಾಶ್ಮೀರದಲ್ಲಿ ಮತ್ತೆ ಮುಸ್ಲಿಂ ಉಗ್ರರ ಅಟ್ಟಹಾಸ!

# ಹಿಂದೂ ಪ್ರವಾಸಿಗರ ಹುಡುಕಿ ಹುಡುಕಿ ಗುಂಡಿಟ್ಟು ಕೊಂದರು!



ಸೈತಾನರ ಸರ್ವನಾಶ ಯಾವಾಗ ಮೋದಿಜಿ?



## ಪತ್ನಿಯಿಂದಲೇ ಕೊಲೆಯಾದ ಮಾಜಿ ಡಿಜಿಪಿ ಓಂಪ್ರಕಾಶ್!

## 3.75 ಕೆಜಿ ಚಿನ್ನ ದರೋಡೆ ಮಾಡಿದ ಕಾಂಗ್ರೆಸ್ ಸದಸ್ಯ!

## ಮುತ್ತಪ್ಪ ರೈ ಮಗನಿಗೆ ಮೂರ್ತ ಇಟ್ಟವರ್ಯಾರು?!



**ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಅಂಥ ಹೇಳಿಕೊಳ್ಳುತ್ತಿರುವ ಜಾತಿಗಣತಿ ರಾಜ್ಯದಲ್ಲಿ ಕೋಲಾಹಲ ಎಬ್ಬಿಸಿದೆ. ಇದು ಯಾವ ರೀತಿಯ ತಿರುವುಗಳಿಗೆ ಕಾರಣವಾಗುತ್ತೋ ಗೊತ್ತಿಲ್ಲ, ಆದರೆ ಈಗಿನ ಪರಿಸ್ಥಿತಿಯಲ್ಲಿ ಈ ವರದಿಯನ್ನು ಜಾರಿ ಮಾಡಿದರೂ ಕಷ್ಟ... ಮಾಡದಿದ್ದರೂ ಕಷ್ಟ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿರುವುದಂತು ನಿಜ.. ಸದ್ಯ ಅಹಿಂದ ರಾಜ್ಯದಲ್ಲಿ ಗಟ್ಟಿಯಾಗಿದೆ ಎಂಬ ಸಂದೇಶ ಹೊರ ಹೋಗುತ್ತಿದ್ದು ಇದು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಕಾಪಾಡುತ್ತದೆ ಎಂಬ ಧೈರ್ಯವೋ ಏನೋ? ಜಾತಿಗಣತಿ ಜಾರಿಗೆ ಮುಹೂರ್ತ ಫಿಕ್ಸ್ ಮಾಡಿಯೇ ತೀರುತ್ತೇನೆಂಬ ಹಠಕ್ಕೆ ಅವರು ಬಿದ್ದಂತೆ ಕಾಣುತ್ತಿದೆ.**




# ರಾಜ್ಯ ರಾಜಕೀಯದಲ್ಲಿ ಕಿಚ್ಚು ಹಚ್ಚಿದ ಜಾತಿಗಣತಿ

✍ ಬಿ.ಎಂ. ಲವಕುಮಾರ್

ಜಾತಿಗಣತಿ ಸಮೀಕ್ಷೆ ಸೋರಿಕೆಯಾದಲ್ಲಿಂದ ಇಲ್ಲಿವರೆಗೆ ನಾವೇ ಪ್ರಬಲರಾಗಿದ್ದೇವೆ ಎಂದು ಹೇಳಿಕೊಂಡು ಬಂದಿದ್ದ ಲಿಂಗಾಯಿತ ಮತ್ತು ಒಕ್ಕಲಿಗರಿಗೆ ಈ ಜಾತಿಗಣತಿ ಬಹುದೊಡ್ಡ ಶಾಕ್ ನೀಡಿದೆ. ಜತೆಗೆ ಬಹುತೇಕ ಜಾತಿಗಳ ಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ಆದರೆ ಮುಸ್ಲಿಂ ಮತ್ತು ಇತರೆ ಹಿಂದುಳಿದ ವರ್ಗಗಳ ಸಂಖ್ಯೆಯನ್ನು ಹೆಚ್ಚಾಗಿ ತೋರಿಸಲಾಗಿದೆ. ಹೀಗಾಗಿ ಕೆಲವರು ಇದು ಅವೈಜ್ಞಾನಿಕ ಜಾತಿ ಗಣತಿ ಎಂಬ ವಾದವನ್ನು ಮಾಡುತ್ತಲೇ ಬಂದಿದ್ದಾರೆ.



ಕಳೆದ ಹತ್ತು ವರ್ಷಗಳ ಹಿಂದೆ ತಯಾರಾದ ಈ ಜಾತಿಗಣತಿಯನ್ನು ಇವತ್ತು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಅದಕ್ಕಿಂತ ಹೆಚ್ಚಾಗಿ ಮನೆಗಳ ಸರ್ವೆಯನ್ನೇ ಮಾಡದೆ ಹೇಗೆ ಜನಗಣತಿ ಮಾಡಿದ್ದಾರೆ ಎಂಬ ಪ್ರಶ್ನೆಗಳನ್ನು ಶ್ರೀಸಾಮಾನ್ಯನಿಂದ ರಾಜಕಾರಣಿಗಳ ತನಕ ಕೇಳುತ್ತಿದ್ದಾರೆ.



ಜಾತಿಗಣತಿಗೆ ವಿರೋಧಪಕ್ಷಗಳು ವಿರೋಧ ಮಾಡುವುದು ಸಹಜ ಆದರೆ ಸ್ವಪಕ್ಷದ ಸಚಿವರು ಮತ್ತು ಶಾಸಕರೇ ಗರಂ ಆಗಿದ್ದಾರೆ. ಈಗಾಗಲೇ ಏಪ್ರಿಲ್ 17ರಂದು ಕರೆಯಲಾಗಿದ್ದ ಸಚಿವ ಸಂಪುಟದಲ್ಲಿಯೂ ಯಾವುದೇ ರೀತಿಯಲ್ಲಿ ಒಮ್ಮತಕ್ಕೆ ಬರಲು ಸಾಧ್ಯವಾಗದೆ ಸಭೆ ಮೊಟಕುಗೊಂಡಿದೆ. ಸಂಪುಟ ಸಭೆಯ ಬಳಿಕ ಜಾತಿ ಗಣತಿ ವಿಚಾರವಾಗಿ ಕಾಂಗ್ರೆಸ್‌ನಲ್ಲೇ ಭಿನ್ನ ಅಭಿಪ್ರಾಯಗಳಿವೆ ಎನ್ನುವುದು ಜಗಜ್ಜಾಹೀರಾಗಿದೆ.

ಜಾತಿ ಗಣತಿ ಕುರಿತಾಗಿ ಅಹಿಂದ ವರ್ಗದ ಸಚಿವರು, ಶಾಸಕರು ಸಿದ್ದರಾಮಯ್ಯ ಅವರಿಗೆ ಬೆಂಗಾವಲಾಗಿ ನಿಂತಿದ್ದಾರೆ ಅವರ ಸಾಲಿನಲ್ಲಿ ಪ್ರಭಾವಿ ನಾಯಕರಾದ ಡಾ. ಜಿ ಪರಮೇಶ್ವರ್, ಎಚ್.ಸಿ. ಮಹದೇವಪ್ಪ ಭೈರತಿ ಸುರೇಶ್, ಶಿವರಾಜ್ ತಂಗಡಗಿ, ಪ್ರಿಯಾಂಕ್ ಖರ್ಗೆ ಸೇರಿದಂತೆ ಬಹುತೇಕ ಸಚಿವರು ಶಾಸಕರು ಇದ್ದಾರೆ. ಆದರೆ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಹಿನ್ನೆಲೆಯ ಸಚಿವರು ಮತ್ತು ಶಾಸಕರು ವಿರೋಧವಾಗಿದ್ದು, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ವರದಿಗೆ ನೇರವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ.

ಇದ'ರ' ಜತೆಗೆ ಒಕ್ಕಲಿಗ ಸಮಾಜವೂ ತಿರುಗಿ ಬಿದ್ದಿದೆ. ಹೀಗಾಗಿ ಒಕ್ಕಲಿಗ ನಾಯಕ ಡಿ.ಕೆ. ಶಿವಕುಮಾರ್ ಅವರು ಅತ್ತ ಸರ್ಕಾರವನ್ನು ಇತ್ತ ಸಮಾಜವನ್ನು ಬಿಡಲಾಗದ ಪರಿಸ್ಥಿತಿಗೆ ಬಂದು ತಲುಪಿದ್ದಾರೆ. ಹೀಗಾಗಿ ಅವರು ಎಚ್ಚರಿಕೆಯ ಹೆಜ್ಜೆ ಇಡಬೇಕಾದ ಪರಿಸ್ಥಿತಿಯಲ್ಲಿದ್ದಾರೆ. ದಿನಬೆಳಗಾದರೆ ವಿರೋಧ ಪಕ್ಷಗಳಾದ ಜೆಡಿಎಸ್ ಮತ್ತು ಬಿಜೆಪಿ ಕೂಡ ಟೀಕೆಗಳನ್ನು ಮಾಡುತ್ತಲೇ ಬರುತ್ತಿದೆ. ಎಲ್ಲರೂ ಅವೈಜ್ಞಾನಿಕವಾಗಿದೆ. ಹೀಗಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂಬ ಮಾತನ್ನು ಹೇಳುತ್ತಾ ಬರುತ್ತಿದ್ದಾರೆ.

ಸದ್ಯ ಜಾತಿ ರಾಜಕೀಯ ಜೋರಾಗಿ ಸದ್ದು ಮಾಡುತ್ತಿದ್ದು, ಪಕ್ಷದಲ್ಲಿ ಅಸಮಾಧಾನ ಸ್ಫೋಟ ಗೊಂಡಿರುವ ಹಿನ್ನಲೆಯಲ್ಲಿ ಸಿದ್ದರಾಮಯ್ಯ ಹೈಕಮಾಂಡ್ ನತ್ತ ಮುಖ ಮಾಡಿದ್ದಾರೆ. ಜಾತಿ ಗಣತಿ ವಿಚಾರದಲ್ಲಿ ರಾಹುಲ್ ಗಾಂಧಿಗೆ ಒಲವಿದೆ ಹೀಗಾಗಿ ರಾಹುಲ್ ಗಾಂಧಿ ಅವರು ಸೂಚನೆ ನೀಡಿದರೆ ಪಕ್ಷದಲ್ಲಿ ಜಾತಿಗಣತಿ ಬಗ್ಗೆ ಅಪಸ್ವರ ಎತ್ತುತ್ತಿರುವವರು ತಣ್ಣಗಾಗುತ್ತಾರೆ ಎಂಬುದು ಸಿದ್ದರಾಮಯ್ಯ ಅವರ ಆಲೋಚನೆಯಾಗಿದೆ.

ಕಳೆದ ಸಂಪುಟ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸುತ್ತಿರುವ ಸಚಿವರಿಗೆ ಲಿಖಿತವಾಗಿ ಬರೆದುಕೊಡುವಂತೆ ಕೇಳಿರುವ ಉದ್ದೇಶವೂ ಅದೇ ಆಗಿದೆ. ಏಕೆಂದರೆ ಲಿಖಿತ ಹೇಳಿಕೆಯನ್ನು ಹೈಕಮಾಂಡ್ ಗೆ ಕಳುಹಿಸಿ ಹೈಕಮಾಂಡ್ ಮೂಲಕವೇ ಅವರನ್ನು ತೆಪ್ಪಗಾಗಿಸುವ ಪ್ರಯತ್ನಗಳು ನಡೆಯುತ್ತಿವೆ. ಈಗಿನ ಜಾತಿಗಣತಿ ಪ್ರಕಾರ ಅಹಿಂದ ಗಟ್ಟಿಯಾಗಿದೆ. ಆದುದರಿಂದ ಸಿದ್ದರಾಮಯ್ಯ ಅವರು ಅಹಿಂದ ನಾಯಕನಾಗಿ ಒಪ್ಪಿಕೊಳ್ಳಲು ಸಮುದಾಯ ಒಲವಿದೆ. ಸಿಎಂ ಅಧಿಕಾರ ಹಸ್ತಾಂತರದ ಸುದ್ದಿಗಳು ಮುನ್ನಲೆಯಲ್ಲಿರುವಾಗಲೇ ಜಾತಿಗಣತಿ ವಿವಾದ ಹುಟ್ಟಿಕೊಂಡಿರುವುದು ಒಂದು ಹಂತದಲ್ಲಿ ಸಿದ್ದರಾಮಯ್ಯರವರಿಗೆ ಅನುಕೂಲವಾಗುತ್ತಾ? ಎಂಬ ಸಂಶಯ ಎದ್ದಿದೆ.

ಸದ್ಯ ಅಧಿಕಾರದ ಹಸ್ತಾಂತರದ ವಿಚಾರ ಬದಿಗೆ ಸರಿದು ಇದೀಗ ಜಾತಿಗಣತಿ ವಿಚಾರ ಮುನ್ನಲೆಗೆ ಬಂದಿದೆ. ಇಲ್ಲಿ ಇಕ್ಕಟ್ಟಿನಲ್ಲಿ ಸಿಕ್ಕಿರೋದು ಸಿದ್ದರಾಮಯ್ಯ ಎನ್ನುವುದಕ್ಕಿಂತ ಹೆಚ್ಚಾಗಿ ಡಿ.ಕೆ. ಶಿವಕುಮಾರ್ ಎಂದರೆ ತಪ್ಪಾಗಲಾರದು. ಅತ್ತ ಪಕ್ಷವನ್ನು ಬಿಡುವಂತಿಲ್ಲ, ಇತ್ತ ಸಮುದಾಯದ ವಿರುದ್ದವೂ ಹೋಗುವಂತಿಲ್ಲ ಎಂಬಂತಾಗಿದೆ. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬ ಕಾರಣಕ್ಕೆ ಒಕ್ಕಲಿಗರು ಜೆಡಿಎಸ್ ಬಿಟ್ಟು ಕಾಂಗ್ರೆಸ್‌ನ್ನು ಬೆಂಬಲಿಸಿದ್ದರು. ಅತ್ತ ಬಿಜೆಪಿಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಅನ್ಯಾಯವಾಯಿತು ಎಂಬ ಆಕ್ರೋಶದಿಂದ ಬಿಜೆಪಿಯನ್ನು ಬಿಟ್ಟು ಕಾಂಗ್ರೆಸ್‌ನ್ನು ಲಿಂಗಾಯಿತರು ಬೆಂಬಲಿಸಿದ್ದರು. ಆದರೆ ಇದೀಗ ಎರಡು ಸಮುದಾಯದವರು ಜಾತಿಗಣತಿಯಲ್ಲಿ ನಮಗೆ ಅನ್ಯಾಯವಾಗಿದೆ ಎಂದು ಆಕ್ರೋಶವನ್ನು ಹೊರ ಹಾಕುತ್ತಿದ್ದಾರೆ.



ಈ ಎರಡು ಸಮುದಾಯದಿಂದ ಬಂದಿರುವ ಸಚಿವರು ಮತ್ತು ಶಾಸಕರು ಸಮುದಾಯದ ನಾಯಕರ ಮಾತನ್ನು ಕೇಳದೆ ಸರ್ಕಾರದ ಪರವಾಗಿ ಹೋದರೆ ಮುಂದೆ ತೊಂದರೆ ತಪ್ಪಿದಲ್ಲ, ಹಾಗೆಂದು ಇಡೀ ಜಾತಿಗಣತಿಯನ್ನು ವಿರೋಧ ಮಾಡಿದರೆ ಇತರೆ ಜನಾಂಗದವರ ಕೆಂಗಣ್ಣಿಗೆ ಬೀಳಬೇಕಾಗುತ್ತದೆ. ಒಟ್ಟಾರೆ ಜಾತಿಗಣತಿ ವರದಿ ರಾಜಕಾರಣಿಗಳಿಗೆ ಸಂಕಷ್ಟವನ್ನು ತಂದೊಡ್ಡಿದೆ. ಹಾಗಾಗಿ ಜಾತಿ ಗಣತಿ ಜಾರಿಯಾದರೂ ಕಷ್ಟ... ಆಗದಿದ್ದರೂ ಕಷ್ಟ ಎಂಬ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಸಿಎಂ ಸಿದ್ದರಾಮಯ್ಯ ಇದನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ಮಾತ್ರ ಕುತೂಹಲಕಾರಿಯಾಗಿದೆ.

ಇನ್ನು ಸರ್ಕಾರದಲ್ಲಿ ಸೋರಿಕೆಯಾಗಿದೆ ಎಂದು ಹೇಳಲಾಗುತ್ತಿರುವ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಸಮೀಕ್ಷೆ 2015ರ ಜಾತಿ ದತ್ತಾಂಶವನ್ನು ನೋಡುವುದಾದರೆ, ಕರ್ನಾಟಕದಲ್ಲಿ ಮುಸಲ್ಮಾನರು ಏಕೈಕ ಅತಿದೊಡ್ಡ ಸಮುದಾಯವಾಗಿದ್ದು 76,76,247 (ಶೇ. 12.83ರಷ್ಟು) ಜನಸಂಖ್ಯೆಯನ್ನು ಹೊಂದಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ಈ ದತ್ತಾಂಶವು ಮುಸ್ಲಿಮರನ್ನು ಏಕೈಕ ಅತಿದೊಡ್ಡ ಸಮುದಾಯವೆಂದು ತೋರಿಸಿದರೆ ಮತ್ತೊಂದೆಡೆ ಸಂಯೋಜಿಸಲಾದ ದತ್ತಾಂಶವು ಪರಿಶಿಷ್ಟ ಜಾತಿಗಳನ್ನು ಏಕೈಕ ಅತಿದೊಡ್ಡ ಸಮುದಾಯವೆಂದು ತೋರಿಸಿದೆ ಇದೆರಡು ಸಮುದಾಯವು ಸಿದ್ದರಾಮಯ್ಯ ಅವರ ಬೆನ್ನಿಗೆ ನಿಂತಿದ್ದು, ಹೀಗಾಗಿಯೇ ಸಿದ್ದರಾಮಯ್ಯ ಈ ಸಮೀಕ್ಷೆಯ ಜಾರಿಗೆ ಆತುರತೆ ತೋರುತ್ತಿದ್ದಾರೆ ಎನ್ನಲಾಗುತ್ತಿದೆ.

ಇದರಾಚೆಗೆ ಒಕ್ಕಲಿಗ ಸಮುದಾಯವು ಜನಸಂಖ್ಯಾ ಪಟ್ಟಿಯಲ್ಲಿ 50,65,642 (8.47ರಷ್ಟು) ದೊಂದಿಗೆ ಎರಡನೇ ಸ್ಥಾನದಲ್ಲಿದೆ, ಕುರುಬರು 44,11,758 (7.38ರಷ್ಟು), ಎಸ್ಸಿ ಎಡ 35,99,895 (6.02ರಷ್ಟು), ಎಸ್ಸಿ ಬಲ 34,98,188 (5.85ರಷ್ಟು) ಮತ್ತು ಎಸ್ಟಿ ವಾಲ್ಮೀಕಿ-ನಾಯಕ 30,31,656 (5.07ರಷ್ಟು) ದೊಂದಿಗೆ ನಂತರದ ಸ್ಥಾನದಲ್ಲಿದೆ. ರಾಜ್ಯದ ಪ್ರಬಲ ಲಿಂಗಾಯತ ಸಮುದಾಯ 30,14,696 (5.04ರಷ್ಟು), ನಂತರ ಎಸ್ಸಿ (ಇತರರು) 19,82,011 (3.31ರಷ್ಟು) ಮತ್ತು ವೀರಶೈವ-ಲಿಂಗಾಯತರು 17,88,279 (2.99ರಷ್ಟು) ಇರುವುದು ಬೆಳಕಿಗೆ ಬಂದಿದೆ.



ಕುರುಹಿನಶೆಟ್ಟಿ ಲಿಂಗಾಯತ ಸಮುದಾಯ 8,325 (0.01ರಷ್ಟು), ಗಾಣಿಗ ಲಿಂಗಾಯತರು 23,483 (0.04ರಷ್ಟು), ಬೇಡ ಜಂಗಮ ಲಿಂಗಾಯತರು 24,127 (0.04ರಷ್ಟು), ಲಾಲಗೊಂಡ ಲಿಂಗಾಯತರು 29,280 (0.05ರಷ್ಟು) 890 ರೆಡ್ಡಿಗಳು ಜಂಗಮ ಲಿಂಗಾಯತರು 94,282 (0.16ರಷ್ಟು), ನೊಣಬ ಲಿಂಗಾಯತರು 1,61,168 (0.27ರಷ್ಟು), ಸದರ್ ಲಿಂಗಾಯತರು 2,55,456 (0.43ರಷ್ಟು) ಮತ್ತು

☞ 5

# ಮಾಜಿ ಪೊಲೀಸ್ ಮಹಾ ನಿರ್ದೇಶಕ ಓಂಪ್ರಕಾಶ್ ಪತ್ನಿಯಿಂದಲೇ ಕಗ್ಗೊಲೆ!


ನಿವೃತ್ತ ಡಿಜಿಪಿ ಓಂಪ್ರಕಾಶ್

ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಓಂಪ್ರಕಾಶ್ (68) ಅವರು ಹತ್ಯೆಯಾಗಿರುವ ಭೀಕರ ಘಟನೆ ನಡೆದು ಹೋಗಿದೆ! ದಿನಾಂಕ 20-04-2025ರ ಸಾಯಂಕಾಲ ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್ ನಿವಾಸದಲ್ಲಿ ಓಂಪ್ರಕಾಶ್ ರಕ್ತದ ಮಡುವಿನಲ್ಲಿ ಶವವಾಗಿ ಬಿದ್ದಿದ್ದರು. ನಿವೃತ್ತ ಡಿಜಿಪಿ ಮತ್ತು ಐಜಿಪಿ ಓಂಪ್ರಕಾಶ್ ಅವರನ್ನು ಪತ್ನಿ ಪಲ್ಲವಿಯವರೇ ಕೊಲೆ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಈ ಪ್ರಕರಣ ಸಂಬಂಧ ಹೆಚ್ ಎಸ್‌ಆರ್ ಪೊಲೀಸರು ಓಂಪ್ರಕಾಶ್ ಪತ್ನಿ ಪಲ್ಲವಿ ಮತ್ತು ಪುತ್ರಿ ಕೃತಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.


ಸವದ ಮುಂದೆ ಕುಟುಂಬಸ್ಥರ ಆಕ್ರಂದನ

**ಚಾಕುವಿನಿಂದ 8-10 ಬಾರಿ ಇರಿದು ಕೊಲೆ!**

ಪ್ರಾಥಮಿಕ ಹಂತದ ತನಿಖೆ ವೇಳೆ, ಪತಿ ಓಂಪ್ರಕಾಶ್ ಅವರನ್ನು ಪತ್ನಿ ಪಲ್ಲವಿಯವರು 8 ರಿಂದ10 ಬಾರಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಚಾಕು ಇರಿತದಿಂದ ಓಂಪ್ರಕಾಶ್ ಅವರ ಎದೆ, ಹೊಟ್ಟೆ ಹಾಗೂ ಕೈ ಭಾಗಕ್ಕೆ ಗಂಭೀರವಾದ ಗಾಯವಾಗಿ ತೀವ್ರ ರಕ್ತಸ್ರಾವವಾಗಿದೆ. ಮನೆಯ ತುಂಬ ರಕ್ತ ಹರಿದಿದೆ. ಓಂಪ್ರಕಾಶ್ ಅವರು ಸುಮಾರು 15-20 ನಿಮಿಷಗಳ ಕಾಲ ರಕ್ತದ ಮಡುವಿನಲ್ಲಿ ಒದ್ದಾಡಿ ಪ್ರಾಣ ಬಿಟ್ಟಿದ್ದಾರೆ. ಪತಿಯ ನರಳಾಟವನ್ನು ಪತ್ನಿ ಪಲ್ಲವಿ ನೋಡುತ್ತಾ ನಿಂತಿದ್ದರು ಎಂಬ ಮಾಹಿತಿ ದೊರೆತಿದೆ. ಕೊಲೆ ಮಾಡಿದ ನಂತರ ಪಲ್ಲವಿಯವರು ಹೆಚ್‌ಎಸ್‌ಆರ್ ಲೇಔಟ್ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಇನ್ನು, ಪತಿ ಓಂಪ್ರಕಾಶ್ ಮೃತಪಟ್ಟ ಬಳಿಕ, ಪತ್ನಿ ಪಲ್ಲವಿಯವರು ಮತ್ತೋರ್ವ ನಿವೃತ್ತ ಡಿಜಿಪಿ ಮತ್ತು ಐಜಿಪಿಯವರ ಪತ್ನಿಗೆ ವಿಡಿಯೋ ಕರೆ ಮಾಡಿ, **'I have finished monster'** ಎಂದಿದ್ದಾರಂತೆ!

**ಆಸ್ತಿ ವಿಚಾರಕ್ಕೆ ನಡೀತಾ ಕೊಲೆ?**

ಇನ್ನು, ಓಂಪ್ರಕಾಶ್ ಅವರನ್ನು ಕೊಲೆ ಮಾಡಲು ಕಾರಣಗಳೇನು? ಯಾವ ಕಾರಣಕ್ಕಾಗಿ ಕೊಲೆ ಮಾಡಲಾಗಿದೆ? ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ನಡುವೆ ಆಸ್ತಿ ವಿಚಾರಕ್ಕೆ ಕೊಲೆಯಾಗಿದೆ ಎಂಬ ಅನುಮಾನವೂ ವ್ಯಕ್ತವಾಗಿದೆ. ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂಪ್ರಕಾಶ್ ಅವರು ದಾಂಡೇಲಿಯಲ್ಲಿ ಆಸ್ತಿ ಹೊಂದಿದ್ದರು ಎನ್ನಲಾಗಿದೆ.


ಘಟನಾ ಸ್ಥಳದಲ್ಲಿ ಸಿಪಿ ದಯಾನಂದ್, ಡಿಜಿಪಿ ಅಲೋಕ್ ಮೋಹನ್

ಈ ಆಸ್ತಿಯನ್ನು ಓಂಪ್ರಕಾಶ್ ಅವರು ತಮ್ಮ ತಂಗಿಯ ಹೆಸರಿಗೆ ಮಾಡಿದ್ದರು ಎಂದು ತಿಳಿದು ಬಂದಿದೆ. ತಂಗಿ ಹೆಸರಿನಲ್ಲಿ ಆಸ್ತಿ ಮಾಡಿದ್ದಕ್ಕೆ ಹಲವು ದಿನಗಳಿಂದ ಓಂಪ್ರಕಾಶ್ ಮತ್ತು ಅವರ ಪತ್ನಿ ಪಲ್ಲವಿ ನಡುವೆ ಗಲಾಟೆ ನಡೆಯುತ್ತಿತ್ತು ಎಂದು ಹೇಳಲಾಗುತ್ತಿದೆ. ಇನ್ನು, ತಂಗಿ ವಿಚಾರವಾಗಿ ಮಾತನಾಡಬೇಡ ಅಂತ ಪತ್ನಿ ಪಲ್ಲವಿ ಅವರಿಗೆ ಓಂಪ್ರಕಾಶ್ ವಾರ್ನ್ ಮಾಡಿದ್ದರಂತೆ. ಈ ವಿಚಾರಕ್ಕೆ ಕೊಲೆಯಾಗಿದೆ ಎಂದು ಹೇಳಲಾಗುತ್ತಿದೆ.

ಓಂಪ್ರಕಾಶ್ ಅವರಿಗೆ ಸೇರಿದ ಎರಡು ಮನೆ ಬೆಂಗಳೂರಿನಲ್ಲಿ ಇವೆ. ಕಾವೇರಿ ಜಂಕ್ಷನ್‌ನ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಒಂದು ಫ್ಲಾಟ್ ಹಾಗೂ ಹೆಚ್ ಎಸ್‌ಆರ್ ಲೇಔಟ್‌ನ ಐಪಿಎಸ್ ಕ್ವಾಟ್ರಸ್‌ನಲ್ಲಿ ಮೂರು ಅಂತಸ್ತಿನ ಒಂದು ಮನೆ ಇದೆ. ಮನೆಯಲ್ಲಿ ಗಲಾಟೆ ಆದಾಗ ಓಂಪ್ರಕಾಶ್ ಅವರು ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದರು ಎಂಬ ಮಾಹಿತಿ ದೊರೆತಿದೆ.




ಐನಾತಿ ಅಮ್ಮ - ಮಗಳು

**ಕೌಟುಂಬಿಕ ಕಲಹಕ್ಕೆ ಕೊಲೆ?**

ಮೂರು ದಿನಗಳ ಹಿಂದೆ ಐಪಿಎಸ್ ಫ್ಯಾಮಿಲಿ ವಾಟ್ಸಾಪ್ ಗ್ರೂಪ್‌ನಲ್ಲಿ ಪತ್ನಿ ಪಲ್ಲವಿಯವರು, ನನ್ನ ಪತಿ ನನಗೆ, ಮಗಳಿಗೆ ತುಂಬಾ ಚಿತ್ರಹಿಂಸೆ ಕೊಡುತ್ತಿದ್ದಾರೆ. ಮನೆಯಲ್ಲಿ ನನ್ನ ಪತಿ ಗನ್ ಹಿಡಿದುಕೊಂಡು ಓಡಾಡುತ್ತಿದ್ದಾರೆ. ಶೂಟ್ ಮಾಡಿ ಕೊಲೆ ಮಾಡುತ್ತೇನೆ ಎಂದು ಭಯಪಡಿಸುತ್ತಿದ್ದಾರೆ. ಹೀಗಾಗಿ, ಪತಿ ವಿರುದ್ಧ ಸುಮೊಟೋ ಕೇಸ್ ದಾಖಲಿಸುವಂತೆ


ಅಮ್ಮ - ಮಗಳು ಪೊಲೀಸ್ ವಶದಲ್ಲಿ

ಪತ್ನಿ ಪಲ್ಲವಿ ಮೆಸೇಜ್ ಮಾಡಿದ್ದರಂತೆ. ಕಾನೂನು ಪಾಲಕರು ಈ ಬಗ್ಗೆ ಗಂಭೀರ ಕ್ರಮ ಜರುಗಿಸಿದ್ದರೆ ಓಂ ಅವರು ಸಾಯುತ್ತಿರಲಿಲ್ಲ, ಅವರ ಪತ್ನಿ ಪಲ್ಲವಿ ಕೂಡ ಜೈಲು ಪಾಲಾಗುತ್ತಿರಲಿಲ್ಲ, ಅಲ್ವೇ!

**ಎಸಿಪಿ ವಾಸುದೇವ್ ನೇತೃತ್ವದಲ್ಲಿ ತನಿಖೆ...**

ಅಂದಹಾಗೆ, ಹೆಚ್ ಎಸ್ ಆರ್

☞ 7

## ಕಣ್ಣಿಗೆ ಖಾರದ ಪುಡಿ ಎರಚಿ ನೆಲಕ್ಕೆ ಎಣ್ಣೆ ಸುರಿದರು...

ಮಾಜಿ ಡಿಜಿಪಿ ಮತ್ತು ಐಜಿಪಿ ಓಂಪ್ರಕಾಶ್ ಕೊಲೆ ಪ್ರಕರಣ ಸಂಬಂಧ ಪೊಲೀಸ್ ವಿಚಾರಣೆ ವೇಳೆ, ಓಂಪ್ರಕಾಶ್ ಅವರ ಪತ್ನಿ ಪಲ್ಲವಿ ಅವರು ಗಂಡನ ಕೊಲೆ ರಹಸ್ಯವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಕಳೆದ ಒಂದು ವಾರದಿಂದ ಮನೆಯಲ್ಲಿ ಜಗಳ ನಡೆಯುತ್ತಿತ್ತು. ಪದೇ ಪದೇ ಗನ್ ತಂದು ನನಗೆ ಮತ್ತು ನನ್ನ ಮಗಳಿಗೆ ಶೂಟ್ ಮಾಡೋದಾಗಿ ಬೆದರಿಕೆ ಹಾಕುತ್ತಿದ್ದರು.... ಇದರಿಂದ ಮನೆಯಲ್ಲಿ ನೆಮ್ಮದಿಯೇ ಇಲ್ಲದಂತಾಗಿತ್ತು. ನಾನು ಮತ್ತು ಮಗಳು ಇವರ ಕಾಟದಿಂದ ತುಂಬಾ ಬೇಸತ್ತು ಹೋಗಿದ್ದೆವು. ಅದೇ ರೀತಿ ಇಂದು ಬೆಳಗ್ಗೆಯಿಂದಲೂ ಬೇರೆ ಬೇರೆ ವಿಚಾರಕ್ಕೆ ಮನೆಯಲ್ಲಿ ಜಗಳ ಶುರುವಾಗಿತ್ತು... ಮೊನ್ನೆ ಮಧ್ಯಾಹ್ನ ಜಗಳ ವಿಕೋಪಕ್ಕೆ ಹೋದಾಗ ನಮ್ಮನ್ನೇ ಕೊಲೆ ಮಾಡಲು ಗಂಡ ಓಂಪ್ರಕಾಶ್ ಪ್ರಯತ್ನ ಮಾಡಿದರು... ಆಗ ಅದರಿಂದ ತಪ್ಪಿಸಿಕೊಳ್ಳಲು ತುಂಬಾ ಪರದಾಡಿದ್ದೆವು...

ನಮ್ಮನ್ನು ಉಳಿಸಿಕೊಳ್ಳಲು ನಾವು ಹೋರಾಟ ಮಾಡಿದ್ದೀವಿ. ನಾವು ಬದುಕುಳಿಯಬೇಕೆಂದರೆ ಅವರನ್ನೇ ಕೊಲೆ ಮಾಡುವುದು ಉತ್ತಮ ಎಂಬ ತೀರ್ಮಾನಕ್ಕೆ ಬಂದೆವು... ನಂತರ, ಅವರ ಮುಖದ ಮೇಲೆ ಖಾರದ ಪುಡಿ ಎರಚಿ ಅವರು ಓಡಾಡಲು ಆಗದಂತೆ ಅಡುಗೆ ಎಣ್ಣೆಯನ್ನು ಸುರಿಯಲಾಯಿತು... ಬಳಿಕ ಕೈ-ಕಾಲು ಕಟ್ಟಿ ಅಡುಗೆ ಮನೆಯಲ್ಲಿದ್ದ ಚಾಕುವಿನಿಂದ ಚುಚ್ಚಲಾಯಿತು ಎಂದು ಪಲ್ಲವಿ ಸ್ವತಃ ಹೇಳಿ ತಪ್ಪನ್ನು ಒಪ್ಪಿಕೊಂಡಿದ್ದಾರೆಂದು ತಿಳಿದುಬಂದಿದೆ!

ಈ ನಡುವೆ ಓಂಪ್ರಕಾಶ್ ಅವರ ಪತ್ನಿ ಪಲ್ಲವಿ ಅವರು ಕಳೆದ 12 ವರ್ಷಗಳಿಂದ ಸ್ಕಿಜೋಫ್ರೇನಿಯಾ (ಭ್ರಮೆ ಕಾಯಿಲೆ) ಎಂಬ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾರೆನ್ನಲಾಗುತ್ತಿದ್ದು, ಇದಕ್ಕಾಗಿ ಚಿಕಿತ್ಸೆ ಕೂಡ ಪಡೆಯುತ್ತಿದ್ದರು ಎಂದು ತಿಳಿದುಬಂದಿದೆ. ಇದೇ ಕಾರಣಕ್ಕೇ ಪತಿ ಮೇಲೆ ಇಲ್ಲಸಲ್ಲದ ಊಹೆ ಮಾಡಿಕೊಂಡು ಜಗಳ ಮಾಡುತ್ತಿದ್ದರು, ಗನ್ ಹಿಡಿದು ಹೆದರಿಸುತ್ತಿದ್ದರು ಎಂದು ಸಂಬಂಧಿಕರ ಬಳಿ ಓಂಪ್ರಕಾಶ್ ಅವರು ದೂರುತ್ತಿದ್ದರು ಎಂದು ಹೇಳಲಾಗುತ್ತಿದೆ.

ಅಂದಹಾಗೆ,ಆಸ್ತಿ ವಿವಾದ ಸಂಬಂಧ ಕೆಲವು ತಿಂಗಳ ಹಿಂದೆ ಪಲ್ಲವಿ ಅವರು ಹೆಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಲು ತೆರಳಿದ್ದು, ಅಲ್ಲಿನ ಪೊಲೀಸರು ದೂರು ಸ್ವೀಕರಿಸಲು ನಿರಾಕರಿಸಿದಾಗ ಪೊಲೀಸ್ ಠಾಣೆಯ ಮುಂದೆ 'ಧರಣಿ' ನಡೆಸಿದ್ದರು ಎಂದು ತಿಳಿದು ಬಂದಿದೆ!! ☯


ಓಂಪ್ರಕಾಶ್ ಅವರ ಮಗ ಕಾರ್ತಿಕೇಶ್

## ಸರ್ಕಾರಿ ಗೋಮಾಳದಲ್ಲಿ ಮಗನ ಕಲ್ಲು ಕ್ವಾರಿ ಬಿಸಿನೆಸ್....

ಓಂಪ್ರಕಾಶ್ ಅವರು ಪೊಲೀಸ್ ಮಹಾ ನಿರ್ದೇಶಕರರಾಗಿದ್ದ ಸಂದರ್ಭದಲ್ಲಿಯೇ ಅವರ ಕುಟುಂಬದ ಒಳ ಜಗಳಗಳು ಹಾಗೂ ಮಗ ಕಾರ್ತಿಕೇಶ್ ನ ಅಕ್ರಮ ಕ್ವಾರಿ ದಂಧೆ ಬಗ್ಗೆ ಸುದ್ದಿ ಸ್ಫೋಟವಾಗಿತ್ತು. ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನಲ್ಲಿ ಅಶ್ವಥ್ ಎಂಬ ವ್ಯಕ್ತಿ ಸರ್ಕಾರಿ ಗೋಮಾಳದಲ್ಲಿ ಅಕ್ರಮ ಕ್ವಾರಿ ನಡೆಸುತ್ತಿದ್ದ. ಅದಕ್ಕೆ ಓಂಪ್ರಕಾಶ್ ಮಗ ಕಾರ್ತಿಕೇಶ್ ಕೂಡ ಪಾಟ್ನರ್ ಆಗಿದ್ದ. ಅಶ್ವಥ್‌ನ ತಂದೆ ನರಸಿಂಹ ಮೂರ್ತಿ ಪೊಲೀಸ್ ಇಲಾಖೆಯಲ್ಲಿ ಕ್ಲರ್ಕ್. ಒಮ್ಮೆ ಲೋಕಾಯುಕ್ತ ಪೊಲೀಸರು ಮೂರ್ತಿ ಮನೆ ಮೇಲೆ ರೇಡ್ ಹಾಕಿದ್ದು, ಕೋಟ್ಯಂತರ ಹಣ ಹಾಗೂ ದಾಖಲೆ ಪತ್ರಗಳು ಜಪ್ತಿ ಆಗಿ ದೊಡ್ಡ ಸುದ್ದಿ ಆಗಿತ್ತು! ☯


ಕುಟುಂಬದ ಜೊತೆ ಓಂಪ್ರಕಾಶ್

# ಕಾಶ್ಮೀರದಲ್ಲಿ ಮತ್ತೆ ಮುಸ್ಲಿಂ ಉಗ್ರರ ಅಟ್ಟಹಾಸ!

# ಹಿಂದೂ ಪ್ರವಾಸಿಗರ ಹುಡುಕಿ... ಹುಡುಕಿ ಗುಂಡಿಟ್ಟು ಕೊಂದರು!









ಜಮ್ಮು ಮತ್ತು ಕಾಶ್ಮೀರದ 'ಮಿನಿ ಸ್ವಿಟ್ಜರ್ ಲ್ಯಾಂಡ್' ಪಹಲ್ಗಾಮ್ ಬೈಸರನ್ ಕಣಿವೆ ಪ್ರದೇಶದಲ್ಲಿ ಹಿಂದೂ ಪ್ರವಾಸಿಗರ ಮಾರಣ ಹೋಮ ನಡೆದು ಹೋಗಿದೆ!

ಪಾಕಿಸ್ತಾನ್ ಮೂಲದ ಸೈತಾನರು ಅರ್ಥಾತ್ 'ಲಷ್ಕರ್ ಎ ತೊಯ್ಬಾ' ಉಗ್ರರು ಕಾಶ್ಮೀರ ಕಣಿವೆಗಳಲ್ಲಿ ಬೇಸಿಗೆ ರಜೆ ಕಳೆಯಲು ಬಂದಿರುವ ಹಿಂದೂ ಪ್ರವಾಸಿಗರನ್ನು ಹುಡುಕಿ ಹುಡುಕಿ, ಪಾಯಿಂಟ್ ಬ್ಲಾಕ್ ನಲ್ಲಿ ಗುಂಡಿಟ್ಟು ಕೊಂದು ಅಟ್ಟಹಾಸ ಮೆರೆದಿದ್ದಾರೆ!




ಹಿಂದೂ ಗಂಡಸರ ಎದೆಗೆ ಗನ್ ಇಟ್ಟು, ಇಸ್ಲಾಂ ಪಠಿಸುವಂತೆ ಹೇಳಿ, ಪಠಣ ಮಾಡಲು ಸಾಧ್ಯವಾಗದಿದ್ದಾಗ ತಕ್ಷಣ ಗುಂಡು ಹೊಡೆದು ಕೊಲ್ಲಲಾಗಿದೆ. ಹೆಂಡತಿ ಮಕ್ಕಳ ಕಣ್ಣೆದುರೇ ಈ ಹತ್ಯಾಕಾಂಡ ನಡೆದಿದ್ದು, ಗಂಡನ... ತಂದೆಯ ಕಣ್ಣೆದುರೇ ಕಳೆದುಕೊಂಡವರ ಕಣ್ಣೀರು ಕಾಶ್ಮೀರ ಕಣಿವೆ ನೆಲಕ್ಕೆ ರಕ್ತ ಕಣ್ಣೀರು ಆಗಿ ಹರಿದಿದೆ!


ಇತ್ತೀಚಿನ ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಅತ್ಯಂತ ಭೀಕರ ಭಯೋತ್ಪಾದಕ ದಾಳಿಗಳಲ್ಲಿ ಇದೂ ಒಂದಾಗಿದ್ದು, ಈ ಘಟನೆಯಲ್ಲಿ ಇಬ್ಬರು ವಿದೇಶಿ ಪ್ರಜೆಗಳು ಸೇರಿದಂತೆ 29 ಜನರು ಮೃತಪಟ್ಟಿದ್ದಾರೆ.


ಇಂಡಿಯಾ ಟುಡೇ ವರದಿ ಮಾಡಿದಂತೆ, ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಲಷ್ಕರ್-ಎ-ತೊಯ್ಬಾ (LET) ಹಿರಿಯ ಕಮಾಂಡರ್/ಖಾಲಿದ್ ಎಂದೂ ಕರೆಯಲ್ಪಡುವ ಸೈಫುಲ್ಲಾ ಕಸೂರಿ ಈ ಹತ್ಯಾಕಾಂಡದ ಹಿಂದಿನ ಮಾಸ್ಟರ್ ಮೈಂಡ್ ಎಂದು ಗುಪ್ತಚರ ಸಂಸ್ಥೆಗಳು ತಿಳಿಸಿವೆ!

ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಮೂಲದ ಇತರ ಇಬ್ಬರು ಕಾರ್ಯಕರ್ತರು ಈ ದಾಳಿಯನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದು ತಿಳಿದು ಬಂದಿದೆ. ನಿಷೇಧಿತ ಎಲ್‌ಇಟಿಯ ಒಂದು ಭಾಗವಾದ 'ದಿ ರೆಸಿಸ್ಟೆನ್ಸ್ ಫ್ರಂಟ್' (TRF) ಸದಸ್ಯರು ಈ ದಾಳಿಯ ಹೊಣೆಯನ್ನು ತಾವು ಹೊತ್ತಿದ್ದು, ನಿರಾಯುಧ ಪ್ರವಾಸಿಗರ ಗುಂಪನ್ನು ಗುರಿಯಾಗಿಸಿಕೊಂಡು ಮಂಗಳವಾರ ಮಧ್ಯಾಹ್ನ 2:30 ರ ಸುಮಾರಿಗೆ ದಾಳಿ ನಡೆಸಿದ್ದಾರೆ.

ಈ ಕ್ರೂರ ದಾಳಿಯು ದೇಶಾದ್ಯಂತ ಆಕ್ರೋಶ ಮತ್ತು ಶೋಕವನ್ನು ಹುಟ್ಟುಹಾಕಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೌದಿ ಅರೇಬಿಯಾಕ್ಕೆ ತೆರಳಿದ್ದು ತಮ್ಮ ರಾಜತಾಂತ್ರಿಕ ಭೇಟಿಯನ್ನು ಮೊಟಕುಗೊಳಿಸಿ ಬುಧವಾರ ಮುಂಜಾನೆ ದೆಹಲಿಗೆ ಮರಳಿ ಸಂಪುಟ ಸದಸ್ಯರ ತುರ್ತು ಸಭೆ ಕರೆದು ಈ ಬಗ್ಗೆ ಚರ್ಚಿಸಿದ್ದಾರೆ.








## ಸೈತಾನರ ಸರ್ವನಾಶ ಯಾವಾಗ ಮೋದಿಜಿ?

**ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಹಿಂದೂ ಪ್ರವಾಸಿಗರ ಮೇಲೆ ದಾಳಿ ನಡೆಸಿದ ಉಗ್ರರನ್ನು ಬೇಟೆಯಾಡುವುದಾಗಿ ಕೇಂದ್ರ, ಗೃಹ ಸಚಿವ ಅಮಿತ್ ಶಾ ಪ್ರತಿಜ್ಞೆ ಮಾಡಿದ್ದಾರೆ. ಅವರು ಮಂಗಳವಾರವೇ ಶ್ರೀನಗರಕ್ಕೆ ಮತ್ತು ಎಲ್ಲಾ ಭದ್ರತಾ ಪಡೆಗಳೊಂದಿಗೆ ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸುವುದಾಗಿ ತಿಳಿಸಿದ್ದಾರೆ... ಈ ಸಂದರ್ಭದಲ್ಲಿ ಭಾರತೀಯ 'ಹಿಂದೂ' ಪ್ರಜೆಗಳ ಒಕ್ಕೊರಲಿನ ಕೂಗು ಒಂದೇ, ಇನ್ನೂ ಯಾಕೆ ಸುಮ್ಮನಿದ್ದೀರಿ ಮೋದಿ ಜಿ...?!**



ಕಾಶ್ಮೀರ ಕಣಿವೆಯಲ್ಲಿ ಹಿಂದೂ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ನಡೆದ ಅತ್ಯಂತ ಭೀಕರ ದಾಳಿಯ ಬಗ್ಗೆ ದೇಶಾದ್ಯಂತ ಆಘಾತ ಮತ್ತು ಆಕ್ರೋಶ ವ್ಯಕ್ತವಾಗಿದ್ದು, ಇದರ ನಡುವೆ ಪ್ರಧಾನಿ ಮೋದಿ ಅವರು ಪ್ರವಾಸದಿಂದ ಹಿಂದಿರುಗಿದ ತಕ್ಷಣವೇ ಸಂಪುಟ ಸಭೆ ನಡೆಸಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ.

ಗುಪ್ತಚರ ಮೂಲಗಳ ಪ್ರಕಾರ, ಐದರಿಂದ ಆರು ಮಂದಿ ಉಗ್ರರು ದಾಳಿಯಲ್ಲಿ ಭಾಗಿಯಾಗಿದ್ದಾರೆ, ಇದರಲ್ಲಿ ಇತ್ತೀಚೆಗೆ ನಿಯಂತ್ರಣ ರೇಖೆ (LoC) ಆಚೆಯಿಂದ ಕಣಿವೆಗೆ ನುಸುಳಿದ ಹಲವರು ಸೇರಿದ್ದಾರೆ. ವಾಂಟೆಡ್ ಭಯೋತ್ಪಾದಕ ಮತ್ತು ಎಲ್‌ಇಟಿ ಸಂಸ್ಥಾಪಕ ಹಫೀಜ್ ಸಯೀದ್ ನ ನಿಕಟ ಸಹಚರ ಕಸೂರಿಯ ನೇರ ಕೈವಾಡವಿದ್ದು ಆತನ ಮುಂದಾಳತ್ವ ದಲ್ಲೇ ಈ ದಾಳಿಯನ್ನು ನಡೆಸಲಾಗಿದೆ ಎನ್ನಲಾಗಿದೆ.

ನಮ್ಮ ಭದ್ರತಾ ಪಡೆಗಳು ಪಹಲ್ಗಾಮ್ ಕಣಿವೆ ಪ್ರದೇಶ ಮತ್ತು ಸುತ್ತಮುತ್ತ ಬೃಹತ್ ಶೋಧ ಕಾರ್ಯಾಚರಣೆಯನ್ನು ಆರಂಭಿಸಿದ್ದು, ಹಿಂದೂ ಪ್ರವಾಸಿಗರನ್ನು ಕೊಂದಿರುವ ಸೈತಾನರನ್ನು ಪತ್ತೆ ಹಚ್ಚಲು ವೈಮಾನಿಕ ಕಣ್ಗಾವಲು ಮತ್ತು ಭೂ ಕಾರ್ಯಾಚರಣೆಗಳು ನಡೆಯುತ್ತಿವೆ.

**ಪುಲ್ವಾಮ ಅಟ್ಯಾಕ್!**

2019ರ ಪುಲ್ವಾಮ ದಾಳಿಯ ನಂತರ ಕಣಿವೆ ರಾಜ್ಯದಲ್ಲಿ ನಡೆದ ಅತ್ಯಂತ ಭೀಕರ ದಾಳಿ ಇದಾಗಿದ್ದು, ಮೃತಪಟ್ಟ 27 ಮಂದಿಯಲ್ಲಿ ಇಬ್ಬರು ವಿದೇಶಿಯರು ಸೇರಿದಂತೆ ದೇಶದ ವಿವಿಧ ರಾಜ್ಯಗಳ ಪ್ರವಾಸಿಗರು ಜೀವ ತೆತ್ತಿದ್ದಾರೆ. ಮತ್ತು ನಮ್ಮ ಕರ್ನಾಟಕ ರಾಜ್ಯದ ಇಬ್ಬರು ಬಲಿಯಾಗಿದ್ದಾರೆ. ಬೆಂಗಳೂರಿನ ಉದ್ಯಮಿ ಭರತ್ ಹಾಗೂ ಶಿವಮೊಗ್ಗದ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಮೃತ ದುರ್ದೈವಿಗಳು. 26/11 ಮುಂಬೈ ದಾಳಿಯ ರೂವಾರಿ ಉಗ್ರ 'ರಾಣಾ' ನನ್ನು ಅಮೇರಿಕ ಭಾರತಕ್ಕೆ ಹಸ್ತಾಂತರಿಸಿದ ಬೆನ್ನಲ್ಲಿಯೇ, ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಭಾರತಕ್ಕೆ ಪ್ರವಾಸ ಬಂದಿರುವ ಸಂದರ್ಭದಲ್ಲಿ ಈ ದಾಳಿ ನಡೆದಿರುವುದು ಗಮನಾರ್ಹ ಸಂಗತಿಯಾಗಿದೆ!

ಅಂದಹಾಗೆ, ಪುಲ್ವಾಮ ದಾಳಿ ಬಗ್ಗೆ ಗೊತ್ತಲ್ಲ....

ಇಸವಿ 2019 ರಲ್ಲಿ ಫೆಬ್ರವರಿ 14ರಂದು, ಜಮ್ಮುವಿನಿಂದ ಶ್ರೀನಗರಕ್ಕೆ 2,500ಕ್ಕಿಂತ ಹೆಚ್ಚು ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್ (ಸಿಆರ್‌ಪಿಎಫ್) ಸಿಬ್ಬಂದಿಗಳು 78 ವಾಹನಗಳಲ್ಲಿ ಪ್ರಯಾಣಿಸುತಿರುವಾಗ, ಮಧ್ಯಾಹ್ನ ಸುಮಾರು 3.15ಕ್ಕೆ ಅವಂತಿಪುರ ಬಳಿಯ ಲೆತ್ಪೊರದಲ್ಲಿ, ಭದ್ರತಾ ಸಿಬ್ಬಂದಿಯನ್ನು ಸಾಗಿಸುತಿದ್ದ ಬಸ್‌ಗೆ ಸ್ಫೋಟಕಗಳನ್ನು ಹೊಂದಿದ್ದ

☞ 5

# ಇಬ್ಬರು ಉಗ್ರರು ಮಟಾಷ್! ಮಾಸ್ಟರ್ ಮೈಂಡ್ ಗಾಗಿ ಹುಡುಕಾಟ!!

ಪಹಲ್ಗಾಮ್ ದಾಳಿಯ ಮಾಸ್ಟರ್ ಮೈಂಡ್ ಉಗ್ರ ಸೈಫುಲ್ಲಾ ಖಾಲಿದ್ ಎಂದು ತಿಳಿದು ಬಂದಿದ್ದು, ಆತನ ಹುಡುಕಾಟಕ್ಕೆ ಬೃಹತ್ ಮಿಲಿಟರಿ ಕಾರ್ಯಾಚರಣೆ ನಡೆದಿದೆ. ಈ ದಾಳಿಯಲ್ಲಿ ಎಲ್‌ಇಟಿಯ ಕಮಾಂಡರ್ ಸಹ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ. ಇಬ್ಬರು ಲಷ್ಕರ್ ಕಮಾಂಡರ್‌ಗಳು ಸಹ ಇದ್ದರು ಎಂದು ಹೇಳಲಾಗಿದೆ.

ಭಾರತ ದೇಶದಲ್ಲಿ ಮಹತ್ವದ ಬೆಳವಣಿಗೆ ಹಾಗೂ ಹೊಸ ಇತಿಹಾಸ ಸೃಷ್ಟಿಯಾಗಿರುವುದರಲ್ಲಿ ಕೇಂದ್ರ ಬಿಜೆಪಿ ಸರ್ಕಾರವು 2019 ರಲ್ಲಿ ಜಮ್ಮು ಮತ್ತು ಕಾಶ್ಮೀರದ 370ನೇ ವಿಧಿಯನ್ನು ರದ್ದುಪಡಿಸಿದ್ದು ಸಹ ಒಂದಾಗಿದೆ. ಇದಾದ ಮೇಲೆ ಜಮ್ಮು ಮತ್ತು ಕಾಶ್ಮೀರದಲ್ಲಿ ಲಷ್ಕರ್ ಎ ತೊಯ್ಬಾ ಬ್ರಾಂಚ್ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಸೃಷ್ಟಿಯಾಗಿದೆ! ಲಷ್ಕರ್-ಎ-ತೊಯ್ಬಾ (ಎಲ್‌ಇಟಿ)ಯ ಅಂಗ ಸಂಸ್ಥೆ ಇದಾಗಿದೆ.

ಕೇಂದ್ರ ಸರ್ಕಾರವು ಟಿಆರ್‌ಎಫ್ ಅನ್ನು ಪಾಕಿಸ್ತಾನ ಮೂಲದ ಎಲ್‌ಇಟಿಗೆ 'ಪ್ರಾಕ್ಸಿ' ಫ್ರಂಟ್ ಎಂದು ಹೇಳುತ್ತದೆ. ಕೇಂದ್ರ ಸರ್ಕಾರವು 2023ರಲ್ಲಿ ಈ ಉಗ್ರಗಾಮಿ ಸಂಘಟನೆಯನ್ನು ನಿಷೇಧಿಸಿದೆ. ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಕಾಶ್ಮೀರಿ ಪಂಡಿತರು, ವಲಸೆ ಕಾರ್ಮಿಕರು ಹಾಗೂ ಕಾಶ್ಮೀರದಲ್ಲಿ ಭದ್ರತಾ ಪಡೆಗಳು ಸೇರಿದಂತೆ ಇಲ್ಲಿನ ಸಾರ್ವಜನಿಕರ ಮೇಲೆ ನಡೆದಿರುವ ದಾಳಿಗಳಲ್ಲಿ ಟಿಆರ್‌ಎಫ್ ಪಾತ್ರವಿದೆ ಎಂದು ಹೇಳಲಾಗಿದೆ.

ಇದು ಭಯೋತ್ಪಾದಕ ಕೃತ್ಯ ನಡೆಸುವುದಕ್ಕೆ ಪಾಕಿಸ್ತಾನದ ಸಂಪೂರ್ಣ ಬೆಂಬಲವನ್ನು ಪಡೆಯುತ್ತಿತ್ತು ಹಾಗೂ ಪಾಕ್ ಸೇನಾಧಿಕಾರಿಗಳೊಂದಿಗೂ ಸಂಪರ್ಕದಲ್ಲಿತ್ತು ಎನ್ನಲಾಗಿದೆ. ಇದೀಗ ಭಾರತ ಸರ್ಕಾರವು ಉಗ್ರರ ವಿರುದ್ಧ ಹೈ ಅಲರ್ಟ್ ಘೋಷಿಸಿದ್ದು,

ಉಗ್ರರ ರೇಖಾಚಿತ್ರವನ್ನು ಬಿಡುಗಡೆ ಮಾಡಿದೆ. ಈ ಪೈಕಿ ಇಬ್ಬರನ್ನು ಈಗಾಗಲೇ ಬಾರಾಮುಲ್ಲಾದಲ್ಲಿ ಪತ್ತೆ ಹಚ್ಚಿ ಸದೆ ಬಡಿಯಲಾಗಿದ್ದು, ಮಾಸ್ಟರ್ ಮೈಂಡ್ ಖಾಲಿದ್ ನನ್ನು ಭೇಟೆಯಾಡಲಾಗುತ್ತಿದೆ ಎನ್ನಲಾಗಿದೆ!! ☯

4 ☞

ಮಾರುತಿ ಇಕೋ ಕಾರೊಂದು ಗುದ್ದಿ, ಬಾಂಬ್ ಸ್ಫೋಟಗೊಂಡು 76ನೇ ಬೆಟಾಲಿಯನ್‌ನ 40 ಮೀಸಲು ಪಡೆಯ ಯೋಧರು ಹುತಾತ್ಮರಾಗಿದ್ದರು!

ಪಾಕಿಸ್ತಾನ್ ಮೂಲದ ಉಗ್ರಗಾಮಿ ಗುಂಪು 'ಜೈಶ್-ಎ-ಮೊಹಮ್ಮದ್' ದಾಳಿಯ ಜವಾಬ್ದಾರಿಯನ್ನು ಹೊತ್ತುಕೊಂಡಿತು. ನಂತರ ಆತ್ಮಾಹುತಿ ಆಕ್ರಮಣಕಾರ ಆದಿಲ್ ಅಹ್ಮದ್ (22) ನ ವೀಡಿಯೊವನ್ನು ಬಿಡುಗಡೆ ಮಾಡಿತ್ತು! ಆ ಭೀಕರ ದಾಳಿಯಲ್ಲಿ ಸುಮಾರು 18 ವರ್ಷಗಳ ಕಾಲ ಸಿಆರ್‌ಪಿಎಫ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕರ್ನಾಟಕದ ಗುಡಿಗೆರೆಯ ಯೋಧ ಹೆಚ್. ಗುರು ಈ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾಗಿದ್ದನ್ನು ಸ್ಮರಿಸಬಹುದು.



ಇದಕ್ಕೂ ಮುನ್ನ, ಇಸವಿ 2015ರಲ್ಲಿ ಕಾಶ್ಮೀರದಲ್ಲಿ ಪಾಕಿಸ್ತಾನ ಮೂಲದ ಉಗ್ರಗಾಮಿಗಳು ಭಾರತೀಯ ಭದ್ರತಾ ಪಡೆಗಳ ವಿರುದ್ಧ ಹೆಚ್ಚು ಆತ್ಮಹತ್ಯೆ ದಾಳಿ ನಡೆಸಿದ್ದರು. ಜುಲೈ 2015ರಲ್ಲಿ, ಗುರದಾಸ್‌ಪುರದಲ್ಲಿ ಬಸ್ ಮತ್ತು ಪೊಲೀಸ್ ಠಾಣೆಗೆ ಮೂರು ಬಂಧೂಕುದಾರಿಗಳು ದಾಳಿ ಮಾಡಿದ್ದರು. ಇಸವಿ 2016 ರಲ್ಲಿ ನಾಲ್ಕರಿಂದ ಆರು ಬಂಧೂಕುದಾರಿಗಳು ಪಠಾನ್ಕೋಟ್ ಏರ್ ಫೋರ್ಸ್ ಸ್ಟೇಷನ್ ಅನ್ನು ಆಕ್ರಮಣ ಮಾಡಿದ್ದರು. ಫೆಬ್ರವರಿ ಮತ್ತು ಜೂನ್ 2016ರಲ್ಲಿ, ಉಗ್ರಗಾಮಿಗಳು ಕ್ರಮವಾಗಿ 9 ಮತ್ತು 8 ಭದ್ರತಾ ಸಿಬ್ಬಂದಿಗಳನ್ನು ಪಾಂಪೋರ್‌ನಲ್ಲಿ ಕೊಂದಿದ್ದರು. ಸೆಪ್ಟೆಂಬರ್ 2016ರಲ್ಲಿ, ನಾಲ್ಕು ಆಕ್ರಮಣಕಾರರು 'ಉರಿ'ಯಲ್ಲಿ ಭಾರತೀಯ ಸೈನ್ಯದ ಬ್ರಿಗೇಡ್ ಪ್ರಧಾನ ಕಾರ್ಯಾಲಯದಲ್ಲಿ 19 ಸೈನಿಕರನ್ನು ಕೊಂದರು. ಡಿಸೆಂಬರ್ 31, 2017ರಂದು, ಲೆಥ್ಪೊರದಲ್ಲಿನ ಕಮಾಂಡೋ ತರಬೇತಿ ಕೇಂದ್ರದಲ್ಲಿ ಉಗ್ರಗಾಮಿಗಳು ಐದು ಭದ್ರತಾ ಸಿಬ್ಬಂದಿಯನ್ನು ಕೊಂದಿದ್ದರು. ಈ ಎಲ್ಲಾ ದಾಳಿಗಳೂ ಜಮ್ಮುವಿನ ಶ್ರೀನಗರ ರಾಷ್ಟ್ರೀಯ ಹೆದ್ದಾರಿಯ ಸಮೀಪದಲ್ಲಿಯೇ ನಡೆದಿದ್ದವು.



**ಶಾ ಮುಂದೆ ಕಣ್ಣೀರು...**

ದುರಂತ ಸಂಭವಿಸಿದ ಬೆನ್ನಲ್ಲಿಯೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾಶ್ಮೀರ ಕಣಿವೆಗೆ ತೆರಳಿದ್ದು, ಭಯೋತ್ಪಾದಕ ದಾಳಿಯಲ್ಲಿ ತಮ್ಮವರನ್ನು ಕಳೆದುಕೊಂಡ. ಮಂದಿ ಶಾ ಮುಂದೆ ಭಿಕ್ಕಿ ಭಿಕ್ಕಿ ಅಳುತ್ತ ಘಟನೆ ಬಗ್ಗೆ ವಿವರಿಸಿದ್ದಾರೆ. ಅವರಿಗೆ ಸಾಂತ್ವನ ಹೇಳಿ ದುರಂತದಲ್ಲಿ ಮಡಿದವರಿಗೆ ಅಂತಿಮ ನಮನ ಸಲ್ಲಿಸಿದ ಶಾ, ದಾಳಿಗೆ ಕಾರಣರಾದ ಒಬ್ಬರನ್ನೂ ಕೂಡ ಬಿಡುವುದಿಲ್ಲ ಎಂದು ಭರವಸೆ ನೀಡಿದ್ದಾರೆ.

ಪಾಪ, ಪ್ರವಾಸಿಗರ ಪೈಕಿ ಬಹುತೇಕರು ತಮ್ಮ ಬದುಕಿನ ಖುಷಿಯ ಆಚರಣೆಗಾಗಿ ಭಾರತದ ಸ್ವಿಟ್ಜರ್ಲೆಂಡ್ ಎನಿಸಿರುವ ಪಹಲ್ಗಾಮ್‌ಗೆ ಪ್ರವಾಸ ಕೈಗೊಂಡಿದ್ದರು. ಆದರೆ



ಅವರಾರಿಗೂ ಕೂಡ ತಮ್ಮ ಬದುಕಿನ ದುರಂತ ಕ್ಷಣ ಅದೇ ಆಗಬಹುದು ಎಂಬ ಸಣ್ಣ ಊಹೆಯೂ ಇರಲಿಲ್ಲ, ವಾರದ ಹಿಂದಷ್ಟೇ ಮದುವೆಯಾದವರು, ತಿಂಗಳ ಹಿಂದಷ್ಟೇ ಮದುವೆಯಾದವರು, ಮಗನ ಶೈಕ್ಷಣಿಕ ಫಲಿತಾಂಶ ಬಂದ ಖುಷಿ ಆಚರಿಸಲು ಹೋದವರು... ಹೀಗೆ ಅಲ್ಲಿಗೆ ಕುಟುಂಬ ಸಮೇತ ತೆರಳಿದ್ದ ಹೆಣ್ಣು ಮಕ್ಕಳು ಕ್ಷಣ ಮಾತ್ರದಲ್ಲಿ ವಿಧವೆಯರಾಗಿದ್ದಾರೆ! ಅವರೆಲ್ಲ ನಮ್ಮ ಗೃಹ ಸಚಿವರನ್ನು ನೋಡುತ್ತಿದ್ದಂತೆ ಅವರ ಕಣ್ಣೀರ ಕಟ್ಟೆಯೊಡೆದು ತಮ್ಮವರ ಸಾವಿಗೆ ನ್ಯಾಯ ನೀಡುವಂತೆ ಕಣ್ಣೀರಿಡುತ್ತಲೇ ಮನವಿ ಮಾಡಿದ್ದಾರೆ. ಅವರಿಗೆ ಸಾಂತ್ವಾನ ಹೇಳಿದ ಗೃಹ ಸಚಿವರು ಈ ದುರಂತಕ್ಕೆ ಕಾರಣರಾದ ಒಬ್ಬರನ್ನು ಕೂಡ ಸುಮ್ಮನೇ ಬಿಡುವುದಿಲ್ಲ ಎಂದು ಸಂತ್ರಸ್ತರಿಗೆ ಭರವಸೆ ನೀಡಿದರು.

370ನೇ ವಿಧಿಯನ್ನು ರದ್ದುಪಡಿಸಿದ ನಂತರ ಕಾಶ್ಮೀರದಲ್ಲಿ ನಾಗರಿಕರ ಮೇಲೆ ನಡೆದ ಅತ್ಯಂತ ಭೀಕರ ದಾಳಿ ಇದಾಗಿದೆ. ಅಂದಹಾಗೆ, ಪ್ರವಾಸೋದ್ಯಮವೇ (ಜಮ್ಮು ಕಾಶ್ಮೀರ) ಇಲ್ಲಿನ ಜೀವನಾಡಿ. ಆದರೆ ಭಯೋತ್ಪಾದಕರು ಪ್ರವಾಸಿಗರನ್ನೇ ಗುರಿಯಾಗಿಸಿ ಈ ಆಕ್ರಮಣ ನಡೆಸಿದ್ದಾರೆ. ಇದರಿಂದ ಕಾಶ್ಮೀರ ಪ್ರವಾಸೋದ್ಯಮ ನಶಿಸಿ ಹೋಗುವ ಆತಂಕ ಎದುರಾಗಿದ್ದು, ಸ್ಥಳೀಯರು 23ರ ಬುಧವಾರ ಜಮ್ಮು ಕಾಶ್ಮೀರ ಬಂದ್ ಆಚರಿಸಿದ್ದಾರೆ. ಈ ಬಂದ್‌ಗೆ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಕೂಡ ಬೆಂಬಲ ವ್ಯಕ್ತಪಡಿಸಿರುವುದು ಸರಿಯಷ್ಟೇ...

ಇನ್ನೊಂದು ಗಮನಿಯ ಸಂಗತಿ ಏನೆಂದರೆ, ಅಮಿತ್ ಷಾ ಅವರು, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಡಿಜಿಪಿ ನಳಿನ್ ಪ್ರಭಾತ್ ಸೇರಿದಂತೆ ಉನ್ನತ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆಯ ನಡೆಸಿದ್ದಾರೆ. ದುರಂತದಲ್ಲಿ ಮೃತರಾದವರ ಶವಗಳನ್ನು ಬುಧವಾರ ಮುಂಜಾನೆ ಶ್ರೀನಗರದ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ತಂದು ನಂತರ ಪೊಲೀಸ್ ನಿಯಂತ್ರಣ ಕೊಠಡಿಗೆ ಸಾಗಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮತ್ತು ಲೆಫ್ಟಿನೆಂಟ್ ಗವರ್ನರ್ ಸಿನ್ಹಾ ಕೂಡ ಮೃತರಿಗೆ ಪುಷ್ಪ ನಮನ ಸಲ್ಲಿಸಿದ್ದಾರೆ.


**ಬಾರಾಮುಲ್ಲಾದಲ್ಲಿ ಉಗ್ರರಿಬ್ಬರ ಸದೆ ಬಡಿದರು!**

ಈ ದಾಳಿ ಖಂಡಿಸಿ ಕಾಶ್ಮೀರ ಕಣಿವೆಯಾದ್ಯಂತ ರಾಜಕೀಯ ಪಕ್ಷಗಳು ಮತ್ತು ವ್ಯಾಪಾರಿ ಸಂಘ ಸಂಸ್ಥೆಗಳು 23ರ ಬುಧವಾರ ಸಂಪೂರ್ಣ ಬಂದ್ ಆಚರಿಸಿದ್ದು, ಸಂತ್ರಸ್ತರಿಗೆ ಬೆಂಬಲ ಸೂಚಿಸಿ ಮತ್ತು ತಮ್ಮ ನಾಡಿನಲ್ಲಾದ ರಕ್ತಪಾತವನ್ನು ಖಂಡಿಸಿದ್ದಾರೆ. ಭಾರತೀಯ ಸೇನೆ ಮತ್ತು ಜೆ.ಕೆ. ಪೊಲೀಸರು ಬೈಸರನ್ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಉಗ್ರರಿಗಾಗಿ ಬೃಹತ್ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಈಗಾಗಲೇ ಬಾರಾಮುಲ್ಲಾದಲ್ಲಿ ಇಬ್ಬರು ಉಗ್ರರನ್ನು ಸದೆಬಡಿಯಲಾಗಿದೆ ಎಂಬ ಸುದ್ದಿ ಬಂದಿದೆ.... ☯

# ರಾಜ್ಯ ರಾಜಕೀಯದಲ್ಲಿ ಕಿಚ್ಚು ಹಚ್ಚಿದ ಜಾತಿಗಣತಿ

2 ☞

ಪಂಚಮಸಾಲಿ ಲಿಂಗಾಯತರು 10,71,302 (1.79ರಷ್ಟು) ಪ್ರತ್ಯೇಕವಾಗಿ ಕಾಣಿಸಿಕೊಂಡಿದ್ದಾರೆ. ಸಮೀಕ್ಷೆಗೆ ಒಳಗಾದ 6.35 ಕೋಟಿ ಜನರಲ್ಲಿ ಸುಮಾರು 37 ಲಕ್ಷ ಜನರು ಹೊರಗುಳಿದಿದ್ದಾರೆ ಎಂದು ಹೇಳಲಾಗಿದೆ.



ಇನ್ನು ಜಾತಿಗಳಲ್ಲಿ ವಿಭಜನೆ ಮಾಡಲಾಗಿದ್ದು, ಮರಸು ಒಕ್ಕಲಿಗರು 5,794 (0.01ರಷ್ಟು), ದಾಸ ಒಕ್ಕಲಿಗರು 17,961 (0.03ರಷ್ಟು), ರೆಡ್ಡಿ ಒಕ್ಕಲಿಗರು 24,059 (0.04ರಷ್ಟು), ಹಳ್ಳಿಕಾರ್ ಒಕ್ಕಲಿಗರು 30,265 (0.05ರಷ್ಟು), ಕುಂಚಿಟಿಗ ಒಕ್ಕಲಿಗರು (0.290ರಷ್ಟು), 73,977 (0.12ರಷ್ಟು), ಎಸ್ಸಿ ಲಂಬಾಣಿಗಳು 13,96,909 (2.34ರಷ್ಟು), ಎಸ್ಸಿ ಭೋವಿಗಳು 12,12,530 (2.03ರಷ್ಟು), ಎಸ್ಟಿ (ಇತರರು) 7,92,808 (1.33ರಷ್ಟು) ಎಂದು ತೋರಿಸಲಾಗಿದೆ. ಜಾತಿ ಶ್ರೇಣಿಯಲ್ಲಿ ಸಾಂಪ್ರದಾಯಿಕವಾಗಿ ಅಗ್ರಸ್ಥಾನದಲ್ಲಿರುವ ಬ್ರಾಹ್ಮಣರ ಜನಸಂಖ್ಯೆಯು 17,83,427 (2.98ರಷ್ಟು) ಆಗಿದ್ದು, ಕರ್ನಾಟಕದಲ್ಲಿ ಸಮೀಕ್ಷೆ ನಡೆಸಲಾದ 167 ಜಾತಿಗಳಲ್ಲಿ 10 ನೇ ಸ್ಥಾನದಲ್ಲಿದೆ, ಇದರಲ್ಲಿ ಬಡಗರು 32 ಸದಸ್ಯರೊಂದಿಗೆ ಕೊನೆಯುವರಾಗಿದ್ದಾರೆ. 3,32,098 ಜನರು (0.56ರಷ್ಟು) ಯಾವುದೇ ಜಾತಿಯನ್ನು ಹೊಂದಿಲ್ಲ ಎಂದು ಹೇಳಲಾಗಿದೆ.

ತಿಗಳರು 3,28,902 (0.55ರಷ್ಟು), ಬೆಸ್ತರು 12,70,044 (2.12ರಷ್ಟು), ವಿಶ್ವಕರ್ಮರು 10,88,385 (1.82ರಷ್ಟು), ಗೊಲ್ಲರು 9,76,641 (1.63ರಷ್ಟು), ಕ್ಷತ್ರಿಯರು 4,12,690ರಷ್ಟು), ಗೌಡರು 4,12,690% (0.71,690ರಷ್ಟು) (0.34ರಷ್ಟು), ಬಂಟ್ಸ್ 3,25,718 (0.54ರಷ್ಟು), ಕುಂಬಾರರು 4,43,492 (0.74ರಷ್ಟು), ಆರ್ಯ ವೈಶ್ಯರು 4,66,769 (0.78ರಷ್ಟು), ಮರಾಠರು 16,15,667 (2.70ರಷ್ಟು), ಉಪ್ಪಾರರು 81564815, 81564815 (1.33ರಷ್ಟು), ರೆಡ್ಡಿಗಳು 7,11,377 (1.19ರಷ್ಟು), ಗಾಣಿಗ 7,02,379 (1.17ರಷ್ಟು), ಮಡಿವಾಳರು 6,58,887 (1.10ರಷ್ಟು), ಒಬಿಸಿ (ಇತರರು) 17,68,688 (2.96ರಷ್ಟು), ಮತ್ತು ದೇವಾಂಗರು 6,30,691 (1.05ರಷ್ಟು). ಜೈನರು 4,19,375 (0.70ರಷ್ಟು) ಮತ್ತು ಕ್ರಿಶ್ಚಿಯನ್ನರು 8,61,416 (1.44ರಷ್ಟು) ಇದ್ದಾರೆ ಎನ್ನುವುದು ಸೋರಿಕೆಯಾದ ಜಾತಿಗಣತಿಯಿಂದ ಗೊತ್ತಾಗಿದೆ.

ಸದ್ಯ ಅಧಿಕೃತವಾಗಿ ಜಾತಿಗಣತಿ ಜಾರಿಯಾಗುವ ತನಕ ಕಾಯಬೇಕಾಗಿದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಸಮೀಕ್ಷೆ ಜಾರಿಯಾಗುತ್ತಾ? ಒಂದು ವೇಳೆ ಜಾರಿ ಮಾಡಿದರೆ ಮುಂದೇನು? ಎಂಬ ಪ್ರಶ್ನೆಯೂ ನಮ್ಮನ್ನು ಕಾಡುತ್ತಿದೆ. ಆದರೆ ಎಲ್ಲದಕ್ಕೂ ಕಾಲವೇ ಉತ್ತರ ಹೇಳಬೇಕಿದೆ. ಜಾತಿ ಗಣತಿ ಕಿಚ್ಚಿನಲ್ಲಿ ರಾಜಕೀಯ ಬೇಳೆಯನ್ನು ಯಾರೆಲ್ಲ ಬೇಯಿಸಿಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ☯

# ಕಾರು ಅಡ್ಡಗಟ್ಟಿ 3.75 ಕೆಜಿ ಚಿನ್ನ ದರೋಡೆ ಕೆಜಿಎಫ್ ನಗರಸಭೆ ಕಾಂಗ್ರೆಸ್ ಸದಸ್ಯ ಅರೆಸ್ಟ್!



ಪ್ರಮುಖ ಆರೋಪಿ ಜಯಪಾಲ್

**ಕೆಜಿಎಫ್ ನಗರದ ಜವಳಿ ವ್ಯಾಪಾರಿಯೊಬ್ಬ ಚೆನ್ನೈನಿಂದ ಚಿನ್ನದ ಗಟ್ಟಿಗಳನ್ನು ತಂದು, ಅವುಗಳನ್ನು ಆಭರಣಗಳಾಗಿ ಮಾಡಿ ಮಾರಾಟ ಮಾಡುತ್ತಿದ್ದರು. ಇವರ ಹಣಕಾಸಿನ ವ್ಯವಹಾರವನ್ನು ನೋಡಿದ ನಗರಸಭೆಯ ಕಾಂಗ್ರೆಸ್ ಸದಸ್ಯನೊಬ್ಬ ತಿಂಗಳ ಮಾಮೂಲು ಕೇಳಿದನು. ಚಿನ್ನದ ವ್ಯಾಪಾರಿ ಹಣ ಕೊಡದಿದ್ದಕ್ಕೆ ಅವರ ಕಾರಿನ ಡ್ರೈವರ್‌ನನ್ನು ಸೇರಿಸಿಕೊಂಡು ಪ್ಲಾನ್ ಮಾಡಿ ಚೆನ್ನೈನಿಂದ ರಾತ್ರಿ ಚಿನ್ನವನ್ನು ತೆಗೆದುಕೊಂಡು ಬರುತ್ತಿದ್ದಾಗ, ಆಂಧ್ರದ ವಿ. ಕೋಟೆ ಸಮೀಪದ ನಾಯಕನೇರಿ ಘಾಟ್ ಬಳಿ ಮುಸುಕುಧಾರಿಗಳ ವೇಷದಲ್ಲಿ ಕಾರನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಬೆದರಿಸಿ ಕಾರಿನಲ್ಲಿದ್ದ 3.5 ಕೋಟಿ ಬೆಲೆಬಾಳುವ 3.75 ಕೆಜಿ ಚಿನ್ನವನ್ನು ದೋಚಿ ಪರಾರಿಯಾಗಿದ್ದ ಕೆಜಿಎಫ್ ನಗರಸಭೆ ಕಾಂಗ್ರೆಸ್ ಸದಸ್ಯ ಸೇರಿದಂತೆ ಒಂಭತ್ತು ಆರೋಪಿಗಳನ್ನು ವಿ. ಕೋಟೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**


## ಕೋಲಾರ

✍ ಕೋಲಾರ ಮಂಜು


ಕೋಲಾರ ಜಿಲ್ಲೆ, ಕೆಜಿಎಫ್ ನಗರದ ರಾಬರ್ಟ್‌ಸನ್‌ಪೇಟೆ, ಕಿಂಗ್ ಜಾರ್ಜ್ ಹಾಲ್‌ನ ಹಿಂದೆ ಇರುವ ಮಹಾರಾಜ ರಸ್ತೆಯಲ್ಲಿ ವಾಸವಾಗಿದ್ದು, ನಗರದ ಮಹಾತ್ಮ ಗಾಂಧಿ ಮಾರುಕಟ್ಟೆಯ ಮುಂಭಾಗ ಮಿಲನ್ ಕಲೆಕ್ಷನ್ ಸೆಂಟರ್ ಎಂಬ ಜವಳಿ ಅಂಗಡಿಯನ್ನು ನಡೆಸುತ್ತಿರುವ ಚೇತನ್‌ಕುಮಾರ್ ಜೈನ್‌ರವರು ತಾತ ಪ್ರಕಾಶ್ ಚಂದನ್ ಮತ್ತು ತಂದೆ ರಮೇಶ್ ಚಂದನ್‌ರವರಂತೆ ಜವಳಿ ವ್ಯಾಪಾರ ಮಾಡುತ್ತಾ ಬಟ್ಟೆ ವ್ಯಾಪಾರಕ್ಕೆ ಹೆಸರುವಾಸಿಯಾಗಿದ್ದರು. ಚೇತನ್‌ಕುಮಾರ್‌ರವರು ಜವಳಿ ವ್ಯಾಪಾರದ ಜೊತೆಗೆ ಚಿನ್ನದ ಅಂಗಡಿ ಹಾಗೂ ಗಿರವಿ ಅಂಗಡಿಗಳಿಗೆ ಗ್ರಾಹಕರು ಮಾರಾಟ ಮಾಡಿರುವ ಹಳೇಯ ಚಿನ್ನದ ಆಭರಣಗಳನ್ನು ಅವರಿಂದ ಖರೀದಿಸಿ ತಿಂಗಳಿಗೊಂದು ಬಾರಿ ತಮ್ಮ ಸ್ವಂತ ಕಾರಿನಲ್ಲಿ ಸುಮಾರು ವರ್ಷಗಳಿಂದ ಇವರ ಮನೆಯಲ್ಲಿ ಕೆಲಸ ಮಾಡಿಕೊಂಡು ಕಾರಿನ ಚಾಲಕನಾಗಿದ್ದ ಮುಕ್ರಂ ಪಾಷನೊಂದಿಗೆ ಚೆನ್ನೈಗೆ ಹೋಗಿ ಚಿನ್ನದ ಕೆಲಸ ಮಾಡುವವರ ಬಳಿ ಹಳೇ ಆಭರಣಗಳನ್ನು ಕರಗಿಸಿ ಚಿನ್ನದ ಗಟ್ಟಿಗಳನ್ನಾಗಿ ಮಾಡಿಸಿ, ಜೊತೆಗೆ ಹೊಸ ಚಿನ್ನದ ಗಟ್ಟಿಗಳನ್ನು ಖರೀದಿಸಿಕೊಂಡು ಅವುಗಳನ್ನು ಕೆಜಿಎಫ್‌ಗೆ ತಂದು ಆಭರಣಗಳನ್ನು ತಯಾರು ಮಾಡುವವರ ಬಳಿ ಚಿನ್ನದ ಗಟ್ಟಿಗಳನ್ನು ಕೊಟ್ಟು ಹೊಸ ಮಾದರಿಯ ಆಭರಣಗಳನ್ನು ತಯಾರು ಮಾಡಿಸಿದ ನಂತರ ಅವುಗಳನ್ನು ಕೆಜಿಎಫ್ ಮತ್ತು ಬೆಂಗಳೂರಿನ ಚಿನ್ನದ ವ್ಯಾಪಾರಿಗಳಿಗೆ ಕಡಿಮೆ ಲಾಭ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು. ಜವಳಿ ಅಂಗಡಿಗೆ ಬಂದು ಬಟ್ಟೆ ಖರೀದಿಸುವ ಗ್ರಾಹಕರಲ್ಲಿ ಕೆಲವರು ಇವರ ಬಳಿ ಚಿನ್ನದ ಆಭರಣಗಳನ್ನು ಖರೀದಿಸುವ ಖಾಯಂ ಗ್ರಾಹಕರು ಇದ್ದರು. ಚಿನ್ನದ ವ್ಯಾಪಾರ ಚೆನ್ನಾಗಿ ನಡೆಯುತ್ತಿರುವುದರಿಂದ ಚೆನ್ನೈನಿಂದ ಸಗಡು ದರದಲ್ಲಿ ಚಿನ್ನ ಮತ್ತು ಆಭರಮುಗಳನ್ನು ತಂದು ಚಿಲ್ಲರೆ ದರದಲ್ಲಿ ಸಣ್ಣಪುಟ್ಟ ಜ್ಯೂವೆಲ್ಲರಿ ಅಂಗಡಿಗಳವರಿಗೆ ಕೊಡುತ್ತಿದ್ದರು.



3.75 ಕೆಜಿ ಚಿನ್ನದ ಗಟ್ಟಿಗಳು




ಚಿತ್ತೂರು ಜಿಲ್ಲಾ ಎಸ್ಪಿ ಮಣಿಕಂತ



ಡಿವೈಎಸ್ಪಿ ಪ್ರಭಾಕರ್

### 3.75 ಕೆಜಿ ಚಿನ್ನದ ದರೋಡೆ

ಚೇತನ್‌ಕುಮಾರ್ ಜೈನ್ ಮತ್ತು ದೀಪಕ್ ಕುಮಾರ್ ಜೈನ್‌ರವರು ಏಪ್ರಿಲ್ 2ರಂದು ಮಧ್ಯಾಹ್ನ ಚೆನ್ನೈಗೆ ಹೋಗಿ ಚಿನ್ನಿವಾರಪೇಟೆಯಲ್ಲಿ ಚಿನ್ನವನ್ನು ಖರೀದಿ ಮಾಡಿಕೊಂಡು ಸಂಜೆ ಚೆನ್ನೈನಿಂದ ಹೊರಟು ವೇಲೂರು, ಗುಡಿಯಾತಂ, ಪೆರ್ನಾಂಬಟ್ ಅರಣ್ಯ ಪ್ರದೇಶದ ಕಣಿವೆ ಮೂಲಕ ನಾಯಕನೇರಿ ಘಾಟ್ ಬಳಿಗೆ ಬರುತ್ತಿದ್ದಂತೆ ಯಾರೋ ಇಬ್ಬರು ರಸ್ತೆ ಮಧ್ಯೆ ಕಾರೊಂದನ್ನು ತಳ್ಳಿಕೊಂಡು ಹೋಗುತ್ತಿದ್ದರು. ಆಗ ಕಾರಿನ ಚಾಲಕ ಮುಕ್ರಂ ಪಾಷ ಹಾರನ್ ಹೊಡೆದು ದಾರಿ ಬಿಡುವಂತೆ ಹೇಳುತ್ತಾನೆ. ಅದಕ್ಕೆ ಕಾರು ತಳ್ಳುತ್ತಿದ್ದವರಲ್ಲಿ ಒಬ್ಬ ನಮ್ಮ ಕಾರು ಸ್ಟಾರ್ಟ್ ಆಗುತ್ತಿಲ್ಲ ಅದಕ್ಕೆ ತಳ್ಳಿ ಸ್ಟಾರ್ಟ್ ಮಾಡುತ್ತಿರುವುದಾಗಿ ಹಳಿ ಕಾರನ್ನು ರಸ್ತೆ ಮಧ್ಯೆ ತಳ್ಳಿಕೊಂಡು ಹೋಗುತ್ತಿದ್ದರು. ತಕ್ಷಣ ಚಾಲಕ ಮುಕ್ರಂ ಪಾಷ ಕಾರನ್ನು ನಿಲ್ಲಿಸಿ ಅವರ ಬಳಿಗೆ ಹೋಗಿ ನಮಗೆ ದಾರಿ ಬಿಡಿ ನಾವು ಕೆಜಿಎಫ್‌ಗೆ ಹೋಗಬೇಕೆಂದು ಹೇಳಿ ಕಾರಿನ ಬಳಿ ಬರುತ್ತಿದ್ದಂತೆ ರಸ್ತೆಯ ಅಕ್ಕಪಕ್ಕದ ಗಿಡಗಂಡೆಗಳ ಮಧ್ಯೆ ಅವಿತುಕೊಂಡಿದ್ದ ಮುಸುಕುಧಾರಿ ವ್ಯಕ್ತಿಗಳು ಒಂದೇ ಸಮನೇ ನುಗ್ಗಿ ಕಾರನ್ನು ಮುತ್ತಿಕೊಂಡು ಮಾರಕಾಸ್ತ್ರಗಳನ್ನು ಹಿಡಿದು ತಮಿಳು ಮತ್ತು ತೆಲುಗಿನಲ್ಲಿ ಮಾತನಾಡುತ್ತಾ ನಿಮ್ಮ ಬಳಿ ಇರುವ ಚಿನ್ನ, ಬೆಳ್ಳಿ ಮತ್ತು ಹಣವನ್ನು ಕೊಡುವಂತೆ ಕೇಳಿದರಲ್ಲದೆ ಗಲಾಟೆ ಮಾಡಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಚೇತನ್‌ಕುಮಾರ್ ಜೈನ್‌ರವರ ಪಕ್ಕ ಇಟ್ಟುಕೊಂಡಿದ್ದ ಚಿನ್ನದ ಬಾಕ್ಸ್‌ನ್ನು ತೆಗೆದುಕೊಂಡ. ದರೋಡೆಕೋರರು ಸ್ಥಳದಿಂದ ಪರಾರಿಯಾಗಿ ಹೋದರು.



ಏಕಾಏಕಿ ನಡೆದ ಘಟನೆಯಿಂದ ಶಾಕ್‌ಗೆ ಒಳಗಾಗಿದ್ದ ಚೇತನ್‌ಕುಮಾರ್ ಜೈನ್‌ರವರು ಸ್ವಲ್ಪ ಸುಧಾರಿಸಿಕೊಂಡು ಅವರ ಕುಟುಂಬದವರಿಗೆ ಫೋನ್ ಮಾಡಿ ಕರೆಸಿಕೊಂಡು ವಿ. ಕೋಟೆ ಪೊಲೀಸ್ ಠಾಣೆಗೆ ಹೋಗಿ ನಡೆದ ಚಿನ್ನದ ದರೋಡೆ ವಿಚಾರವನ್ನು ತಿಳಿಸಿ ದೂರು ನೀಡಿದರು. ಕಾರು ಅಡ್ಡಗಟ್ಟಿ ಚಿನ್ನವನ್ನು ದರೋಡೆ ಮಾಡಿಕೊಂಡು ಹೋಗಿರುವ ಬಗ್ಗೆ ವಿ. ಕೋಟೆ ಪೊಲೀಸರು ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು ಅದರಂತೆ ಸ್ಥಳಕ್ಕೆ ಚಿತ್ತೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಣಿಕಂತ, ಡಿವೈಎಸ್ಪಿ ಪ್ರಭಾಕರ್ ಮತ್ತು ಸಿಬ್ಬಂದಿ ವರ್ಗದವರು ಆಗಮಿಸಿ ಪರಿಶೀಲಿಸಿದ ನಂತರ ದರೋಡೆಕೋರರ ಪತ್ತೆಗಾಗಿ ವಿಶೇಷ ನಾಲ್ಕು ತಂಡಗಳನ್ನು ರಚಿಸಲಾಯಿತು. ಘಟನೆ ಬಗ್ಗೆ ತನಿಖೆ ಕೈಗೊಂಡ ಕ್ರೈಂ ತಂಡವು ಪೆರ್ನಾಂಬಟ್, ನಾಯಕನೇರಿ ಕಣಿವೆ ಹಾಗೂ ವಿ. ಕೋಟೆ ಮಾರ್ಗದಲ್ಲಿ ಅಳವಡಿಸಿಕೊಂಡಿರುವ ಸಿಸಿ ಕ್ಯಾಮೆರಾ ಫುಟೇಜ್‌ಗಳನ್ನು ಸಂಗ್ರಹಿಸಿ, ಪರಿಶೀಲಿಸಿದ್ದು, ದರೋಡೆಕೋರರು ಯಾವ ಯಾವ ಮಾರ್ಗಗಳಿಂದ ಬಂದಿದ್ದಾರೆ ಎನ್ನುವುದರ ಬಗ್ಗೆ ವಿವಿಧ ಆಯಾಮಗಳಲ್ಲಿ ತನಿಖೆಯನ್ನು ಚುರುಕುಗೊಳಿಸಿದರಲ್ಲದೆ ದೂರುದಾರ ಚೇತನ್‌ಕುಮಾರ್ ಜೈನ್, ದೀಪಕ್‌ಕುಮಾರ್ ಜೈನ್ ಮತ್ತು ಕಾರಿನ ಚಾಲಕ ಮುಕ್ರಂ ಪಾಷರವರ ಮೊಬೈಲ್ ಫೋನ್‌ಗಳಲ್ಲಿನ ಸಂಭಾಷಣೆಗಳನ್ನು ಆಧರಿಸಿ ಸಾಕ್ಷ್ಯಗಳನ್ನು ಸಂಗ್ರಹಿಸಿ ಅಂತಿಮವಾಗಿ ಚಿನ್ನದ ವ್ಯಾಪಾರಿ ಚೇತನ್ ಕುಮಾರ್ ಜೈನ್‌ರವರ ಬಳಿ ಹಲವು ವರ್ಷಗಳಿಂದ ಕಾರಿನ ಚಾಲಕನಾಗಿ ಮತ್ತು ಮನೆ ಕೆಲಸ ಮಾಡಿಕೊಂಡಿದ್ದ ಮುಕ್ರಂ ಪಾಷನನ್ನು ಪೊಲೀಸ್ ಠಾಣೆಗೆ ಕರೆಸಿ ವಿಚಾರಣೆ ಮಾಡಲಾಗಿ ನನಗೇನು ಗೊತ್ತಿಲ್ಲ. ನಾನೊಬ್ಬ ಅಮಾಯಕ ಎಂದು ಹೇಳಿದನು. ಆಗ ಪೊಲೀಸರು ಅವವವರ ಸ್ಟೈಲವನಲ್ಲಿ ಕೇಳಲಾಗಿ ಚಿನ್ನದ ದರೋಡೆಯ ಮಾಸ್ಟರ್ ಮೈಂಡ್ ಬಗ್ಗೆ ಬಾಯಿ ಬಿಟ್ಟನು.



ಆರೋಪಿಗಳಾದ ಡ್ರೈವರ್ ಪಾಷ, ಕೆ.ಆರ್. ಬಾಬು ಹಾಗೂ ಷಣ್ಮುಗಂ

### ರೋಲ್‌ಕಾಲ್ ಕೊಡದಿದ್ದಕ್ಕೆ ಚಿನ್ನ ದರೋಡೆ

ಚಿನ್ನದ ದರೋಡೆಯ ಮಾಸ್ಟರ್ ಮೈಂಡ್ ಕೆಜಿಎಫ್‌ನ ರಾಜಕೀಯ ವ್ಯಕ್ತಿಯೊಬ್ಬರು ಎಂದು ತಿಳಿಯುತ್ತಿದ್ದಂತೆ ಚಿತ್ತೂರಿನ ಎಸ್ಪಿ ಮಣಿಕಂತರವರು ಕೆಜಿಎಫ್ ಎಸ್ಪಿ ಕೆ.ಎಂ. ಶಾಂತರಾಜುರವರನ್ನು ಫೋನ್ ಮೂಲಕ ಸಂಪರ್ಕಿಸಿ ಪ್ರಕರಣದ ಪ್ರಮುಖ ವ್ಯಕ್ತಿಯನ್ನು ಬಂಧಿಸಲು ಸಹಕಾರ ನೀಡುವಂತೆ ಕೋರಿದ್ದು ಅದರಂತೆ ಕೆಜಿಎಫ್ ಪೊಲೀಸರ ಸಹಕಾರದೊಂದಿಗೆ ಪ್ರಿಲ್ 4ರಂದು ರಾತ್ರಿ ಉರಿಗಾಂ ರೈಲ್ವೆ ನಿಲ್ದಾಣದ ರಸ್ತೆಯ ಕೆಜಿಎಫ್ ಕ್ಲಬ್ ಬಳಿ ಇರುವ ಕೋಲಾರ ಜಿಲ್ಲಾ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷ, ಕೆಜಿಎಫ್ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಕೆಜಿಎಫ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ



ಚೇತನ್‌ಕುಮಾರ್ ಜಾನ್‌ರವರ ಕಾರು



ಚಿನ್ನದ ಗಟ್ಟಿಯನ್ನು ಪರಿಶೀಲಿಸುತ್ತಿರುವ ಎಸ್ಪಿ ಮಣಿಕಂತ ಅಂಡ್ ಟೀಂ

☞ 5

4 ☞

ಅಭ್ಯರ್ಥಿಯಾಗಿ ವಶಕ್ಕೆ ಪಡೆದು ವಿ. ಕೋಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆಗೆ ಒಳಪಡಿಸಲಾಗಿ ಚೇತನ್‌ಕುಮಾರ್ ಜೈನ್‌ರವರ ತಾತ ಪ್ರಕಾಶ್ ಚಂದನ್‌ರವರು ನನಗೆ ಹಳೇ ಪರಿಚಯ, ಸಮಯ ಸಿಕ್ಕಾಗ ಜವಳಿ ಅಂಗಡಿಗೆ ಹೋಗಿ ಸ್ವಲ್ಪ ಹೊತ್ತು ಇದ್ದು ಮಾತನಾಡಿಸಿಕೊಂಡು ಬರುತ್ತಿದ್ದೆನು. ಅವರು ಅಷ್ಟೇ ನಾನೊಬ್ಬ ರಾಜಕೀಯ ಪಕ್ಷದ ಮುಖಂಡನೆಂದು ಗೌರವ ಕೊಡುತ್ತಿದ್ದರು. ಜವಳಿ ಅಂಗಡಿಗೆ ಬಂದು ಹೋಗುವಾಗ ಚೇತನ್ ಕುಮಾರ್ ಜೈನ್‌ರವರು ನಡೆಸುತ್ತಿದ್ದ ಜವಳಿ ಮತ್ತು ಚಿನ್ನದ ಬಿಸಿನೆಸ್‌ನ್ನು ಹತ್ತಿರದಿಂದ ನೋಡುತ್ತಿದ್ದ ನಾನು ಚೇತನ್‌ಕುಮಾರ್‌ರವರ ಬಳಿ ಇಷ್ಟೊಂದು ಆದಾಯ ಬರುವುದಲ್ಲ ನನಗೂ ತಿಂಗಳ ಮಾಮೂಲು ಕೊಡುವಂತೆ ಕೇಳುತ್ತೇನೆ. ಅದಕ್ಕೆ ಚೇತನ್ ಕುಮಾರ್ ಜೈನ್ ನಾನು ಮಾಡುತ್ತಿರುವ ವ್ಯಾಪಾರವು ನ್ಯಾಯುತವಾಗಿ ಮಾಡುತ್ತಿದ್ದು, ಶೇಕಡ 5%ರಷ್ಟು ಲಾಭ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ನಿನಗೆ ರೋಲ್‌ಕಾಲ್ ಕೊಡುವುದಿಲ್ಲವೆಂದು ಹೇಳಿಬಿಟ್ಟನು. ಅದಕ್ಕೆ ನಾನು ರೋಲ್‌ಕಾಲ್ ಕೇಳಿದಕ್ಕೆ ಸತ್ಯಹರಿಶ್ಚಂದ್ರನಂತೆ ಮಾತನಾಡುತ್ತಾನೆ. ಇವನನ್ನು ಬಿಡಬಾರದೆಂದು ಯೋಚಿಸಿ ಮೊದಲಿಗೆ ಸ್ನೇಹಿತರಾದ ಕೆ.ಆರ್. ಬಾಬು (61) ಮತ್ತು ವಿ. ಷಣ್ಮುಗಂ (59)ರವರೊಂದಿಗೆ ಸೇರಿಕೊಂಡು ಚೇತನ್ ಕುಮಾರ್ ಜೈನ್‌ರವರ ಬಳಿ ಇರುವ ಚಿನ್ನ, ಒಡವೆ ಹಾಗೂ ಹಣವನ್ನು ಲೂಟಿ ಮಾಡಬೇಕು ಅದಕ್ಕೆ ಬೇಕಾದ ಜನರನ್ನು ಸೇರಿಸಿಕೊಳ್ಳಬೇಕೆಂದು ಯೋಚಿಸುತ್ತಿರುವಾಗ ತಮಿಳುನಾಡಿನ ಪೆರ್ನಾಂಬಟ್‌ನ ವಾಸಿ ಪಿ. ವೇದಾವಂ ಪರಿಚಯವಿದ್ದು ವನು ಜ್ಞಾಪಕಕ್ಕೆ ಬಂದಿದ್ದು, ಕೂಡಲೇ ಅವನಿಗೆ ಫೋನ್ ಮಾಡಿ ಕರೆಸಿಕೊಂಡು ದರೋಡೆಗೆ ಜನರು ಬೇಕೆಂದು ಕೇಳಿದಕ್ಕೆ ವೇದಾಲವಂ ಅಂಗಡಿ ಮತ್ತು ಮನೆಗೆ ಕನ್ನ ಹಾಕಿ ದರೋಡೆ ಮಾಡುವುದಕ್ಕೆ ನನ್ನ ಬಳಿ ದರೋಡೆಕೋರರ ತಂಡವೇ ಇದೆ. ಆದರೆ ಇದು ಮಾಡುವುದಕ್ಕೆ ಕಷ್ಟವಾಗುವುದು. ಊರು ಬಿಟ್ಟು ಹೊರಗಡೆಯಾದರೆ ಸುಲಭವಾಗಿ ಕಾರ್ಯ ಸಾಧಿಸಬಹುದೆಂದು ಹೇಳಿದನಲ್ಲದೆ ನೀನು ಮಾಡಿರುವ ಪ್ಲಾನ್ ಪ್ರಕಾರ ದರೋಡೆಗೆ ಆ ವ್ಯಕ್ತಿಯ ಕಡೆಯವರೊಬ್ಬರನ್ನು ಸೇರಿಸಿ ಕೊಂಡರೆ ಅನುಕೂಲವಾಗುವುದೆಂದು ಹೇಳಿದನು. ಅದರಂತೆ ನಾನು ಚೇತನ್‌ಕುಮಾರ್ ಜೈನ್‌ರವರ ಕಾರಿನ ಚಾಲಕ ಮುಕ್ರಂ ಪಾಷನಿಗೆ ಹಮದ ಆಸೆ ತೋರಿಸಿ ನಾವು ಮಾಡುತ್ತಿರುವ ದರೋಡೆಗೆ ಸಹಕಾರ ನೀಡುವಂತೆ ಕೇಳಿದ್ದು, ಅದರಂತೆ ಅವನು ಒಪ್ಪಿಕೊಂಡು ಚೇತನ್ ಕುಮಾರ್ ಜೈನ್‌ರವರು ಚಿನ್ನದ ಗಟ್ಟಿಗಳು ಮತ್ತು ಚಿನ್ನದ ಒಡವೆಗಳನ್ನು ಎಲ್ಲಿಂದ ತಂದು, ಎಲ್ಲಿ ಮಾರಾಟ ಮಾಡುತ್ತಾರೆ. ಅವರು ಚಿನ್ನ ಖರೀದಿಸಲು ಬೇರೆ ಊರಿಗೆ ಹೋಗುವಾಗ ಯಾರು ಅವರ ಜೊತೆ ಇರುತ್ತಾರೆ ಎನ್ನುವುದರ ಬಗ್ಗೆ ಕೇಳಲಾಗಿ ಮುಕ್ರಂ ಪಾಷ ಎಲ್ಲ ಸಂಪೂರ್ಣ ಮಾಹಿತಿಯನ್ನು ನೀಡಿದನು. ಅದರಂತೆ ಚಿನ್ನವನ್ನು ಕದಿಯಲು ಪೆರ್ನಾಂಬಟ್‌ನ ಪಿ. ವೇದಾವಲಂನನ್ನು ಅಜ್ಞಾತ ಸ್ಥಳಕ್ಕೆ ಕರೆಸಿ ದರೋಡೆಗೆ ಸ್ಕೆಚ್ ಹಾಕಿದೆ. ನಂತರ ಕದ್ದ ಬಂಗಾರವನ್ನು ಸ್ನೇಹಿತರಾದ ಕೆ.ಆರ್. ಬಾಬು ಮತ್ತು ವಿ. ಷಣ್ಮುಗಂರವರು ಮಾರಾಟ ಮಾಡಿ ಬಂದ ಹಣದಲ್ಲಿ ನಾವು ಮಾತನಾಡಿರುವಂತೆ ಕೊಡುತ್ತಾರೆಂದು ಹೇಳಿದೆನು. ಅದರಂತೆ ಪಿ. ವೇದಾವಲಂ ಪೆರ್ನಾಂಬಟ್‌ನ ಕುಮಾರನ್, ಗುಡಿಯಾತಂ ನಿವಾಸಿಗಳಾದ ರಂಜಿತ ಶಂಕರ್, ದೇಬೇಶ್ ಚಕ್ರವರ್ತಿ ಮತ್ತು ವೇಲೂರು ಜಿಲ್ಲೆಯ ವೇಲು ಸೇರಿದಂತೆ ತಮಿಳು ನಾಡಿನ ಇನ್ನುಳಿದ ನಾಲ್ಕು ಜನರನ್ನು ಸೇರಿಸಿಕೊಂಡು ದರೋಡೆಗೆ ಪ್ಲಾನ್ ಮಾಡಿಕೊಂಡು ಏಪ್ರಿಲ್ 2ರಂದು ಬುಧವಾರ ರಾತ್ರಿ 9.30 ಗಂಟೆ ಸಮಯದಲ್ಲಿ ನಾಯಕನೇರಿ ಘಾಟ್‌ನಲ್ಲಿ ಕಾರೊಂದನ್ನು ರಸ್ತೆ ಮಧ್ಯೆ ತಳ್ಳಿಕೊಂಡು ಹೋಗುತ್ತಿರುವಂತೆ ನಟಿಸುತ್ತಾ ಮುಂದೆ ಹೋಗುತ್ತಿರುವಾಗ ಕಣಿವೆಯ ತಿರುವುಗಳಲ್ಲಿ ಬರುವಾಗ ಕಾರಿನ ಚಾಲಕ ಮುಕ್ರಂ ಪಾಷ ಕಾರಿನ ಹಾರನ್ ಹೊಡೆಯುತ್ತಾ ನಾವು ಬರುತ್ತಿದ್ದೇವೆಂದು ಶಬ್ದ ಮಾಡುವ ಮೂಲಕ ಸಿಗ್ನಲ್ ಕೊಡುತ್ತಿದ್ದನು. ನಮ್ಮವರು ಸ್ಥಳದಲ್ಲಿದ್ದು, ಕಾರು ಬರುತ್ತಿದ್ದಂತೆ ಕಾರನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಬೆದರಿಸಿ ಚಿನ್ನದ ಗಟ್ಟಿಗಳಿದ್ದ ಬ್ಯಾಗನ್ನು ಅವರಿಂದ ಕಿತ್ತುಕೊಂಡು ಅಲ್ಲಿಂದ ಪರಾರಿಯಾಗಿ ನಾವಿಬ್ಬ ಅಜ್ಞಾತ ಸ್ಥಳಕ್ಕೆ ಬಂದು ಚಿನ್ನದ ಬ್ಯಾಗನ್ನು ಕೊಟ್ಟರು. ಆಗ ನಾನು ಎಲ್ಲರೂ ಇಲ್ಲಿಂದ ಹೊರಟುಬಿಡಿ, ಎರಡು ದಿನ ಬಿಟ್ಟು ಚಿನ್ನವನ್ನು ವಿಲೇವಾರಿ ಮಾಡಿ ಬರುವ ಹಣದಲ್ಲಿ ನಿಮಗೆ ಸೇರಬೇಕಾದ ಹಣವು ಬಂದು ಸೇರುತ್ತದೆಂದು ಹೇಳಿ ಅವರನ್ನು ಅಲ್ಲಿಂದ ಕಳುಹಿಸಿದ ಮೇಲೆ ನಾವು ಚಿನ್ನದ ಬ್ಯಾಗ್‌ನೊಂದಿಗೆ ಕೆಜಿಎಫ್ ಸೇರಿಕೊಂಡೆವೆಂದು ಹೇಳಿದನು.

ಎ1 ಆರೋಪಿ ಜಯಪಾಲ್ ರವರಿಂದ ಹೇಳಿಕೆ ಪಡೆದ ನಂತರ ಅವರ ಬಳಿ ಇದ್ದ 3.30 ಕೆಜಿ ಚಿನ್ನವನ್ನು ವಶಕ್ಕೆ ಪಡೆಯಲಾಯಿತು. ವಿಚಾರಣೆ ವೇಳೆಯಲ್ಲಿ ನೀಡಿದ ಸುಳಿವಿನ ಮೇರೆಗೆ ಆರೋಪಿಗಳಾದ ವೇದಾವಲಂ, ರಂಜಿತ್ ಶಂಕರ್, ದೇಬೇಶ್ ಚಕ್ರವರ್ತಿ, ಪ್ರಕಾಶ್ ಮತ್ತು ರಂಜಿತ್ ಸೇರಿದಂತೆ ಐದು ಜನರನ್ನು ಡಿವೈಎಸ್ಪಿ ಪ್ರಭಾಕರ್ ರವರ ನೇತೃತ್ವದ ತಂಡವು ಬಂಧಿಸಿದ್ದು ಇನ್ನು ಮೂರ್‍ನಾಲ್ಕು ಮಂದಿ ತಲೆಮರೆಸಿಕೊಂಡಿದ್ದು, ಉಳಿದ ಆರೋಪಿಗಳಿಗಾಗಿ ತಲಾಶೆ ನಡೆಸುತ್ತಿದ್ದಾರೆ. ಎಂಟನೇ ಆರೋಪಿ ಅಪ್ಪು ಎಂಬಾತ ತನ್ನ ಕಂಬಟ್ಟು ಗ್ರಾಮದ ಮರವೊಂದಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ವಿಚಾರಣೆ ನಂತರ ಒಂಭತ್ತು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. 48 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಎಸ್ಪಿ ಮಣಿಕಂಠರವರು ಶ್ಲಾಘಿಸಿ ಅಭಿನಂದಿಸಿದ್ದಾರೆ. ☯


ಪತ್ರಿಕಾಗೋಷ್ಠಿಯಲ್ಲಿ ಪೊಲೀಸ್ ಅಧಿಕಾರಿಗಳು


ಸಿಸಿ ಕ್ಯಾಮರಾವನ್ನು ಪರಿಶೀಲಿಸುತ್ತಿರುವ ಅಧಿಕಾರಿಗಳು


ಆತ್ಮಹತ್ಯೆ ಮಾಡಿಕೊಂಡ ಆರೋಪಿ ಅಪ್ಪು


ಆರೋಪಿಗಳನ್ನು ಬಂಧಿಸಿರುವ ಪೊಲೀಸ್ ಅಧಿಕಾರಿಗಳು


ಪೊಲೀಸರಿಗೆ ಕೃತಜ್ಞತೆ ಸಲ್ಲಿಸುತ್ತಿರುವ ಚಿನ್ನದ ವ್ಯಾಪಾರಿ ಚೇತನ್ ಮತ್ತು ದೀಪಕವ

3 ☞

ಲೇಔಟ್‌ನಲ್ಲಿ ನಡೆದಿರುವ ಮಾಜಿ ಪೊಲೀಸ್ ಮಹಾ ನಿರ್ದೇಶಕ ಓಂಪ್ರಕಾಶ್ ಅವರ ಕೊಲೆ ಪ್ರಕರಣದ ತನಿಖೆಯನ್ನು ಮಡಿವಾಳ ಉಪ ವಿಭಾಗದ ಎಸಿಪಿ ವಾಸುದೇವ್ ನಡೆಸುತ್ತಿದ್ದಾರೆ. ಓಂಪ್ರಕಾಶ್ ಅವರ ಮಗ ಕಾರ್ತಿಕ್ ಈ ಸಂಬಂಧ ದೂರು ನೀಡಿದ್ದು, ನಿನ್ನೆ ಸಂಜೆಯೇ ಅವರ ತಾಯಿ ಪಲ್ಲವಿ, ತಂಗಿ ಕೃತಿ ಇಬ್ಬರನ್ನೂ ಬಂಧಿಸಿ ಸ್ಟೇಟ್ಸ್ ಹೋಂನಲ್ಲಿಟ್ಟಿದ್ದು, ಇಂದು ಬೆಳಿಗ್ಗೆಯಿಂದ ವಿಚಾರಣೆ ನಡೆಸಲಾಗುತ್ತಿದೆ. ಪಲ್ಲವಿ ಅವರಿಗೆ ಮಾನಸಿಕ ಖಾಯಿಲೆ ಇರುವ ಅಂಶಗಳು ಕಾಣಿಸುತ್ತಿವೆ ಎನ್ನಲಾಗಿದೆ.


ತನಿಖಾ ನಿರತರಾದ ಎಸಿಪಿ ವಾಸುದೇವ್

# ಚಿಕ್ಕಮಗಳೂರ ಚಿಕ್ಕಮಲ್ಲಿಗೆ!

ಓಂಪ್ರಕಾಶ್ ಸಾಹೇಬ್ರು ಕರ್ನಾಟಕ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ ಕರ್ತವ್ಯ ನಿಭಾಯಿಸುತ್ತಿದ್ದ ವೇಳೆ, ಚಿಕ್ಕಮಗಳೂರು ಕಡೆಯ ಹೆಂಗಸೊಬ್ಬಳು ಡಿಜಿಪಿ ಕಚೇರಿ ಬಳಿಗೆ ಬಂದು, ಓಂ... ನನ್ನನ್ನು ಪ್ರೇಮಿಸಿ ಮೋಸ ಮಾಡಿದ್ದಾರೆ, ನನಗೆ ನ್ಯಾಯ ಬೇಕು ಎಂಬುದಾಗಿ ಧರಣಿ ಹೂಡಿದ್ದಳು! ಇದು ಆವತ್ತಿಗೆ ಭಾರಿ ಸುದ್ದಿಯಾಗಿ ಓಂಪ್ರಕಾಶ್ ಕುಟುಂಬದಲ್ಲಿ ಬಿರುಗಾಳಿ ಎಬ್ಬಿಸಿತ್ತು. ಓಂ ಪತ್ನಿ ಪಲ್ಲವಿ ಬಹುಷಃ ಆವಾಗಿನಿಂದಲೇ ಗಂಡನ ವಿರುದ್ಧ ತಿರುಗಿ ಬಿದ್ದು ನಿತ್ಯ ಕದನ ಶುರುವಾಗಿರಬಹುದು. ಈಗ ನೋಡಿದರೆ ಆಸ್ತಿ ಕಲಹದಿಂದ ಈ ಕೊಲೆ ನಡೆದಿರಬಹುದು ಎಂದು ಶಂಕಿಸಲಾಗುತ್ತಿದೆ. ಓಂ ಅವರು ತಮ್ಮ ಸೋದರಿ ಹೆಸರಿನಲ್ಲಿ ಬಹಳಷ್ಟು ಆಸ್ತಿ ಮಾಡಿಟ್ಟಿದ್ದರಂತೆ. ಇದು ಪಲ್ಲವಿ ಅವರ ಆಕ್ರೋಶಕ್ಕೆ ಕಾರಣವಾಗಿತ್ತು ಎನ್ನಲಾಗುತ್ತಿದೆ. ಒಂದಂತೂ ಸತ್ಯ. ಓಂಪ್ರಕಾಶ್ ದಡೂತಿ ಮನುಷ್ಯ. ಹೆಂಡ್ತಿ ಕಾಟಕ್ಕೆ ಹೆದರಿ ಗನ್ ಹಿಡಿದುಕೊಂಡು ಹೆದರಿಸುತ್ತಿದ್ದರೋ ಏನೋ.

ಮೊನ್ನೆ ಕೂಡ ಅವರು ಹೆಂಡ್ತಿ ಸಾಯಿಸಿಬಿಡುತ್ತಾಳೆ ಎಂದು ಹೆದರಿಕೊಂಡು ಕಿರಿಯ ಮಗಳು ಸರಿತಾ ಮನೆಗೆ ಹೋಗಿದ್ದುಬಿಟ್ಟಿದ್ದರಂತೆ. ಆದರೆ, ಘಾಟಿ ಪತ್ನಿ ಪಲ್ಲವಿ, ಮಗಳು ಕೃತಿ ಅಲ್ಲಿರಲು ಬಿಡದೆ ಇಬ್ಬರೂ ಹೋಗಿ ಮಸ್ಕಾ ಹೊಡೆದು ಓಂ ಅವರನ್ನು ವಾಪಸ್ ಮನೆಗೆ ಕರೆದುಕೊಂಡು ಬಂದಿದ್ದರಂತೆ.

ಕೊಲೆ ಮಾಡುವ ಉದ್ದೇಶದಿಂದಲೇ ಈ ರೀತಿ ಕರೆತಂದು ಕೊಂದಿದ್ದಾರೆ ಅಂತಲೇ ಓಂಪ್ರಕಾಶ್ ಮಗ ಕಾರ್ತಿಕೇಶ್ ದೂರು ಸಲ್ಲಿಸಿದ್ದಾರೆ. ಹೀಗಾಗಿ, ಅಮ್ಮ ಮಗಳಿಬ್ಬರು ಅರೆಸ್ಟ್ ಆಗಿದ್ದಾರೆ. ಅಮ್ಮ ಮಗಳಿಬ್ಬರೂ ಖಿನ್ನತೆ ಖಾಯಿಲೆಯಿಂದ ಬಳಲುತ್ತಿರುವುದರಿಂದ, ಮೊದಲು ಚಿಕಿತ್ಸೆ, ಆಮೇಲೆ ವಿಚಾರಣೆ ಎಂಬಂತ ಪರಿಸ್ಥಿತಿ ಉದ್ಭವಿಸಿದೆ... ☯


ಪತ್ನಿ ಪಲ್ಲವಿ ಜೊತೆ

ಕೊಲೆಯಾದ ಓಂಪ್ರಕಾಶ್ (68) ಅವರು ಬಿಹಾರದ ಚಂಪಾರಣ್ ಜಿಲ್ಲೆಯ ಪಿಪರ್ಸಿ ಗ್ರಾಮದವರಾಗಿದ್ದು, ಅವರು 1981ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ. ಸದ್ಯ ಓಂಪ್ರಕಾಶ್ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಸೆಂಟ್ ಜಾನ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಓಂಪ್ರಕಾಶ್ ಅವರು ಕರ್ನಾಟಕ ಗೃಹ ರಕ್ಷಕ ದಳ, ಅಗ್ನಿಶಾಮಕ ದಳಗಳಲ್ಲಿ ಮಹಾನಿರ್ದೇಶಕರಾಗಿದ್ದ ಅವರು, 2015ರಿಂದ 2017ರವರೆಗೂ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ☯


ರಿಕ್ಕಿ ರೈ

# ಮಾಜಿ ಭೂಗತ ದೊರೆ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ಗುಂಡಿನ ದಾಳಿ!



ಮುತ್ತಪ್ಪರೈ


**ಭೂಗತ ಲೋಕದಲ್ಲಿ ಡಾನ್‌ಗಳಾಗಿ ಮೆರೆದವರೆಲ್ಲಾ ಮಣ್ಣುಪಾಲಾಗಿರುವ ಸಂಗತಿಗಲು ಬಹಳಷ್ಟಿವೆ. ಈ ಬೂಗತ ಜಗತ್ತೇ ಹಾಗೆ. ಒಮ್ಮೆ ಅದರೊಲಗೆ ಪ್ರವೇಶ ಮಾಡಿದರೆ ಮತ್ತೆ ವಾಪಸ್ ಬರಲು ಸಾಧ್ಯವಾಗುವುದಿಲ್ಲ. ಅದು ಒನವವೇ ಇದ್ದಂತೆ. ನಾವು ಬಿಟ್ಟರು ಅದು ನಮ್ಮನ್ನು ನಮ್ಮ ಕುಟುಂಬದ ಸದಸ್ಯರನ್ನು ಬಿಡುವುದಿಲ್ಲ. ಯಾಕೆಂದರೆ ಭೂಗತ ಜಗತ್ತಿನಲ್ಲಿ ಹಣ, ಭೂಮಿ, ಆಸ್ತಿ, ಪ್ರತಿಷ್ಠೆ ಹಾಗೂ ಹೆಣ್ಣಿಗಾಗಿ ನಿರಂತರವಾಗಿ ದಾಳಿ, ಪ್ರತಿ ದಾಳಿಗಳು ನಡೆಯುತ್ತಲೇ ಇರುತ್ತವೆ. ಕೊಲೆ, ಸುಲಿಗೆ, ಚಾಕು, ಚೂರಿ, ಮಚ್ಚು, ಲಾಂಗ್, ಬಂದೂಕು, ಶೂಟ್‌ಔಟ್‌ಗಳು ಸರ್ವೇ ಸಾಮಾನ್ಯ. ಭೂಗತ ಜಗತ್ತಿನ ಡಾನ್ ಎನಿಸಿಕೊಂಡವನು ಜೀವಭಯದಿಂದಲೇ ದಿನ ಕಳೆಯುವುದು ಸಾಮಾನ್ಯ. ಒಂದು ಕಾಲದಲ್ಲಿ ಬೆಂಗಳೂರಿನ ಭೂಗತ ಜಗತ್ತನ್ನೆ ಆಳಿದ ಮತ್ತು ಜಯ ಕರ್ನಾಟಕ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಮುತ್ತಪ್ಪ ರೈ ಈ ಲೋಕವನ್ನೇ ಬಿಟ್ಟು ಹೋದರೂ ಸಹ ಅವರು ಕಟ್ಟಿಕೊಂಡ ಶತ್ರುಗಳ ಪಡೆ ಇಂದಿಗೂ ಜೀವಂತವಾಗಿದೆ. ಈಗ ಅದು ತಲೆ ಎತ್ತಿ ಹೆಡೆಬಿಚ್ಚಿ ಮುತ್ತಪ್ಪ ರೈ ಮಗನ ಮೇಲೆ ಗುಂಡಿನ ದಾಳಿ ನಡೆಸಿದೆ.**

### ಏನಿದು ಘಟನೆ...?

ಕಳೆದ ವಾರ ಶುಕ್ರವಾರದಂದು ತಡರಾತ್ರಿ 12.30ರಿಂದ 1 ಗಂಟೆಯ ಸುಮಾರಿಗೆ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ಶೂಟೌಟ್ ನಡೆದಿದೆ. ಈ ಸಂದರ್ಭದಲ್ಲಿ ರಿಕ್ಕಿ ರೈ ಬಿಡದಿ ಮೆಯಿಂದ ಬೆಂಗಳೂರಿಗೆ ಹೋಗುತ್ತಿದ್ದ ವೇಳೆ ಅವರ ಮನೆಯ ಹೊರಗಡೆಯ ಕಾಂಪೌಡ್ ಬಳಿ ಶೂಟೌಟ್ ಮಾಡಲಾಗಿದ್ದು, ಡ್ರೈವರ್ ಹಾಗೂ ಗನ್‌ಮ್ಯಾನ್ ಜೊತೆ ಫಾರ್ಚೂನರ್ ಕಪ್ಪು ಬಣ್ಣದ್ದು, ಕೆಎ-53, ಎಂ-7128 ನಂಬರಿನ ಕಾರ್‌ನಲ್ಲಿ ತೆರಳುತ್ತಿದ್ದಾಗ ದುಷ್ಕರ್ಮಿಗಳು ಒಂದು ಸುತ್ತು ಗುಂಡಿನ ದಾಳಿ ನಡೆಸಿದ್ದಾರೆ. ಆದರೆ ಕಾರಿನಲ್ಲಿದ್ದ ಮೂವರಿಗೂ ದು ಗುಂಡಿನ ದಾಳಿ ಎಂಬುದು ಅರಿವಿಗೆ ಬಂದಿಲ್ಲ. ಟಪ್ ಎಂದು ಜೋರಾದ ಶಬ್ದ ಬಂದಿದ್ದರಿಂದ ಕಾರು ಪಂಕ್ಚರ್ ಆಗಿರಬೇಕೆಂದು ಕೊಂಡಿದ್ದಾರೆ. ಎಲ್ಲಾ ಟೈರ್‌ಗಳು ಸರಿಯಿದದ ಕಾರಣ ರೈಲೆವ ಕ್ರಾಸ್‌ವರೆಗೂ ಬಂದಿದಾದರೆ.

ಸಾಮಾನಯುವಾಗಿ ರಿಕಕ ರೈ ಕಾರು ಚಾಲನೆ ಮಾಡಿಕೊಂಡು ಬಿಡದಿಯ. ಕರಿಯಪ್ಪನದೊಡ್ಡಿ ಮನೆಗೆ ಬರುತ್ತಿದ್ದರು. ಹೀಗಾಗಿ ದಾಳಿಕೋರರು ಚಾಲಕನನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ್ದಾರೆ. ಕಾರು ಚಲಾಯಿಸುತ್ತಿದ್ದ ಚಾಲಕ ಬಸವರಾಜು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಆದರೆ ಹಿಂಬದಿ ಸೀಟಿನಲ್ಲಿದ್ದ ರಿಕ್ಕಿ ರೈರವರ ಕೈಗೆ ಮತ್ತು ಮೂಗಿಗೆ ತಾಗಿ ಗಂಭೀರವಾಗಿ ಗಾಯಗೊಂಡಿದ್ದಾರೆ. ತಕ್ಷಣ ರಿಕ್ಕಿ ರೈರನ್ನು ಬಿಡದಿಯ ಭರತ್ ಕೆಂಪಣ್ಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಈ ಘಟನೆಯಲ್ಲಿ ರಿಕ್ಕಿ ರೈ ಜೊತೆಗಿದ್ದ ಕಾರು ಚಾಲಕ ಬಸವರಾಜು ಮತ್ತು ಗನ್‌ಮ್ಯಾನ್ ರಾಜ್‌ಪಾಲ್‌ಗೂ ಸಣ್ಣಪುಟ್ಟ ಗಾಯಗಳಾಗಿವೆ. ಇಬ್ಬರಿಗೂ ಸ್ಥಳೀಯವಾಗಿ ಚಿಕಿತ್ಸೆ ಕೊಡಿಸಿ ಘಟನೆ ಕುರಿತು ವಿಚಾರಣೆ ನಡೆಸಲಾಗುತ್ತಿದೆ. ಜೊತೆಗೆ ಸ್ಥಳಕ್ಕೆ ಶ್ವಾನದಳ ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಬೇಟಿ ನೀಡಿ ಪರಿಶೀಲನೆ ನಡೆಸಿದರು.


ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಿಕ್ಕಿ ರೈ


ಬಿಡದಿಯಲ್ಲಿರುವ ಮುತ್ತಪ್ಪರೈ ಮನೆ

ಎರಡು ದಿನಗಳ ಹಿಂದೆಯಷ್ಟೇ ರಷ್ಯಾದಿಂದ ಹಿಂದಿರುಗಿದ್ದ ರಿಕ್ಕಿ ರೈರವರು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು. ತಂದೆ ಮುತ್ತಪ್ಪ ರೈ ಆಸ್ತಿ ವಿಚಾರಕ್ಕೆ ಕೆಲವರ ಜೊತೆ ಮನಸ್ತಾಪ ಇತ್ತು. ಮುತ್ತಪ್ಪರೈ ನಿಧನದ ನಂತರ ರಿಕ್ಕಿ ರೈ ಮತ್ತು ಕೆಲವರ ಜೊತೆ ಗಲಾಟೆ ಮಾಡಿಕೊಂಡಿದ್ದರು. ಹಳೆ ದ್ವೇಷದ ಹಿನ್ನೆಲೆಯಲ್ಲಿ ಶಾರ್ಪ್‌ಶೂಟರ್ ಮೂಲಕ ದಾಳಿ ನಡೆಸಿ ಹತ್ಯೆಗೆ ಪ್ರಯತ್ನಿಸಿರುವ ಅನುಮಾನವಿದೆ ಎನ್ನಲಾಗಿದೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್‌ಗೌಡ ಮತ್ತು ಡಿವೈಎಸ್ಪಿ ಶ್ರೀನಿವಾಸ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಿಡದಿ ಪೊಲೀಸ್ ಠಾಣಾ ಇನ್ಸ್‌ಪೆಕ್ಟರ್ ಶಂಕರ್ ನಾಯಕ್ ನೇತೃತ್ವದಲ್ಲಿ ತನಿಖೆ ಆರಂಭಇಸಲಾಗಿದ್ದು, ರಿಕ್ಕಿ ರೈ ಮೇಲಿನ ಗುಂಡಿನ ದಾಳಿಗೆ ಸಂಬಂಧಿಸಿದಂತೆ ಬಿಡದಿ ಪೊಲೀಸ್ ಠಾಣೆಯಲ್ಲಿ ಕಾರು ಚಾಲಕ ಬಸವರಾಜು ನೀಡಿದ ದೂರಿನ ಮೇರೆಗೆ ಮುತ್ತಪ್ಪ ರೈಗೆ ಆಪ್ತರಾಗಿದ್ದ ರಾಕೇಶ್ ಮಲ್ಲಿ, ಮುತ್ತಪ್ಪರೈ ಎರಡನೇ ಪತ್ನಿ ಅನುರಾಧಷ ನಿತೇಶ್, ಎಸ್ಟೇಟ್ ಮಾಲೀಕರಾದ ನಿತೇಶ್ ಶೆಟ್ಟಿ, ವೈದ್ಯನಾಥನ್ ಹಾಗೂ ಸಹಚರರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ರಿಕ್ಕಿ ರೈ ಅವರ ಮನೆಯಲ್ಲಿದ್ದ ಭದ್ರತಾ ಸಿಬ್ಬಂದಿ ಮತ್ತು ಅಡುಗೆ ಸಿಬ್ಬಂದಿಯನ್ನು ಸಹ ವಿಚಾರಣೆಗೆ ಒಳಪಡಿಸಲಾಗಿದೆ. ಘಟನಾ ಸ್ಥಳದಲ್ಲಿ ಮೊಬೈಲ್ ಮತ್ತು ಗುಂಡುಗಳು ಪತ್ತೆಯಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸದ್ಯಕ್ಕೆ ಮೂವರು ಡಿವೈಎಸ್ಪಿಗಳ ನೇತೃತ್ವದಲ್ಲಿ ತಂಡ ರಚಿಸಿದ್ದು, ಎಫ್‌ಎಸ್‌ಎಲ್ ತಂಡದಿಂದ ಎವಿಡೆನ್ಸ್‌ಗಳ ಮಾಹಿತಿ ಪಡೆದುಕೊಂಡು ತನಿಖೆ ನಡೆಸುತ್ತಿದ್ದಾರೆ.


ಜಿಲ್ಲಾ ಎಸ್ಪಿ ಶ್ರೀನಿವಾಸ್‌ಗೌಡ


ಎಎಸ್ಪಿ ಸುರೇಶ್

**ರಾಮನಗರ**

✍ ಶಾಂತರಾಜು ಜಿ. ಕಲ್ಲಹಳ್ಳಿ

### ದೂರಿನಲ್ಲಿ ಏನಿದೆ?

ಬಿಡದಿ ಮನೆಗೆ ರಿಕ್ಕಿ ರೈ ಮತ್ತು ನಾವುಗಳು ಬಂದ ಒಂದೂವರೆ ಗಂಟೆಯ ನಂತರ ಮಧ್ಯರಾತ್ರಿ 12.50ಕ್ಕೆ ಮತ್ತೆ ಬೆಂಗಳೂರಿಗೆ ಹೊರಟೆವು. ಕಾರು ಮನೆಯ ಕಾಂಪೌಂಡ್ ದಾಟಿ ಸ್ವಲ್ಪ ಮುಂದಕ್ಕೆ ಬಂದಾಗ, ಈ ಹಿಂದೆ ಟಪ್ ಎಂದು ಶಬ್ದ ಕೇಳಿದ ಜಾಗದಲ್ಲೇ ಏಕಾಏಕಿ ಗುಂಡಿನ ದಾಳಿ ನಡೆಯಿತು. ನನಗೆ ತಪ್ಪಿದ ಗುಂಡು ಹಿಂದೆ ಕುಳಿತಿದ್ದ ರಿಕ್ಕಿ ರೈರವರ ಮೂಗು ಮತ್ತು ಬಲ ತೋಳಿಗೆ ತಗುಲಿ ರಕ್ತ ಸೋರುತ್ತಿತ್ತು. ಕೂಡಲೇ ನಾನು ಕೆಳಕ್ಕಿಳಿದು ಕಾರಿನ ಡೋರ್ ತೆರೆದು ನೋಡಿದಾಗ, ರಿಕ್ಕಿ ರೈರವರ ಮೂಗು ಛಿದ್ರವಾಗಿ ಮುಖ ರಕ್ತಮಯವಾಗಿತ್ತು. ಆಗ ನನ್ನ ಶರ್ಟ್ ಬಿಚ್ಚಿ ರಕ್ತ ಸೋರದಂತೆ ತಡೆಯಲು ಪ್ರಯತ್ನಿಸಿದೆ. ನಂತರ ಅದೇ ಕಾರಿನಲ್ಲಿ ಗನ್‌ಮ್ಯಾನ್ ರಾಜ್‌ಪಾಲ್ ಮತ್ತು ನಾನು ರಿಕ್ಕಿ ರೈರವರನ್ನು ಬಿಡದಿಯ ಭರತ್ ಕೆಂಪಣ್ಣ ಆಸ್ಪತ್ರೆಗೆ ಕರೆದುಕೊಂಡು ಬಂದು ಪ್ರಥಮ ಚಿಕಿತ್ಸೆ ಕೊಡಿಸಿದೆವು. ವೈದ್ಯರ ಸೂಚನೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯ ಆ್ಯಂಬುಲೆನ್ಸ್‌ನಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ರಿಕ್ಕಿ ರೈರವರನ್ನು ಕರೆದುಕೊಂಡು ಹೋಗಿ ದಾಖಲಿಸಿದೆವು.

## ಸೆಲ್ಫ್ ಅಟ್ಯಾಕ್‌ನಲ್ಲಿ ಸಂಕಷ್ಟಕ್ಕೆ ಸಿಲುಕಿದಿರಾ ರಿಕ್ಕಿ ರೈ ?

ಈ ಪ್ರಕರಣದಲ್ಲಿ ಗನ್‌ಮ್ಯಾನ್‌ಗಳನ್ನು ವಿಚಾರಣೆ ನಡೆಸಿದ ವೇಳೆ ಪೊಲೀಸರಿಗೆ ಹಲವಾರು ಹೇಳಿಕೆಗಳು ಸಂಶಯ ಮೂಡುವಂತಿದ್ದು, ಆರೋಪಿ ರಾಕೇಶ್ ಮಲ್ಲಿಯನ್ನು ಬಿಡದಿ ಪೊಲೀಸ್ ಠಾಣೆಗೆ ಕರೆಸಿ ವಿಚಾರಣೆ ನಡೆಸಿದ್ದಾರೆ. ಎರಡನೇ ಆರೋಪಿ ಅನುರಾಧರವರು ರಾಮನಗರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ. ಒಟ್ಟಾರೆ ಈ ವಿಚಾರಕ್ಕೆ ತಮಗಿದ್ದ ವೈರಿಗಳನ್ನು ಸಿಲುಕಿಸುವ ಸಲುವಾಗಿ ರಿಕ್ಕಿ ರೈ ಸೆಲ್ಫ್ ಅಟ್ಯಾಕ್ ಮಾಡಿಸಿಕೊಂಡ್ರ ಎಂಬ ಮಾತುಗಳು ಕೇಳಿಬರುತ್ತಿವೆ. ಕಾರು ಚಾಲಕನನ್ನು ಗುರಿಯಾಗಿಸಿಕೊಂಡು ಸೆಲ್ಫ್ ಅಟ್ಯಾಕ್ ಶೂಟೌಟ್ ಮಾಡಿಸಿಕೊಳ್ಳಲು ಹೋಗಿ ರಿಕ್ಕಿ ರೈ ಅವರೇ ಸಂಕಷ್ಟಕ್ಕೆ ಸುಲಿಕಿದ್ದಾರೆ ಎನ್ನಲಾಗುತ್ತಿದೆ. ಈ ಕೇಸು ಬೇರೆ ಕಡೆಗೆ ತಿರುಗಿಸುವ ಸಲುವಾಗಿ ನಾಲ್ವರ ಮಲೆ ಅನುಮಾನ ವ್ಯಕ್ತಪಡಿಸಿ ದೂರು ಕೊಡಿಸಿದ್ದಾರೆ. ಸಿಮ್ ಇಲ್ಲದ ಮೊಬೈಲ್ ಬಿಸಾಕಿ ಪ್ರಕರಣ ದಿಕ್ಕುತಪ್ಪಿಸುವ ಯತ್ನ ನಡೆಸಲಾಗಿದೆ. ಗನ್‌ಗಳು ಮತ್ತು ಬುಲೆಟ್‌ಗಳ ಸಂಖ್ಯೆಯನ್ನು ಪೊಲೀಸರು ಪರಿಶೀಲಿಸಿದ್ದಾರೆ. ಭದ್ರತೆಗಾಗಿ ಬಳಸುತ್ತಿದ್ದ ಗನ್‌ಗಳೆಷ್ಟು, ಎಷ್ಟಕ್ಕೆ ಲೈಸನ್ಸ್ ಇದೆ, ಎಷ್ಟು ಬುಲೆಟ್ ಇದೆ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕುವ ವೇಳೆ ಪೊಲೀಸರಿಗೆ ಮಹತ್ವದ ಸುಳಿವು ಸಿಕ್ಕಿದೆ ಎನ್ನಲಾಗಿದೆ. ಇವೆಲ್ಲದರ ವಿಚಾರಗಳ ಆಧಾರದ ಮೇಲೆ ರಿಕ್ಕಿ ರೈ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂಬುದು ಬಿಗ್ ಟ್ವಿಸ್ಟ್ ಎನಿಸುತ್ತಿದೆ.


ಬಿಡದಿ ಠಾಣೆಗೆ ಹಾಜರಾಗುತ್ತಿರುವ ರಾಕೇಶ್ ಮಲ್ಲಿ

## ಪಾಪದ ಜನರಿಗೆ ಅರ್ಧ ಅಡಿ ಜಾಗವನ್ನೂ ಕೊಟ್ಟಿಲ್ಲ!

ರಿಕ್ಕಿ ರೈ ಮೇಲೆ ಗುಂಡಿನ ದಾಳಿ ಪ್ರಕರಣ ಸಂಬಂಧ ಮುತ್ತಪ್ಪ ರೈ ಅವರ ಒಂದು ಕಾಲದ ಆಪ್ತ ಹಾಗೂ ಕಾಂಗ್ರೆಸ್ ಮುಖಂಡ ರಾಕೇಶ್ ಮಲ್ಲಿ, ಎರಡನೇ ಪತ್ನಿ ಅನುರಾಧ, ನಿತೇಶ್ ಶೆಟ್ಟಿ ವೈದ್ಯನಾಥನ್ ಎಂಬುವರ ವಿರುದ್ಧ ಶಂಕೆ ವ್ಯಕ್ತಪಡಿಸಿ ದೂರು ನೀಡಲಾಗಿದ್ದು, ಈ ಪೈಕಿ ಮೊದಲ ಆರೋಪಿ ರಾಕೇಶ್ ಮಲ್ಲಿ ಅವರು ಪೊಲೀಸ್ ನೋಟೀಸ್ ಕೊಟ್ಟ ಒಂದೇ ದಿನಕ್ಕೆ ಬಿಡದಿ ಪೊಲೀಸ್ ಠಾಣೆಗೆ ಹಾಜರಾಗಿ ವಿಚಾರಣೆ ಎದುರಿಸಿದ್ದಾರೆ. ಮುತ್ತಪ್ಪ ರೈ ಅವರ ಎರಡನೇ ಪತ್ನಿ ಅನುರಾಧ ಜರ್ಮನಿಯಲ್ಲಿದ್ದು, ಆಕೆ ಅಲ್ಲಿಂದಲೇ ಬೆಂಗಳೂರು ವಕೀಲರ ಸಂಪರ್ಕಿಸಿ ಹೈ ಕೋರ್ಟ್‌ನಲ್ಲಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ. ನಿತೇಶ್ ಎಸ್ಟೇಟ್‌ನ ಇನ್ನಿಬ್ಬರು ರಿಯಲ್ ಎಸ್ಟೇಟ್ ಉದ್ಯಮಿಗಳು ಇನ್ನೂ ಪೊಲೀಸ್ ಬಳಿ ಬಂದಿಲ್ಲ. ಅದಿರಲಿ, ಬಿಡದಿ ಪೊಲೀಸ್ ಮುಂದೆ ಹಾಜರಾಗಿ ತನ್ನ ಹೇಳಿಕೆ ದಾಖಲಿಸಿ ಹೊರಗಡೆ ಬಂದ ಮೊದಲ ಆರೋಪಿ ರಾಕೇಶ್ ಮಲ್ಲಿ ಮಾಧ್ಯಮಗಳ ಮುಂದೆ ಹೇಳಿದ್ದೇನು?

ನಾನು ಅಪರಾಧ ಲೋಕ ತ್ಯಜಿಸಿ 22 ವರ್ಷ ಕಳೆದು ಹೋಗಿದೆ. ಅಂದಿನಿಂದ ನನ್ನ ವಿರುದ್ಧ ಒಂದೇ ಒಂದು ಕ್ರಿಮಿನಲ್ ಕೇಸ್ ಇಲ್ಲಾ. ಈವಾಗ ಏಕಾಏಕಿ ಇಂಥ ಕೇಸ್ ಹಾಕಿದ್ರೆ?! ನನಗೂ ಈ ಘಟನೆಗೂ ಸಂಬಂಧವಿಲ್ಲ.. ಹಾಗೆ ನೋಡಿದ್ರೆ, ಹಿಂದೆ ಮುತ್ತಪ್ಪ ರೈ ಅವರಿಗೆ ಯಾರು ಹೊಡೆದಿದ್ರೋ ಅವರ ಜೊತೆ ಸೇರಿಕೊಂಡೇ ಮುತ್ತಪ್ಪ ರೈ ನನ್ನನ್ನು ಮುಗಿಸಲು ಪ್ರಯತ್ನ ಪಟ್ಟಿದ್ರು! ಈಗ ಅವರು ಇಲ್ಲಾ, ಅವರ ಮಕ್ಕಳು ಆ ಕೆಲಸ ಮಾಡ್ತಿದ್ದಾರೆ....!!


ನೀವು ಮೀಡಿಯಾ ದವರು ಗೊತ್ತಿಲ್ಲದೇ ಏನೇನೋ ಸುದ್ದಿ ಹಾಕಿಬಿಡ್ತೀರಿ, ಸತ್ಯ ತಿಳಿದುಕೊಂಡು ಪ್ರಸಾರ ಮಾಡಬೇಕಲ್ವಾ, ಮುತ್ತಪ್ಪರೈ ತಮ್ಮ ಸಾವಿರಾರು ಕೋಟಿ ಮೌಲ್ಯದ ಆಸ್ತಿಯಲ್ಲಿ ತಮ್ಮಲ್ಲಿ ಕೆಲಸ ಮಾಡಿಕೊಂಡಿದ್ದ ಕೆಲಸಗಾರರಿಗೆ ಒಂದೊಂದು ಸೈಟ್ ಮತ್ತು ಹಣ ಕೊಟ್ಟಿದ್ದಾರೆ ಎಂದು ಸುದ್ದಿ ಮಾಡಿದ್ದೀರಿ, ಒಂದು ಸೈಟ್ ಅಲ್ಲ... ಪಾಪದ ಜನರಿಗೆ ಅರ್ಧ ಅಡಿ ಜಾಗವನ್ನೂ ಕೊಟ್ಟಿಲ್ಲ ಮುತ್ತಪ್ಪ ರೈ! ಪಾಪದ ಜನರಿಗೆ ಕೊಟ್ರೆ ಕೊಟ್ಟಿದ್ರೆ ಸಂತೋಷ ಅಲ್ವೇ. ಹಾಗೇನಾದ್ರೂ ಕೊಟ್ಟಿದ್ರೆ ಇಲ್ಲೇ ರಾಮನಗರ ರವಿನ್ಯೂ ಇಲಾಖೆಯಲ್ಲಿ ರಿಜಿಸ್ಟರ್ ಆಗಿರಬೇಕು ಅಲ್ವೇ, ದಾಖಲೆ ಪರಿಶೀಲಿಸಿ ಆಮೇಲೆ ನನ್ಹತ್ರ ಬನ್ನಿ... ಎಂಬಿತ್ಯಾದಿಯಾಗಿ ವಾಗ್ದಾಳಿ ನಡೆಸಿದ್ದಾರೆ.

ಅಂದಹಾಗೆ, ರಾಕೇಶ್ ಮಲ್ಲಿ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಕುಂದಾಪುರದಿಂದ ಕಾಂಗ್ರೆಸ್ ಅಭ್ಯರ್ಥಿ ಯಾಗಿ ಸ್ಪರ್ಧಿಸಿ ಬಿಜೆಪಿ ಅಭ್ಯರ್ಥಿ ಎದಿರು ಪರಾಭವಗೊಂಡಿದ್ದರು.



### ರಿಕ್ಕಿ ರೈ ಹಿನ್ನೆಲೆ

ದಾಳಿಗೊಳಗಾದ ರಿಕ್ಕಿ ರೈ ವಿದೇಶದಲ್ಲಿ ಎಂಬಿಎ ವ್ಯಾಸಂಗ ಮಾಡಿದ್ದಾರೆ. ರಿಕ್ಕಿ ರೈಗೆ ಮದುವೆಯಾಗಿದ್ದು, ಪತ್ನಿ ರಷ್ಯಾದವರು. ಎರಡು ವರ್ಷದ ಒಂದು ಗಂಡು ಮಗುವಿದೆ. ಮುತ್ತಪ್ಪ ರೈ ಸಾಯುವ ಒದಲು ಎರಡು ಸಾವಿರ ಕೋಟಿಗೂ ಅಧಿಕ ಆಸ್ತಿಯನ್ನು ವಿಲ್ ಮಾಡಿದ್ದರು. ಮೊದಲ ಪತ್ನಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಮೊದಲ ಪುತ್ರ ರಾಖಿ ರೈ, ಎರಡನೇ ಪುತ್ರ ರಿಕ್ಕಿ ರೈ. ಅಲ್ಲದೇ ಎರಡನೇ ಪತ್ನಿ ಅನುರಾಧ ಹೆಸರಿಗೂ ವಿಲ್ ಮಾಡಿದ್ದರು. ಇಬ್ಬರು ಮಕ್ಕಳಾದ ರಾಖಿ ಹಾಗೂ ರಿಕ್ಕಿಗೆ ತಲಾ ಒಂದೂವರೆ ಸಾವಿರ ಕೋಟಿ ಆಸ್ತಿಯನ್ನು ನೀಡಿದ್ದಾರೆ. ಕೆಲವು ವರ್ಷಗಳಿಂದ ಮೊದಲ ಪುತ್ರ ರಾಖಿ ರೈ ದುಬೈನಲ್ಲಿ ನೆಲೆಸಿ ಇಂಪೋರ್ಟ್ ಎಕ್ಸ್‌ಪೋರ್ಟ್ ಬಿಸಿನೆಸ್ ಮಾಡಿಕೊಂಡಿದ್ದಾರೆ. ಹೀಗಾಗಿ ಸಹೋದರ ರಾಖಿ ರೈಗೆ ಸೇರಿದ ಆಸ್ತಿಪಾಸ್ತಿ ಹಾಗೂ ಭಾರತದಲ್ಲಿನ ವ್ಯವಹಾರಗಳನ್ನು ರಿಕ್ಕಿ ರೈ ನೋಡಿಕೊಳ್ಳುತ್ತಿದ್ದಾರೆ. ಇನ್ನು ರಿಕ್ಕಿ ರೈ ರಷ್ಯಾದ ಹುಡುಗಿಯನ್ನು ಮದುವೆಯಾದ ಹಿನ್ನೆಲೆಯಲ್ಲಿ ವರ್ಷದ ಬಹುತೇಕ ಕಾಲ ವಿದೇಶದಲ್ಲೇ ಕಳೆಯುತ್ತಿದ್ದಾರೆ. ಬೆಂಗಳೂರಿನ ಸದಾಶಿವನಗರದಲ್ಲಿ ರಿಕ್ಕಿ ರೈಗೆ ಸೇರಿದ ಅಪಾರ್ಟ್‌ಮೆಂಟ್ ಇದೆ.


ಮುತ್ತಪ್ಪರೈ ಜೊತೆ ರಿಕ್ಕಿರೈ


ರಾಕೇಶ್ ಮಲ್ಲಿ


ವಿದೇಶದಲ್ಲಿರುವ ರಿಕ್ಕಿ ರೈ ಪತ್ನಿ ಜೊತೆ

ಸದಾಶಿವನಗರದ ಅಪಾರ್ಟ್‌ಮೆಂಟ್ ಹೊರತುಪಡಿಸಿದರೆ ಹೆಚ್ಚು ಕಾಲ ಬಿಡದಿಯ ಮನೆಯಲ್ಲಿ ರಿಕ್ಕಿ ಇರುತ್ತಾರೆ. ರಿಕ್ಕಿ ರೈ ಹಿಂದೆ ಎಂಟ್ಹತ್ತು ಬಾಡಿಗಾರ್ಡ್ ಹಾಗೂ ನಾಲ್ಕೈದು ಗನ್‌ಮ್ಯಾನ್ ಅಷ್ಟೇ ಅಲ್ಲದೆ ಬುಲೆಟ್ ಪ್ರೂಫ್ ಕಾರಿನಲ್ಲಿ ಓಡಾಡುತ್ತಾರೆ. ಆದರೆ ಘಟನಾ ದಿನ ಬುಲೆಟ್ ಪ್ರೂಫ್ ಕಾರಿನಲ್ಲಿ ಇರಲಿಲ್ಲ. ಅಲ್ಲದೇ ಒಬ್ಬ ಡ್ರೈವರ್, ಒಬ್ಬನೇ ಗನ್‌ಮ್ಯಾನ್ ಮಾತ್ರ ಇದ್ದರು.


ರಿಕ್ಕಿ ರೈ ತೋಳಿಗೆ ಗುಂಡು ತಾಕಿರುವುದು


ರಿಕ್ಕಿ ರೈ ಮೂಗಿನ ಮೇಲೆ ಗುಂಡು ತಾಕಿ ರಕ್ತ ಸೋರುತ್ತಿರುವುದು

### ಮುತ್ತಪ್ಪರೈ ಸಂಬಂಧಿ ಪ್ರಕಾಶ್ ರೈ ಹೇಳಿಕೆ

ಬಹುಶಃ ಭೂಗತ ಲೋಕದಲ್ಲಿ ಹೆಸರು ಮಾಡಲು ಮಾಡಿರುವ ಒಂದು ಪ್ರಯತ್ನ ಆಗಿರಬಹುದು ಎಂದಿದ್ದಾರೆ. ಇದೆಲ್ಲ ಮುತ್ತಪ್ಪ ರೈ ವಿರೋಧಿಗಳು ಮಾಡಿರುವ ದುಷ್ಕೃತ್ಯ ಆಗಿರಬಹುದು. ಕುಟುಂಬದಲ್ಲೂ ಕೆಲವು ಸಮಸ್ಯೆಗಳಿವೆ. ರಿಕ್ಕಿ ರೈರವರು ತಮ್ಮ ಮೊದಲ ಪತ್ನಿಗೆ ಈಗಾಗಲೇ ವಿಚ್ಛೇದನ ನೀಡಿದ್ದಾರೆ. ಎರಡನೇ ಪತ್ನಿ ರಷ್ಯಾ ಮೂಲದವರು. ಇತ್ತೀಚೆಗಷ್ಟೇ ರಷ್ಯಾಗೆ ಹೋಗಿ ಬಂದಿದ್ದರು. ಬಿಡದಿಯಲ್ಲಿರುವ ಅವರ ಮನೆಯಲ್ಲಿ ಕೆಲಸ ನಡೆಯುತ್ತಿದೆ. ಈ ಕಾರಣಕ್ಕೆ ರಿಕ್ಕಿ ರೈ ಬಿಡದಿ ಮನೆಯಲ್ಲೇ ಇರುತ್ತಿದ್ದರು. ಇನ್ನೂ ಮುತ್ತಪ್ಪ ರೈ ಆಸ್ತಿ ವಿವಾದದಲ್ಲಿ ಎರಡನೇ ಪತ್ನಿ ಅನುರಾಧ ಜೊತೆಗೂ ಸಮಸ್ಯೆಗಲಿದ್ದವು. ಇಂದಿನ ಕೊಲೆಯತ್ನಕ್ಕೆ ಈ ವಿಚಾರ'ಗಳನ್ನು ತಳ್ಳಿ ಹಾಕುವಂತಿಲ್ಲ. ಆದರೆ ನಿಖರ ಕಾರಣ ಏನು ಎಂಬುದು ಇನ್ನೂ ತಿಳಿದು ಬಂದಿಲ್ಲ ಎಂದು ಪ್ರಕಾಶ್ ರೈ ಹೇಳಿಕೆ ನೀಡಿದ್ದಾರೆ. ಸದ್ಯ ಪ್ರಕರಣವನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ರಿಕ್ಕಿ ರೈರವರ ಹೇಳಿಕೆಗಳನ್ನು ದಾಖಲಿಸಿದ್ದಾರೆ. ಸದ್ಯ ರಿಕ್ಕಿ ರೈಗೆ ಮಣಿಪಾಲ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇತ್ತ ಕಾರು ಚಾಲಕ ನೀಡಿರುವ ದೂರಿನ ಆಧಾರದ ಮೇಲೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ವಿಚಾರಣೆ ನಡೆಸುವ ಸಾಧ್ಯತೆ ಇದೆ.

### ವಕೀಲ ನಾರಾಯಣಸ್ವಾಮಿ ಹೇಳಿಕೆ...


ಮುತ್ತಪ್ಪ ರೈರವರ ಮೇಲೆಯೂ ಹತ್ಯೆಯತ್ನಗಳು ನಡೆದಿದ್ದವು. ಅವರ ನಂತರ ಈಗ ಅವರ ಆಸ್ತಿಯನ್ನು ನೋಡಿಕೊಂಡು ಹೋಗುತ್ತಿರುವ ಮಕ್ಕಳ ಮೇಲೆ ಅಂತಹ ಹತ್ಯೆಯತ್ನಗಳು ನಡೆದಿದೆ ಎಂದು ರಿಕ್ಕಿ ರೈ ಆಪ್ತ ಹಾಗೂ ಅವರ ಪರ ವಕೀಲ ಮತ್ತು ನಾರಾಯಣಸ್ವಾಮಿ ಹೇಳಿಕೆ ನೀಡಿದ್ದಾರೆ. ಗುಂಡಿನ ದಾಳಿಗೆ ತುತ್ತಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲಾಗಿರುವ ರಿಕ್ಕಿ ರೈರವರ ಆರೋಗ್ಯ ವಿಚಾರಿಸಿದ ಬಳಿಕ ಹೇಳಿಕೆ ನೀಡಿದ ವಕೀಲ ನಾರಾಯಣಸ್ವಾಮಿ, ಕೆಲವರ ಸ್ವಾರ್ಥದಿಂದ ಈ ಕೃತ್ಯ ನಡೆದಿರಬಹುದು. ಕೆಲವರ ಮೇಲೆ ಅನುಮಾನವಿರುವುದಾಗಿ ರಿಕ್ಕಿ ರೈರವರು ನೀಡಿರುವ ಹೇಳಿಕೆಯನ್ನು ಆಧರಿಸಿ ಕಾರು ಚಾಲಕ ಬಸವರಾಜು ದೂರು ನೀಡಿದ್ದಾರೆ ಎಂದು ತಿಳಿದು ಬಂದಿದೆ. ತನಿಖೆಯಲ್ಲಿ ಏನು ತಿಳಿದು ಬರಲಿದೆ ಎಂದು ನೋಡಿದ ನಂತರ ಮಾತನಾಡುವುದು ಸೂಕ್ತ ಎಂದಿದ್ದಾರೆ.


ರಿಕ್ಕಿ ರೈ ಮೇಲೆ ಶೂಟೌಟ್ ನಡೆದಿರುವುದು

ಆಸ್ತಿ ವಿಚಾರವಾಗಿ ವಿವಾದಗಳಿದ್ದಿದ್ದು ನಿಜ. ಮುತ್ತಪ್ಪ ರೈ ಅವರ ಎರಡನೇ ಪತ್ನಿಯೊಂದಿಗಿನ ಆಸ್ತಿ ವ್ಯಾಜ್ಯ ಸಹ ರಾಜಿಯಾಗಿತ್ತು. ಇತ್ತೀಚೆಗೆ ವ್ಯವಹಾರದ ವಿಚಾರವಾಗಿ ನಿತೀಶ್‌ರೊಂದಿಗೆ ಒಂದು ಸಮಸ್ಯೆಯಾಗಿತ್ತು ಮತ್ತು ಗಂಭೀರವಾಗಿಯೇ ನಡೆದುಕೊಂಡು ಬರುತ್ತಿತ್ತು. ರಿಕ್ಕಿ ರೈರವರು ಇತ್ತೀಚೆಗೆ ವಿದೇಶದಿಂದ ಮರಳಿದ್ದರು. ಈ ಕೃತ್ಯ ಯಾರಿಂದ ಏನಾಗಿದೆ ಎಂಬುದು ಅಂತಿಮವಾಗಿ ಪೊಲೀಸ್ ತನಿಖೆಯಿಂದಷ್ಟೇ ಹೊರ ಬೀಳಬೇಕಿದೆ.

### ಮುತ್ತಪ್ಪ ರೈ ಎರಡನೇ ಪತ್ನಿ ಕೈವಾಡ?

ಮುತ್ತಪ್ಪ ರೈ ಮೊದಲನೇ ಪತ್ನಿ ನಿಧನದ ಬಳಿಕ ಮುತ್ತಪ್ಪ ರೈ 2016ರಲ್ಲಿ ಅನುರಾಧರನ್ನು ಎರಡನೇ ಮದುವೆಯಾಗಿದ್ದರು. 2020ರಲ್ಲಿ ಮುತ್ತಪ್ಪರೈ ನಿಧನ ಹೊಂದಿದ್ದರು. 41 ಪುಟಗಳ ವಿಲ್‌ನಲ್ಲಿ ಪುತ್ರರಾದ ರಾಖಿ ರೈ ಮತ್ತು ರಿಕ್ಕಿ ರೈ ಹಾಗೂ ಅನುರಾಧಗೆ ಆಸ್ತಿ ಪಾಲು ಮಾಡಿದ್ದರು. ಈ ವಿಚಾರದಲ್ಲಿ ಕಾನೂನು ಪ್ರಕಾರ ಆಸ್ತಿ ಸಿಕ್ಕಿಲ್ಲ ಎಂದು ಅನುರಾಧ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಹಿನ್ನೆಲೆಯಲ್ಲಿ ಇವರ ಕೈವಾಡದ ಶಂಕೆ ವ್ಯಕ್ತಪಡಿಸಿದ್ದಾರೆ.


ಮುತ್ತಪ್ಪರೈ ಎರಡನೇ ಪತ್ನಿ ಅನುರಾಧ

ಮನೆ ಬಳಿ ಬರುತ್ತಿದ್ದ ಕೂಲಿ ಕೆಲಸದವರು, ಭದ್ರತಾ ಸಿಬ್ಬಂದಿ, ಅಡುಗೆ ಕೆಲಸದವರನ್ನು ಪೊಲೀಸ್ ತಂಡ ವಿಚಾರಣೆಗೆ ಒಳಪಡಿಸಿದೆ. ಘಟನಾ ಸಂಬಂಧ ಸುತ್ತಮುತ್ತಲಿನ ಗ್ರಾಮಗಳ ಸಿಸಿ ಕ್ಯಾಮರಾಗಳನ್ನು ಪರಿಶೀಲನೆ ನಡೆಸಿದೆ. ನಾನಾ ರೀತಿಯ ಆಯಾಮಗಳಲ್ಲಿ ಹತ್ಯೆಗೆ ಸಂಚು ರೂಪಿಸಿರುವ ಹಿನ್ನೆಲೆಯಲ್ಲಿ ಸಿಸಿಬಿ ಎಂಟ್ರಿ ಕೊಟ್ಟು ತನಿಖೆ ಚುರುಕುಗೊಳಿಸಿದ್ದಾರೆ.


ಬಿಡದಿ ಪೊಲೀಸ್ ಠಾಣೆಯಲ್ಲಿ ದೂರು ಕೊಡುತ್ತಿರುವ ಕಾರು ಚಾಲಕ ಬಸವರಾಜ್


ಘಟನಾ ಸ್ಥಳದಲ್ಲಿ ಪೊಲೀಸ್ ಅಧಿಕಾರಿಗಳು


ಸ್ಥಳದಲ್ಲಿ ಕಾರು ಪರಿಶೀಲನೆ ನಡೆಸುತ್ತಿರುವುದು


ಪೊಲೀಸ್ ತಂಡ ತನಿಖೆ ನಡೆಸುತ್ತಿರುವುದು

## ಕಚಗುಳಿ

# ಹಸ್ಬೆಂಡ್ ಅಂಡ್ ವೈಫ್

ಗಂಡ-ಹೆಂಡತಿ.

ಆದರೆ ಇದು ಕನ್ನಡದಲ್ಲಿ ಬಂದಿರುವ ಗಂಡ-ಹೆಂಡತಿ ಎಂಬ ಹೆಸರಿನ ಸಿನಿಮಾ ಅಲ್ಲ. ಇದು ನಿಜಜೀವನದ ಕತೆ. ನಗರದಲ್ಲಿರುವ ಯಾವುದೋ ಕುಟುಂಬದಲ್ಲಿನ ಗಂಡ-ಹೆಂಡತಿಯ ಕತೆ.

ಅವಳು ಚಂದ್ರಿಕ. ಅವನು ಅಭಿಷೇಕ್! ಅಭಿಷೇಕ್ ತುಂಬಾ ಚಿಕ್ಕ ವಯಸ್ಸಿನಲ್ಲಿ 'ಕೆನರಾ ಬ್ಯಾಂಕ್' ಮ್ಯಾನೇಜರ್ ಆಗಿದ್ದಾನೆ. ಪ್ರಾಯ ಮುವತ್ತು. ಪರವಾಗಿಲ್ಲಲಕ್ಷಣವಾಗಿದ್ದಾನೆ.

ಚಂದ್ರಿಕಬ್ಯುಟಿ ಡಾಲ್. ವಧುಪರೀಕ್ಷೆಯಲ್ಲಿಅವಳನ್ನು ಮಾಡಿದ ಕ್ಷಣ ಪರವಶನಾಗಿ ತನ್ನ ಒಪ್ಪಿಗೆ ನೀಡಿದ್ದನು. ಆದರೆ ಚಂದ್ರಿಕಮುಖ ಬಿಗಿದುಕೊಂಡಿದ್ದಳು. ಅವಳಿಗೆಮದುವೆಇಷ್ಟ ಇರಲಿಲ್ಲ. ಮದುವೆ ಆದರೆ ದ್ವೇಷಿಸುತ್ತಿದ್ದಳು. ತಂದೆ, ತಾಯಿ, ಅಣ್ಣ, ತಂಗಿ ಮತ್ತು ಅಂಕಲ್ ಬಲವಂತ ಮಾಡಿದ್ದರು. ಬೇಕಾದಷ್ಟು ಆಸ್ತಿ ಇರುವ ಮತ್ತು ಬ್ಯಾಂಕ್ ಮ್ಯಾನೇಜರ್ ಆಗಿರುವ, ಲಕ್ಷಣವಾಗಿರುವ ಯುವಕ ಒಪ್ಪಿಕೊಂಡಿದ್ದಾನೆ. ಇದಕ್ಕಿಂತ ಬೇರೆ ಸಂಬಂಧ ಸಿಗೋಲ್ಲ. ನೀನು ಮದುವೆಗೆ ಒಪ್ಪದಿದ್ದರೆ ನಾವೆಲ್ಲರೂ (ತಂದೆ-ತಾಯಿ) ಆತ್ಮಹತ್ಯೆ ಮಾಡಿಕೊಂಡು ಸಾಯುತ್ತೇವೆ ಎಂದು ಬೆದರಿಕೆ ಹಾಕಿದ್ದರು.

ಅಭಿಷೇಕ್ ಅವಳ ಜೊತೆ ಏಕಾಂತದಲ್ಲಿಮಾತಾಡಲು ಬಯಸಿದಾಗ, ಅವಳು ಇಷ್ಟಇಲ್ಲದಿದ್ದರೂ ಸಹ, ಮನೆಯವರ ಬಲವಂತಕ್ಕೆ ಒಪ್ಪಿಗೆ ನೀಡಿದ್ದಳು. ಕೊಠಡಿಯಲ್ಲಿ ಅವರಿಬ್ಬರೇ ಇದ್ದಾರೆ. ಅವನು ಮಾತಾಡಲು ಪ್ರಯತ್ನಿಸುವ ಮೊದಲು, ಅವಳು ರೇಗುವ ರೀತಿ ಹೇಳಿದ್ದಳು.

''ನನಗೆ ಮದುವೆ ಇಷ್ಟ ಇಲ್ಲ. ಜೀವನ ಪೂರ್ತಿ ಒಂಟಿಯಾಗಿರಬೇಕು ಅಂತಸಂಕಲ್ಪಮಾಡಿದ್ದೆ. ಆದರೆಮನೆಯವರ ಬಲವಂತಕ್ಕೆ ಮಣಿದು ಒಪ್ಪಿಕೊಂಡಿದ್ದೇನೆ. ನೀವು ನನ್ನ ಕಂಡೀಷನ್‌ಗೆ ಒಪ್ಪಿಕೊಂಡರೆ, ಅದರಂತೆ ನಡೆದುಕೊಳ್ತೀನಿ ಅಂತ ಪ್ರಾಮೀಸ್ ಮಾಡಿದ್ರೆ ಮಾತ್ರ ಮದುವೆ ಆಗ್ತೀನಿ.''

ಅವನಿಗೆಆಶ್ಚರ್ಯದೊಂದಿಗೆಒಂದು ರೀತಿ ಮುಜುಗರ ಆಗುತ್ತಿದೆ. ಆದರೆ ಅವಳ ಮಾದಕ ಸೌಂದರ್ಯ ಬಲವಾಗಿ ಸೆಳೆದಿದೆ.

''ನಿನ್ನ ಕಂಡೀಷನ್ ಏನು?''

''ನನಗೆ ಬುದ್ಧಿ ತಿಳಿದಾಗಲಿಂದ ಸೆಕ್ಸ್ ಅಂದ್ರೆ ಹೇಸಿಗೆ, ಅಲರ್ಜಿ ಮತ್ತು ತಿರಸ್ಕಾರದ ಭಾವನೆ ಇದೆ. ನೀವು ಮದುವೆಯಾದ ಮೇಲೆ ಸೆಕ್ಸ್‌ಗೆ ಬಲವಂತ ಮಾಡಬಾರದು. ಅಷ್ಟೇ ಅಲ್ಲ. ನನ್ನ ಮೈ ಮುಟ್ಟಬಾರದು. ನಮ್ಮಿಬ್ಬರ ಬೆಡ್ ರೂಮಿನ ರಹಸ್ಯ ಮನೆಯವರಿಗೆ ಗೊತ್ತಾಗಬಾರದು.''

ಅಭಿಷೇಕ್ ಬೆಚ್ಚಿಬಿದ್ದನು.

''ದಾಂಪತ್ಯವೇ ಸಂಸಾರದ ಸಮರಸದ ಜೀವನ. ನೀನು ಸೆಕ್ಸ್ ಬೇಡಾ... ಇಷ್ಟ ಇಲ್ಲಾ ಅಂದ್ರೆ, ಮದುವೆಗೆ ಯಾಕೆ ಒಪ್ಕೊಂಡೆ. ನಿನ್ನಂತ ಚೆಲುವೆನ ಮದುವೆ ಮಾಡಿಕೊಂಡರೂ ನಾನು ಬ್ರಹ್ಮಚಾರಿ ರೀತಿ ಇರಬೇಕಾ?''

ಅವಳು ರೇಗುತ್ತಾ ''ನಾನು ಮೊದಲೇ ನನ್ನ ವಿಷಯ ಹೇಳಿದ್ದೀನಿ. ನಿಮಗೆಇಷ್ಟಇಲ್ಲದಿದ್ದರೆನನ್ನಅಪ್ಪಅಮ್ಮನಿಗೆಹೇಳಿ ಈ ಸಂಬಂಧ ಕ್ಯಾನ್ಸಲ್ ಮಾಡಿ.''

ಅವನು ಅವಳ ಚೆಲುವನ್ನೇ ನೋಡುತ್ತಾ ಕ್ಷಣಗಳ ಕಾಲ ಚಿಂತಿಸಿದ ನಂತರ ''ನಿನ್ನಕಂಡೀಷನ್‌ಗೆನಾನು ಒಪ್ಪಿದ್ದೇನೆ. ಸೆಕ್ಸ್‌ಗೆ ಒತ್ತಾಯ ಮಾಡೋಲ್ಲ.''

ಅವಳು ಗಂಭೀರವಾಗಿ ''ಈಗ ಈ ರೀತಿ ಮಾತಾಡಿ ಆಮೇಲೆ ರಂಪ ಮಾಡಬಾರದು. ನಾನು ನಿನ್ನ ಗಂಡ ನಿನ್ನ ಸೌಂದರ್ಯದ ಮೇಲೆ ಅಧಿಕಾರ ಇದೆ. ನೀನು ರತಿಯಾಗಿ ಸುಖ ಕೊಡಬೇಕು ಅಂತ ಒತ್ತಾಯ ಮಾಡಬಾರದು'' ಎಂದು ಅವಳು ಈಗ ಬೇರೆ ಕಡೆ ತಿರುಗುತ್ತಾ ''ನೀವು ಬಲವಂತವಾಗಿ ನನ್ನನ್ನು ಉಪಯೋಗಿಸಿಕೊಂಡರೆ ಆತ್ಮಹತ್ಯೆ ಮಾಡಿಕೊಂಡು ಸಾಯ್ತೀನಿ'' ಎಂದಳು.

ಅವನು ಅಷ್ಟೇ ಸಮಾಧಾನದಿಂದ ''ಹಲೋ... ಹಲೋ ಮೇಡಂ... ನೀವು ಇಷ್ಟೊಂದು ಗಾಬರಿ ಮತ್ತು ಟೆನ್ಷನ್ ಮಾಡಿಕೊಳ್ಳುವ ಅಗತ್ಯ ಇಲ್ಲ. ಯಾಕೆ ಅಂದರೆ, ನಾನು ಪ್ರಾಮೀಸ್ ಮಾಡಿದ ಮೇಲೆ ಮಾತಿಗೆ ತಪ್ಪೊಲ್ಲ'' ಎಂದನು.

ಅವಳು ಅವನ ಕಡೆ ಅನುಮಾನದಿಂದ ನೋಡುತ್ತಾ ''ದಾಂಪತ್ಯ ಸುಖ ನನ್ನಿಂದ ಸಿಗೋಲ್ಲ ಅಂತ ಖಚಿತವಾದ ಮೇಲೂ ಸಹ ಯಾಕೆ ನೀವು ಒಪ್ಪಿಕೊಂಡ್ರಿ? ನಾನು ನಿಮ್ಮ ಜತೆ ಕೇವಲ ಅಲಂಕಾರದ ಗೊಂಬೆ ರೀತಿ ಇರುತ್ತೀನಿ. ನನ್ನಿಂದ ನಿಮ್ಮ ಯಾವ ಆಸೆ, ಕನಸೂ ನನಸಾಗೋಲ್ಲ, ಹಾಗಿದ್ದರೂ ಯಾಕೆ ಮದುವೆ ಆಗುತ್ತಿದ್ದೀರ?''

ಅವನು ಅವಳ ಚೆಲುವಾದ ಮುಖವನ್ನು ನೋಡುತ್ತಾ ''ಮೇಡಂ ಚಂದ್ರಿಕ... ಈಗ ನಾನು ಏನನ್ನೇ ಹೇಳಿದರೂ ನಂಬಿಕೆ ಬರೋಲ್ಲ. ನೀವ್ಯಾಕೆ ಸೆಕ್ಸ್ ಬಗ್ಗೆ ತಿರಸ್ಕಾರ, ಅಸಹ್ಯ ಬೆಳೆಸಿಕೊಂಡಿದ್ದೀರ ಅಂತ ಗೊತ್ತಿಲ್ಲ. ಅದು ನನಗೆ ಬೇಕಾಗಿಲ್ಲ. ಇಷ್ಟೆಲ್ಲಾ ವಿರೋಧ ಅಭಾಸದ ನಡುವೆ ಸಹ ನಿಮ್ಮನ್ನು ಮದುವೆ ಆಗಲು ಒಪ್ಪುತ್ತಿದ್ದೀನಿ. ಅದಕ್ಕೆ ಕಾರಣ ಏನು ಅಂತ, ನಾವಿಬ್ಬರು ಗಂಡ-ಹೆಂಡತಿ ಆಗಿ ಒಂದು ತಿಂಗಳಿನ ನಂತರ ಹೇಳ್ತೀನಿ.''

ಅವಳು ಗಂಭೀರವಾಗಿ ''ನಿಮ್ಮ ಆಂತರ್ಯದಲ್ಲಿ ಯಾವ ಉದ್ದೇಶ ಇದೆ ಅಂತ ನನಗೆ ಗೊತ್ತಿಲ್ಲ. ಆದರೆ ನನ್ನ ಮನಸ್ಸಿಗೆ ವಿರೋಧವಾಗಿ ವರ್ತಿಸಿದರೆ ಅದರ ಪರಿಣಾಮ ತುಂಬಾ ಕೆಟ್ಟದಾಗಿರುತ್ತೆ. ನನ್ನಸಾವಿಗೆ ನೀವು ಕಾರಣ ಆಗ್ತೀರ. ಓಕೆ ಈಗ ಮಾತು ಸಾಕು. ಹೊರಗೆ ಎಲ್ಲರೂ ಕಾಯುತ್ತಿದ್ದಾರೆ. ನೀವು ಹೊರಗೆ ಎಲ್ಲರೂ ಕಾಯುತ್ತಿದ್ದಾರೆ. ನೀವು ಅನುಮಾನಬಾರದ ರೀತಿ ನಿಮ್ಮವರಿಗೆ ಉತ್ತರ ಕೊಡಿ'' ಎಂದಳು.

ಅವರಿಬ್ಬರು ಹೊರಗೆ ಬಂದಿದ್ದಾರೆ.

●●●

ಬ್ಯಾಂಕ್ ಕೆಲಸಗಾರ ಮತ್ತು ಬೇಕಾದಷ್ಟು ಆಸ್ತಿ ಇರುವ ದೊಡ್ಡ ಮನೆ ಕುಟುಂಬದ ಅತ್ಯಂತ ಶ್ರೀಮಂತನ ಮದುವೆ, ನಗರದ ಪ್ರತಿಷ್ಠಿತ ಕಲ್ಯಾಣ ಮಂಟಪದಲ್ಲಿ ವೈಭವದಿಂದ ನಡೆಯಿತು.

ಫಸ್ಟ್‌ನೈಟ್ ಎಲ್ಲಿ? ಅಭಿಷೇಕ್‌ನ ಕ್ಲೋಸ್ ಫ್ರೆಂಡ್ಸ್‌ಗಳು ತುಂಬಾ ಬಲವಂತ ಮಾಡಿ ಸ್ಟಾರ್ ಹೋಟೆಲ್‌ನಲ್ಲಿ ತುಂಬಾ ಗ್ರಾಂಡ್ ಆಗಿ ಅಲಂಕಾರ ಮಾಡಿ ಸ್ವಾಗತಿಸಿದ್ದರು. ಮೊದಲ ರಾತ್ರಿಗೆ ಶುಭ ಕೋರಿದರು. ಅವಳು ವ್ಯಗ್ರಳಾಗಿದ್ದಾಳೆ. ಗಂಡ ಎಂಬ ಸಂಬಂಧದ ಗಂಡಸಿನ ಜತೆ ರಾತ್ರಿ ಪೂರ್ತಿ ಕಳೆಯಬೇಕಲ್ಲ ಎಂಬ ಆಲೋಚನೆಯಿಂದಲೇ ಅವಳು ತುಂಬಾ ಉದ್ವಿಗ್ನಳಾಗಿದ್ದಾಳೆ. ಡೋರ್ ಲಾಕ್ ಆಗಿದೆ!

ಅವಳು ಕೋಪದಿಂದಲೇ ''ನಮ್ಮಿಬ್ಬರ ನಡುವೆ ಏನೂ ನಡೆಯೋಲ್ಲ ಅಂತ ಗೊತ್ತಿದ್ದರೂ ಸಹ, ಸಾವಿರಾರು ರೂಪಾಯಿ ಖರ್ಚು ಮಾಡಿ ಇಲ್ಯಾಕೆ ಇದನ್ನೆಲ್ಲಾ ಮಾಡಬೇಕಿತ್ತು?''

ಅವನು ನಗುತ್ತಾ ''ನಮ್ಮಿಬ್ಬರ ನಡುವೆ ಏನೂ ನಡೆಯೋಲ್ಲ ಅಂತ ನಮ್ಮಿಬ್ಬರಿಗೆ ಗೊತ್ತಿದೆ. ಆದರೆ ನೆಂಟರು ಮತ್ತು ಫ್ರೆಂಡ್ಸ್‌ಗೆ ಗೊತ್ತಿಲ್ಲವಲ್ಲ. ಪಾಪ... ಅವರೇ ಇಷ್ಟೆಲ್ಲಾ ಖರ್ಚು ಮಾಡಿ ವ್ಯವಸ್ಥೆ ಮಾಡಿರುವಾಗ ಬೇಡ ಅಂತ ಹೇಗೆ ಹೇಳಲಿ?''

ಅವಳು ಮುಖ ಗಂಟು ಮಾಡಿಕೊಂಡು ''ಸರಿ ಬಿಡಿ. ಹಾಂ... ನೀವು ಹೂವಿನಿಂದ ಅಲಂಕಾರ ಮಾಡಿರೋ ಮಂಚದಲ್ಲಿ ಮಲಗಿ ನಾನು ಅಲ್ಲಿರೋ ಸೋಫಾದಲ್ಲಿ ಮಲಗ್ತೀನಿ'' ಎಂದು ಹೊರಟಳು.

ಅವನು ''ಬೇಡ ಚಂದ್ರಿಕ. ನಾನು ಆ ಹೂವಿನ ಮಂಚದಲ್ಲಿ ಮಲಗಿದರೆ ಏನೇನೋ ಕನಸು, ಆಸೆ ಪ್ರಚೋದನೆ ಮಾಡುತ್ತೆ. ನೀವೇ ಅಲ್ಲಿ ಮಲಗು'' ಎಂದು ಹೇಳಿ ದಿಂಬು, ರಗ್ಗನ್ನು ಎತ್ತಿಕೊಂಡು ಸೋಫಾದಲ್ಲೂ ಮೈಚೆಲ್ಲಿ ಮಲಗಿದನು.

ಅವಳು ಒಂಟಿಯಾಗಿ, ಬಲು ಸೊಗಸಾಗಿ ಅಲಂಕಾರ ಮಾಡಿರುವ ಮಂಚದಲ್ಲಿ ಮಲಗಿದ್ದಾಳೆ. ಆದರೆ ನಿದ್ದೆ ಬರಲಿಲ್ಲ. ಸ್ವಲ್ಪ ಶಬ್ದ ಉಂಟಾದರೂ ಗಂಡನೇ ಆಸೆಯಿಂದ ಬಂದಿದ್ದಾರೆ ಎಂದು ದಡಕ್ಕನೆ ಎದ್ದು ಕೂರುತ್ತಾಳೆ. ಆದರೆ ಅವನು ಗೊರಕೆ ಹೊಡೆಯುತ್ತಾ ಗಾಢವಾಗಿ ನಿದ್ರಿಸುತ್ತಿದ್ದಾನೆ. ಅಂತು ಆ ರಾತ್ರಿ ಕಳೆಯಿತು.

●●●

ಚಂದ್ರಿಕಾಳ ಗೆಳತಿಯರಲ್ಲಿ 'ವಂದನ' ತುಂಬಾ ಆತ್ಮೀಯಳು. ಅಕ್ಕತಂಗಿ ಎಂಬ ರೀತಿಯಲ್ಲಿ ಪರಸ್ಪರ ಪ್ರೀತಿ-ಕಾಳಜಿ ಹೊಂದಿದ್ದರು. ಅವರಿಬ್ಬರು ತಮ್ಮೆಲ್ಲಾ ಭಾವನೆಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದರು. ಆದರೆ ಚಂದ್ರಿಕಾಳಿಗೆ ಸೆಕ್ಸ್ ಬಗ್ಗೆ ಇರುವ ದ್ವೇಷ, ತಿರಸ್ಕಾರ, ಅಸಹ್ಯದ ಬಗ್ಗೆಗೊತ್ತಿರಲಿಲ್ಲ. ಮದನ ಯಾವಾಗಲಾದರೂ ರೋಮಾನ್ಸ್ ಬಗ್ಗೆ ಮಾತಾಡಿದರೆ ಚಂದ್ರಿಕ ಮುಖ ಗಂಟು ಮಾಡಿಕೊಳ್ಳುತ್ತಿದ್ದಳು. ಹಾಗಾಗಿ ಆ ವಿಚಾರವನ್ನೇ ಮರೆತಳು. ಅಸಲು ಸಂಗತಿ ಏನು? ಗಂಡನ ಜೊತೆ ದಾಂಪತ್ಯದ ಬಗ್ಗೆಮಾಡಿಕೊಂಡಿರುವ ಒಪ್ಪಂದದ ಬಗ್ಗೆಗೊತ್ತಿರಲಿಲ್ಲ ಎಂದು ಹೇಳಬಹುದು.

ಮಧ್ಯಾಹ್ನ ಎರಡು ಗಂಟೆಗೆ ವಂದನಾಳಿಗೆ ಫೋನ್ ಕಾಲ್ ಬಂದಿತು. ಅಭಿಷೇಕ್ ಮಾಡಿದ್ದಾನೆ.

ಹತ್ತು ನಿಮಿಷಗಳ ಕಾಲ ಮಾತಾಡಿದರು. ''ನಿಮ್ಮನ್ನು ಮೀಟ್ ಮಾಡಬೇಕಲ್ಲ. ಎಲ್ಲಿ... ಯಾವಾಗ ಸಿಗುತ್ತೀರ?''

ವಂದನ ಪ್ರೋಗ್ರಾಂ ಬಗ್ಗೆ ಹೇಳಿದಾಗ ಒಪ್ಪಂದ ಆಯಿತು.

●●●

ಸೂಟ್‌ಕೇಸ್ ರೆಡಿ ಮಾಡಿಕೊಂಡು ಬಂದ ಗಂಡನ ಕಡೆ ಅವಳು ಹುಬ್ಬೇರಿಸಿ ನೋಡಿದಳು. ''ಬ್ಯಾಂಕ್ ಕೆಲಸದ ಮೇಲೆ ಮಂಗಳೂರಿಗೆ ಹೋಗುತ್ತಿದ್ದೀನಿ. ಬರೋದು ಎರಡು ದಿನಗಳಾಗುತ್ತೆ'' ಎಂದಾಗ ಅವಳಿಂದ ಯಾವ ರೀತಿಯ ರಿಯಾಕ್ಷನ್ ಬರಲಿಲ್ಲ.

ಅವಳು ಟಿ.ವಿ. ಪ್ರೋಗ್ರಾಂ ನೋಡುತ್ತಿರುವಾಗ ಫೋನ್ ಕಾಲ್ ಬಂದಿತು. ಗೆಳತಿ ವಂದನ ಮಾಡಿದ್ದಾಳೆ.

''ಏ ಚಂದ್ರಿಕ... ನೀನು ಸಂಜೆ ಆರು ಗಂಟೆಗೆ ನನ್ನ ಮನೆಗೆ ಬರಬೇಕು.''

''ಯಾಕೆ ಏನು ವಿಶೇಷ?''

''ಇವತ್ತು ನ್ಯೂ ಈಯರ್ ಡೇ ಸೆಲಬರೇಷನ್ ಮಾಡ್ಬೇಕು. ನನ್ನ ಫ್ರೆಂಡ್ಸ್ ಬರುತ್ತಾರೆ. ರಾತ್ರಿ ನಾರ್ತ್ ಇಂಡಿಯನ್ ಸ್ಪೆಷಲ್ ಊಟ ಇರುತ್ತೆ. ಹಾಡು, ಡ್ಯಾನ್ಸ್ ಎಲ್ಲಾ ಇರುತ್ತೆ.''

''ಡ್ರಿಂಕ್ಸ್ ಪಾರ್ಟಿ ಅಲ್ಲಾ ತಾನೆ?''

''ಖಂಡಿತಾ ಅಲ್ಲ.'

''ಹಾಗಾದರೆ ಬರ್ತೀನಿ.''

●●●

ರಾತ್ರಿ ಏಳು ಗಂಟೆ. ವಂದನಾಳ ತಂದೆ-ತಾಯಿ ಅಣ್ಣ-ಅತ್ತಿಗೆ ಎಲ್ಲರೂ ಹತ್ತಿರದ ಸಂಬಂಧಿಕರ ಮದುವೆಗೆ ಹೋಗಿದ್ದಾರೆ. ಬರೋದು ಮೂರು ದಿನಗಳಾಗುತ್ತದೆ.

ಚಂದ್ರಿಕ ಬಂದಿದ್ದಾಳೆ. ಇವರಿಬ್ಬರ ಜೊತೆ ಕಾಲೇಜಿನಲ್ಲಿ ಓದಿದ್ದ ಗೆಳೆಯರು, ಗೆಳತಿಯರು ಬಂದಿದ್ದಾರೆ. ಚಂದ್ರಿಕಾಳಿಗೆ ಖುಷಿಯಾಗಿದೆ. ಬಂದವರಿಗೆಲ್ಲಾ ಮೊದಲು ಕೂಲ್ ಡ್ರಿಂಕ್ಸ್ ಮತ್ತು ಮಂಚೂರಿ, ಮಸಾಲ ಪಪ್ಪಡ್ ಕೊಡಲಾಯಿತು.

ಚಂದ್ರಿಕಾಳಿಗೆ ಫೋನ್‌ಕಾಲ್ ಬಂದಿದೆ. ಅವಳ ಗಂಡ ಮಾತಾಡಿದನು. ಅವಳಿಗೇನು ಗಂಡನ ಬಗ್ಗೆ ಆಸಕ್ತಿ ಇರಲಿಲ್ಲ. ತಾನು ಗೆಳತಿಯ ಮನೆಗೆ ಬಂದಿರುವುದಾಗಿ ತುಂಬಾ ಚುಟುಕಾಗಿ ಹೇಳಿದಳು.

''ಓಕೆ ಪಾರ್ಟಿ ಎಂಜಾಯ್ ಮಾಡು. ಈ ರೀತಿಯಿಂದಲಾದರೂ ನೀನು ಖುಷಿಯಾಗಿರು.''

''ಥ್ಯಾಂಕ್ಸ್... ಥ್ಯಾಂಕ್ಸ್.''

ಫೋನ್ ಲಿಂಕ್ ಕಟ್ ಮಾಡಿದಳು. ನಂತರದಲ್ಲಿ ಅವಳು ಎಲ್ಲಾ ಮರೆತು ಎಲ್ಲರ ಜೊತೆ ಬೆರೆತು ಮೈಮರೆತಳು. ಹಾಡು, ಕುಣಿತ, ಜೋಕ್ ಹೇಳುವುದು ಮತ್ತು ಮಿಮಿಕ್ರಿ ಮಾಡೋದು ಅವಳಿಗೆ ತುಂಬಾ ಇಷ್ಟವಾಯಿತು. ಅದು ತುಂಬಾ ಚೆನ್ನಾಗಿತ್ತು. ರಾತ್ರಿ ಹತ್ತು ಗಂಟೆ ಒಳಗೆ ಫಂಕ್ಷನ್ ಮುಗಿದು ಎಲ್ಲರೂ ಮನೆಗಳಿಗೆ ಹೊರಟರು.

ಗಂಡ ಹೇಗಿದ್ದರೂ ಊರಲ್ಲಿ ಇಲ್ಲ ಎಂದು ಅವಳು ಗೆಳತಿಯ ಮನೇಲಿ ಉಳಿದುಕೊಂಡಳು. ರುಚಿಕರವಾದ ಊಟ ಮಾಡಿದ ಮೇಲೆ 'ಗಡ್‌ಬಡ್' ಐಸ್‌ಕ್ರೀಂ ತಿನ್ನಲು ವಂದನ ಬಲವಂತ ಮಾಡಿದಳು.

ರಾತ್ರಿ ಹತ್ತೂವರೆ! ಅವಳಿಗೆಒಂದು ರೀತಿ ಮಾದಕತೆಯ ಅಮಲು ತಲೆಗೇರಿದೆ. ಅರೆ ಎಚ್ಚರ... ಅರೆ ಮಂಪರು! ಏನೋ ಒಂದು ರೀತಿ ಹಿತವಾಗಿದೆ. ಅವಳು ಪುಳುಕಗೊಂಡಳು... ಅಬ್ಬ... ಆ ಒರಟು ಸ್ಪರ್ಶದಲ್ಲಿ ಅದೇನೋ ಸುಖವಿದೆ. ಬಿಗಿಯಾದ ಆಲಿಂಗನ. ಅವಳ ಅಂಗ-ಅಂಗವನ್ನೆಲ್ಲಾ ಹಿತವಾಗಿ ಹಿಂಡುತ್ತಾ, ಮೀಟುತ್ತಿದ್ದರೆ, ಅವಳಲ್ಲಿ ಅಲ್ಲಿಯತನಕ ಸುಪ್ತವಾಗಿದ್ದ ಕಾಮದ ಬಯಕೆ ಭುಗಿಲೆದ್ದಿತು. ಮಾದಕತೆಯ ಅಮಲಿನೊಂದಿಗೆ ಕಾಮಪ್ರಚೋದನೆ ಆಗುತ್ತಿದೆ. ಅವಳು ರತಿಯಾಗಿ ತೆರೆದುಕೊಂಡಳು. ಮಾದಕತೆ ತುಂಬಾ ಕಡಿಮೆ ಪ್ರಮಾಣದಲ್ಲಿ ಇರೋದ್ರಿಂದ, ಕಾಮಸುಖದ ಅನುಭವದ ಅರಿವು ಆಗುತ್ತಿದೆ. ಅವಳು ಪೂರ್ಣ ತೃಪ್ತಳಾಗಿದ್ದಾಳೆ!

ಒಂದು ಗಂಟೆ ಕಳೆಯಿತು. ಅವಳಿಗೆ ಎಚ್ಚರವಾಯಿತು. ಅವಳೀಗ ಕೆಲವು ಕ್ಷಣಗಳು ಮಂಕಾಗಿದ್ದಳು. ಮಾದಕತೆ ಇಳಿದಿದೆ. ಅವಳು ಈಗ ಎದ್ದು ಕೂರಲು ಪ್ರಯತ್ನಿಸಿದಳು. ಆ ಕ್ಷಣ ಅರಿವಾಯಿತು. ಅವಳು ಪೂರ್ಣ ಬೆತ್ತಲಾಗಿದ್ದಾಳೆ. ಆ ಕ್ಷಣದಲ್ಲಿ ಅವಳಿಗೆ ಸುಖದ ಅನುಭವದ ನೆನಪಾಗುತ್ತಿದೆ. ಅವಳು ಎದ್ದು ಕನ್ನಡಿಯ ಹತ್ತಿರ ಬಂದಳು. ಕೆನ್ನೆ ಕೆಂಪಾಗಿದೆ. ಕೆಳತುಟಿಯ ಅಂಚಿನಲ್ಲಿಗಾಯವಾಗಿದೆ. ಬಲು ಸುಂದರವಾದ ಮಾಟವಾದ ಅವಳ ದೇಹದಲ್ಲಿ ಕೆಲವು ಕಡೆ ಹಲ್ಲಿನ ಗುರುತುಗಳಿವೆ. ಆದರೆ ನೋವಾಗುತ್ತಿಲ್ಲ. ತೊಡೆಗಳ ನಡುವನ್ನು ನೋಡಿಕೊಂಡಾಗ ಶೀಲ ಕಳೆದುಕೊಂಡಿರೋದು ನೆನಪಾಗಿ ನಡುಗಿದಳು. ಅವಳು ಕೂಡಲೇ ಡ್ರೆಸ್ ಮಾಡಿಕೊಂಡಳು.

ರೂಮಿನ ಡೋರ್ ಲಾಕ್ ಆಗಿದೆ. ಕೀ ಅಲ್ಲೇ ಇದೆ! ಹಾಗಾದರೆ ಒಳಗೆ ಬಂದಿದ್ದು ಯಾರು? ಹೇಗೆ ಬಂದರು? ಫಂಕ್ಷನ್‌ಗೆ ಬಂದಿದ್ದ ಕೆಲವು ಯುವಕರಲ್ಲಿ ನಾಲ್ಕು ಮಂದಿ ಆ ರಾತ್ರಿ ಅಲ್ಲೇ ಉಳಿದಿದ್ದರು. ಅವರಲ್ಲೇ ಯಾರಾದರೂ ಆಟ ಆಡಿದ್ದಾರ? ರೂಮಿನಿಂದ ಹೊರಗೆ ಬಂದು ನೋಡಿದಳು. ಒಂದು ರೂಮಿನಲ್ಲಿಗೆಳೆಯರು ಮತ್ತೊಂದು ರೂಮಲ್ಲಿ ಗೆಳತಿ ವಂದನ ಗಾಢವಾದ ನಿದ್ರೆಯಲ್ಲಿದ್ದಾರೆ. ಅವಳು ರೂಮಿಗೆ ಬಂದು ಮಲಗಿದಳು. ಆದರೆ ರಾತ್ರಿ ನಿದ್ದೆ ಬರಲಿಲ್ಲ. ಮಾದಕತೆ ಮಂಪರಿನಲ್ಲಿ ಅನುಭವಿಸಿದ್ದ ಕಾಮಸುಖದ ನೆನಪಾಗಿ, ಅವಳಿಗೆ ಗೊತ್ತಿಲ್ಲದಂತೆ ಆ ಗುಂಗಿನಲ್ಲಿ ಮೈಮರೆತಳು. ಬೆಳಿಗ್ಗೆ ತಡವಾಗಿ ಎದ್ದು ಗೆಳತಿಯ ಮನೇಲಿ ಸ್ನಾನ ಮುಗಿಸಿ ತಿಂಡಿ ತಿಂದು ಹೊರಟಳು. ಆದರೆ ರಾತ್ರಿಯ ಪ್ರಕರಣದ ಬಗ್ಗೆ ಅವಳಿಗೆ ಹೇಳಲಿಲ್ಲ. ವಂದನ ''ಸಾರಿ ಚಂದ್ರಿಕ... ಈ ತರ್ಲೆ ಗೆಳೆಯರಲ್ಲಿ ಯಾರೋ ಗಡ್‌ಬಡ್ ಐಸ್‌ಕ್ರೀಂಗೆ ಮತ್ತಿನಪುಡಿ ಬೆರೆಸಿದ್ದರು. ನಾನು ಸಹ ತಿಂದಿದ್ದರಿಂದ ಮಾದಕತೆಯಲ್ಲಿ ತೇಲಾಡಿದ್ದೆ.''

ಅವಳಿಗೆ ಗಾಬರಿಯಾಯಿತು. ಈ ಗೆಳೆಯರಲ್ಲಿ ಯಾರೋ ಒಬ್ಬರು ಆಟ ಆಡಿದ್ದಾರೆ. ಗಂಡ ನನ್ನ ಮೈಮುಟ್ಟಿ ಸುಖ ಅನುಭವಿಸಿಲ್ಲ. ಬೇರೆ ಯಾರೋ ಈ ಕೆಲಸ ಮಾಡಿದ್ದಾರೆ. ಅವಳನ್ನು ಈ ಚಿಂತೆ ಕಾಡುತ್ತಿದೆ. ಗಂಡನಿಗೆ ಸರಿಯಾಗಿ ಮುಖ ಕೊಟ್ಟು ಮಾತಾಡುತ್ತಿಲ್ಲ. ಅಪರಾಧಿ ಭಾವ ಕಾಡುತ್ತಿದೆ. ಆದರೂ ಸಹ ಅವಳು ಏಕಾಂತ ರಾತ್ರಿಯಲ್ಲಿ ಅನುಭವಿಸಿದ್ದ ಸುಖದ ಗುಂಗಿನಲ್ಲಿ ಮೈಮರೆಯುತ್ತಾಳೆ. ಒಂದು ವಾರ ಕಳೆಯಿತು. ವಂದನ ಫೋನ್ ಮಾಡಿದಳು.

''ನಿನ್ನ ಗಂಡ ನಿನಗೆ ವೀಡಿಯೋ ಕ್ಲಿಪ್ ವಾಟ್ಸಾಪ್ ಮಾಡಿದ್ದಾರೆ.''

''ಇದು ನಿನಗೆ ಹೇಗೆ ಗೊತ್ತು?''

''ಎಲ್ಲಾ ಆಮೇಲೆ ತಿಳಿಯುತ್ತೆ. ಆ ವೀಡಿಯೋ ದೃಶ್ಯ ನೋಡು.''

ಅದರಲ್ಲಿ ಏನಿದೆ? ಸುಖ ಮಿಲನದ ದೃಶ್ಯ...! ಅವಳಿಗೆ ಶಾಕ್ ಆಯಿತು. ಗಂಡ... ಗಂಡ ಆ ರಾತ್ರಿ ಇವಳನ್ನು ಅನುಭವಿಸಿ ಸುಖದ ಅನುಭವ ಉಂಟು ಮಾಡಿದ್ದನು.

ಚಂದನ ಹೇಳುತ್ತಿದ್ದಾಳೆ. ''ಸೆಕ್ಸ್ ಬಗ್ಗೆ ಅಲರ್ಜಿ ಹೋಗಲಿ, ದಾಂಪತ್ಯ ಸುಖದ ಅನುಭವ ಆಗಲಿ ಅಂತ ನಾನು ಮತ್ತು ನಿನ್ನ ಗಂಡ ಆಡಿದ್ದ ನಾಟಕ ಇದು. ಇನ್ನು ಮುಂದೆ ನೀನು ಹೆಂಡತಿಯಾಗಿ ಗಂಡನ ಜೊತೆ ದಾಂಪತ್ಯ ಸುಖ ಅನುಭವಿಸಬೇಕು.''

ಇದು ಅವಳ ಮನಸ್ಸಿನ ಮೇಲೆ ಪರಿಣಾಮ ಬೀರಿದೆ. ಅವಳು ಹಂತ, ಹಂತವಾಗಿ ಬದಲಾಗುತ್ತಿದ್ದಾಳೆ. ಅವಳಿಗೆ ಆಸಕ್ತಿ ಬಂದಿದೆ ಎಂಬುದು ಅರಿವಾದ ಕೂಡಲೇ ಅವಳನ್ನು ಊಟಿಗೆ ಕರೆದುಕೊಂಡು ಹೋದನು. ಒಂದು ವಾರ ಹಗಲು-ರಾತ್ರಿ ಮಿಲನೋತ್ಸವದ ಹಬ್ಬ ಆಚರಿಸಿದರು. ☯

# ಮಂಗಳೂರು: ಕೆಲಸ ಕೊಡಿಸುವ ನೆಪದಲ್ಲಿ ಯುವತಿಗೆ ಮದ್ಯ ಕುಡಿಸಿ ಗ್ಯಾಂಗ್ ರೇಪ್!


ಆರೋಪಿ ಮಿಥುನ್

ಕಡಲ ತಡಿ ಮಂಗಳೂರಿನಲ್ಲಿ ಉತ್ತರ ಭಾರತ ಮೂಲದ ಯುವತಿಯೊಬ್ಬಳ ಮೇಲೆ ಭೀಕರ ಗ್ಯಾಂಗ್ ರೇಪ್ ನಡೆದಿದೆ. ಯುವತಿಯನ್ನ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಸಾಮೂಹಿಕ ಬಲಾತ್ಕಾರ ಎಸಗಲಾಗಿದೆ. ಗೆಳೆಯನ ಜೊತೆಗೆ ಮುನಿಸಿಕೊಂಡು ಬಂದ ಯುವತಿಯನ್ನ ಮದ್ಯಪಾನ ಮಾಡಿಸಿ ಬಲಾತ್ಕಾರ ಮಾಡಿದ್ದು, ಮಂಗಳೂರಿನ ಸ್ಥಳೀಯ ಆಟೋ ಚಾಲಕ ಸೇರಿ ಮೂವರ



**ಕಡಲ ತಡಿ ಮಂಗಳೂರಿನಲ್ಲಿ ಉತ್ತರ ಭಾರತ ಮೂಲದ ಯುವತಿಯೊಬ್ಬಳ ಮೇಲೆ ಭೀಕರ ಗ್ಯಾಂಗ್ ರೇಪ್ ನಡೆದಿದೆ. ಯುವತಿಯನ್ನ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಸಾಮೂಹಿಕ ಬಲಾತ್ಕಾರ ಎಸಗಲಾಗಿದೆ.**

ಬಂಧನವಾಗಿದೆ. ಮುಲ್ಕಿ ನಿವಾಸಿ 10 ವರ್ಷಕ್ಕಿಂತ ಹೆಚ್ಚು ಕಾಲ ಆಟೋ ಚಾಲಕನಾಗಿ ದುಡಿಯುತ್ತಿದ್ದ ಪ್ರಭುರಾಜ್ (38), ಕುಂಪಲ ನಿವಾಸಿ ಇಲೆಕ್ಟ್ರಿಷಿಯನ್ ಕಾರ್ಯನಿರ್ವಹಿಸುವ ಮಿಥುನ್ (30) ಹಾಗೂ ಮಂಗಳೂರಿನಲ್ಲಿ ವಾಸ ಮಾಡುವ ಮತ್ತೋರ್ವ ಗೆಳೆಯ ಮಣಿಯನ್ನು ಬಂಧಿಸಲಾಗಿದೆ.

### ಮಧ್ಯರಾತ್ರಿ ಬಂದು ಸ್ಥಳೀಯ ಮನೆಯ ಬಾಗಿಲು ಬಡಿದಿದ್ದ ಯುವತಿ

ಮಂಗಳೂರು ಹೊರವಲಯದ ಉಳ್ಳಾಲ ತಾಲೂಕಿನ ಮುನ್ನೂರು ಗ್ರಾಮದ ಕುತ್ತಾರು ಎನ್ನುವ ಊರು ದಾಟಿ ಸಾಗಿದಾಗ ಇಳಿಜಾರಿನಂತಿರೋ ಬಂಗ್ಲೆ ಕೊಟ್ಟಾರಿ ಮೂಲೆ ಎನ್ನುವ ನಿರ್ಜನ ಪ್ರದೇಶದಲ್ಲಿ ನಡೆದ ಈ ಘಟನೆ ಇಡೀ ಮಂಗಳೂರಿಗರನ್ನ ಅಕ್ಷರಶಃ ಬೆಚ್ಚಿ ಬೀಳಿಸಿದೆ. ಮುನ್ನೂರು ಗ್ರಾಮದ ಜನರು ಇನ್ನೇನು ನಿದ್ದೆಗೆ ಜಾರಬೇಕು ಎನ್ನುವಷ್ಟರಲ್ಲಿ ಗ್ರಾಮದ ರಾಜೇಶ್ ಎಂಬವರ ಮನೆಯ ಬಾಗಿಲು ಬಡಿದ ಸದ್ದು ಕೇಳಿಸಿದೆ. ಮನೆಯವರು ಹೊರಗೆ ಬಂದು ನೋಡಿದಾಗ ಯುವತಿಯೊಬ್ಬಳು ನಶೆಯಲ್ಲಿದ್ದು, ಕಣ್ಣೀರು ಹಾಕುತ್ತಲೇ ಮನೆಯುವರ ಬಳಿ ನೀರು ಕೇಳಿದ್ದಾಳೆ. ನೀರು ಕೇಳಿದ ತಕ್ಷಣ ಆಕೆ ಪ್ರಜ್ಞೆ ತಪ್ಪಿದ್ದು, ಸೇರಿದ ಗ್ರಾಮಸ್ಥರು ತಕ್ಷಣ ಪೊಲೀಸರಿಗೆ ವಿಷಯ ತಿಳಿಸಿದ್ದು, ಪೊಲೀಸರು ಸ್ಥಳಕ್ಕೆ ಬಂದಿದ್ದಾರೆ.


ಆರೋಪಿ ಮಣಿ

ಹಿಂದಿ ಭಾಷೆ ಮಾತನಾಡ್ತಿದ್ದ ಯುವತಿಯ ಕೈ ಮತ್ತು ಕತ್ತಿನ ಮೇಲೆ ಗಾಯಗಳಿದ್ದು, ವಿಪರೀತ ಮದ್ಯ ಸೇವಿಸಿ ನಶೆ ಹೆಚ್ಚಾಗಿ ಪ್ರಜ್ಞೆ ತಪ್ಪಿದ್ದಳು. ಬಳಿಕ ಸ್ಥಳೀಯರು ನೀರು ಕುಡಿಸಿ ಎಬ್ಬಿಸಿ ವಿಚಾರಿಸಿದಾಗ ತಾನು ಪಶ್ಚಿಮ ಬಂಗಾಳ ಮೂಲದವಳಾಗಿದ್ದು, ಕೇರಳದ ಉಪ್ಪಳದಲ್ಲಿ ವಾಸವಿರೋ ಬಗ್ಗೆ ಮಾಹಿತಿ ನೀಡಿದ್ದಾಳೆ. ಅಲ್ಲದೇ ಯಾರೋ ಆಟೋ ಚಾಲಕ ಈ ನಿರ್ಜನ ಜಾಗಕ್ಕೆ ತಂದು ಬಿಟ್ಟಿದ್ದಾಗಿಯೂ ಆತನ ಜೊತೆಗೆ ಮತ್ತಿಬ್ಬರು ಇದ್ದ ಬಗ್ಗೆ ಮಾಹಿತಿ ನೀಡಿದ್ದಾಳೆ. ತಕ್ಷಣ ಪೊಲೀಸರು ಆಕೆಯನ್ನ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಯುವತಿ ಮೇಲೆ ಸಾಮೂಹಿಕ ಬಲಾತ್ಕಾರ ನಡೆದಿರೋದು ಗೊತ್ತಾಗಿದೆ. ಸದ್ಯ ಪೊಲೀಸ್ ತನಿಖೆ ಪ್ರಕಾರ ಉಪ್ಪಳದಲ್ಲಿ ಗೆಳೆಯನ ಜೊತೆಗೆ ಕಳೆದ ಎರಡು ವರ್ಷಗಳಿಂದ ಕೆಲಸಕ್ಕಿದ್ದ ಪಶ್ಚಿಮ ಬಂಗಾಳ ಮೂಲದ ಯುವತಿ ಎನ್ನಲಾಗಿದೆ.

ನಿನ್ನೆ ಸಂಜೆ ಯಾವುದೋ ವಿಚಾರಕ್ಕೆ ಸಂಬಂಧಿಸಿ ಮುನಿಸಿಕೊಂಡಿದ್ದಳು. ಇದರಿಂದ ಬೇಸರಗೊಂಡ ಯುವತಿ ಉಪ್ಪಳದಲ್ಲಿ ಮಂಗಳೂರು ತೆರಳುವ ರೈಲನ್ನೇರಿದ್ದಳು. ಉಪ್ಪಳ ದಾಟಿ ರೈಲು ಸೋಮೇಶ್ವರದ ಉಳ್ಳಾಲ ರೈಲು ನಿಲ್ದಾಣ ತಲುಪುತ್ತಿದ್ದಂತೆ ರೈಲಿನಿಂದ ಇಳಿದು ನಿಲ್ದಾಣದಲ್ಲೇ ಕುಳಿತಿದ್ದಳು. ಅಲ್ಲೇ ರಿಕ್ಷಾ ಚಾಲಕರಾಗಿದ್ದ ಮಂಗಳೂರಿನ ಕುಂಪಲ ನಿವಾಸಿಯೊಬ್ಬ ಯುವತಿ ಅಳುತ್ತಾ ಇರುವುದನ್ನು ಗಮನಿಸಿ ಕಷ್ಟಸುಖ ಮಾತನಾಡಿಸಿ, ಕೆಲಸ ಕೊಡಿಸುವುದಾಗಿ ನಂಬಿಸಿರುವ ಮಾಹಿತಿಯಿದೆ. ಅದರಂತೆ ಯುವತಿಯನ್ನು ರಿಕ್ಷಾದಲ್ಲಿ ಕರೆತಂದು ಮುನ್ನೂರು ರಾಣಿಪುರದ ಋಷಿವನ ಮಾರ್ಗವಾಗಿ ನೇತ್ರಾವತಿ ನದಿ ತೀರದತ್ತ ಕೊಂಡೊಯ್ದಿದ್ದಾರೆ.

ಅಲ್ಲಿ ತನ್ನ ಗೆಳೆಯರನ್ನು ಕರೆಸಿದ ರಿಕ್ಷಾ ಚಾಲಕ ಕಾರಿನಲ್ಲಿ ಯುವತಿಗೆ ಒತ್ತಾಯಪೂರ್ವಕವಾಗಿ ಮದ್ಯ ಕುಡಿಸಿ ಸಾಮೂಹಿಕವಾಗಿ ಬಲಾತ್ಕಾರ ನಡೆಸಿದ್ದಾರೆ. ಬಳಿಕ ಯುವತಿಯನ್ನು ಅಲ್ಲೇ ಬಿಟ್ಟ ಗ್ಯಾಂಗ್ ವಾಪಸ್ಸು ತೆರಳಿದೆ. ಅಸ್ವಸ್ಥಳಾಗಿದ್ದ ಯುವತಿ ಒತ್ತಾಯಪೂರ್ವಕವಾಗಿ ಮದ್ಯ ಕುಡಿಸಿದ ಹಿನ್ನೆಲೆಯಲ್ಲಿ ಹೊಟ್ಟೆಯುರಿ ತಡೆದುಕೊಳ್ಳಲಾರದೆ, ತಡರಾತ್ರಿ 1.30 ಸುಮಾರಿಗೆ ಮನೆಗಳನ್ನು ಹುಡುಕುತ್ತಾ ನೆರೆಯ ಮನೆಯೊಂದಕ್ಕೆ ತೆರಳಿ ನೀರು ಕೇಳಿದ್ದಾಳೆ. ಯುವತಿಯನ್ನು ಉಪಚರಿಸಿ ನೀರು ಕುಡಿಸಿ ಹರಿದ ಬಟ್ಟೆಗಳ ಮೇಲೆ ಶಾಲನ್ನು ಹೊದಿಸಿದ್ದಾರೆ. ಅಲ್ಲದೆ ಕುತ್ತಿಗೆ ಮತ್ತು ಕೈಗಳ ಭಾಗದಲ್ಲಿ ಗಾಯಗಳನ್ನು ಗಮನಿಸಿದ್ದಾರೆ. ಮೇಲ್ನೋಟಕ್ಕೆ ಸಾಮೂಹಿಕ ಬಲಾತ್ಕಾರ ಎಂಬುದಾಗಿ ಗಮನಿಸಿದ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಆಸ್ಪತ್ರೆಯಲ್ಲಿ ದಾಖಲಾಗಿರುವ ಯುವತಿ ರಿಕ್ಷಾ ಚಾಲಕನಿಗೆ ಗೂಗಲ್ ಪೇ ಮಾಡಿದ ಸಾಕ್ಷ್ಯಾಧಾರದ ಮೇಲೆ ಆಟೋ ಚಾಲಕ ಪ್ರಭುರಾಜ್ ಬಂಧನವಾಗಿದೆ.

### ಯುವತಿ ದೂರಿನಂತೆ ಗ್ಯಾಂಗ್ ರೇಪ್

ಇನ್ನು ಘಟನೆ ಬಗ್ಗೆ ಮಂಗಳೂರು ಕಮಿಷನರ್ ಅನುಪಮ್ ಅಗ್ರವಾಲ್ ಹೇಳಿಕೆ ನೀಡಿದ್ದಾರೆ. ನಿನ್ನೆ ರಾತ್ರಿ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಘಟನೆ ನಡೆದಿದ್ದು, ಮಧ್ಯರಾತ್ರಿ 1.30 ಸುಮಾರಿಗೆ 112 ಒಂದು ಕರೆ ಬಂದಿರುತ್ತದೆ. ಒಂದು ಹುಡುಗಿ ಕೂಗಾಡುತ್ತಿದ್ದಾಳೆ, ಆಕೆಗೆ ಹಲ್ಲೆ ಮಾಡಿದ್ದಾರೆ ಎಂಬ ದೂರು ಸ್ವೀಕೃತವಾಗಿದೆ. ತಕ್ಷಣವೇ ಹೊಯ್ಸಳ ಘಟನಾ ಸ್ಥಳಕ್ಕೆ ತೆರಳಿ ಯುವತಿಯನ್ನು ಪೊಲೀಸ್ ಠಾಣೆಗೆ ಕರೆತಂದಿದ್ದಾರೆ. ಅವಳು ಮಾತನಾಡುವ ಸ್ಥಿತಿಯಲ್ಲಿರದ ಕಾರಣ ತಕ್ಷಣ ಆಕೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಳಿಗ್ಗೆ ಅವಳ ಹೇಳಿಕೆ ಪ್ರಕಾರ ನಿನ್ನೆ ರಾತ್ರಿ ಯಾರೋ ಅವಳಿಗೆ ಮದ್ಯಪಾನ ಮಾಡಿಸಿದ್ದಾರೆ. ಆನಂತರ ಪ್ರಜ್ಞೆ ತಪ್ಪಿದ್ದು, ಕಾರಲ್ಲಿ ಮೂರು ಜನ ಇದ್ದಿದ್ದಾಗಿ ಯುವತಿ ತಿಳಿಸಿದ್ದಾಳೆ.


ಆರೋಪಿ ಪ್ರಭುರಾಜ್

ಪ್ರಜ್ಞೆ ಬಂದ ನಂತರ ಅವಳ ಒಳ ಉಡುಪು ಇರಲಿಲ್ಲ ಎಂದು ಹೇಳಿಕೆ ಕೊಟ್ಟಿದ್ದಾಳೆ. ಪ್ರಜ್ಞೆ ಬಂದು ಅವಳು ಕೂಗಾಡಲು ಶುರು ಮಾಡಿದಾಗ ಅವರು ಆಕೆಯನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಆ ಬಳಿಕ ಸ್ಥಳೀಯರ ಸಹಾಯದೊಂದಿಗೆ ಪೊಲೀಸರನ್ನು ಸಂಪರ್ಕಿಸಿದ್ದಾಳೆ. ಅವಳ ದೂರಿನ ಆಧಾರದಲ್ಲಿ ಬಲಾತ್ಕಾರ ಪ್ರಕರಣ ದಾಖಲಿಸಿದ್ದೇವೆ. ನಿನ್ನೆ ಬೆಳಿಗ್ಗೆ ತನ್ನ ಗೆಳೆಯನ ಜೊತೆಗೆ ಕೆಲಸ ಹುಡುಕಿಕೊಂಡು ಮಂಗಳೂರಿಗೆ ಬಂದಿದ್ದಳು. ಪಶ್ಚಿಮ ಬಂಗಾಳದ ಕುಚ್ ಬಿಹಾರ್ ಮೂಲದವಳಾದ ಯುವತಿ 2-3 ವರ್ಷಗಳಿಂದ ಕೇರಳದ ಫ್ಲೈವುಡ್ ಕಂಪೆನಿಯಲ್ಲಿ ಕೆಲಸ ಮಾಡಿಕೊಂಡಿದ್ದಳು. ಮಂಗಳೂರಿನಲ್ಲಿ ಬೇರೆ ಸಂಸ್ಥೆಯಲ್ಲಿ ಕೆಲಸದ ಅವಕಾಶವಿದ್ದ ಕಾರಣ ಗೆಳೆಯನ ಜೊತೆ ಮಂಗಳೂರಿಗೆ ಬಂದಿದ್ದಳು.

ಈ ವೇಳೆ ಗೆಳೆಯನ ಜೊತೆಗೆ ಜಗಳವಾಗಿ ಆತ ಈಕೆಯ ಮೊಬೈಲಿಗೆ ಹಾನಿ ಮಾಡಿದ್ದ. ಹಾಗಾಗಿ ಮೊಬೈಲ್ ರಿಪೇರಿಗೆಂದು ಆಟೋ ಹಿಡಿದು ಮೊಬೈಲ್ ಅಂಗಡಿಗೆ ತೆರಳಿದ್ದಾಳೆ. 5-6 ಗಂಟೆಗಳ ಕಾಲ ಆಕೆ ಆಟೋ ಡ್ರೈವರ್ ಜೊತೆಗೇ ಇದ್ದು, ಅವನ ಜೊತೆಗೆ ಗೆಳೆತನ ಆಗಿದೆ. ಮೊಬೈಲ್ ರಿಪೇರಿ ಹಣ ಕೂಡಾ ಆತನೇ ಪಾವತಿಸಿದ್ದ. ಆ ಬಳಿಕ ಆಕೆ ರಾತ್ರಿ ವೇಳೆ ಪಶ್ಚಿಮ ಬಂಗಾಳ ಹೋಗಲು ರೈಲ್ವೇ ನಿಲ್ದಾಣಕ್ಕೆ ಬಿಡಲು ಆಟೋ ಡ್ರೈವರ್‌ಗೆ ಹೇಳುತ್ತಾಳೆ. ಆದರೆ ಕಂಕನಾಡಿ ರೈಲ್ವೇ ನಿಲ್ದಾಣಕ್ಕೆ ಹೋಗದೇ ಆಟೋ ಡ್ರೈವರ್ ಮತ್ತಿಬ್ಬರ ಗೆಳೆಯರನ್ನು ಕರೆಸಿ ಬೇರೊಂದು ಜಾಗಕ್ಕೆ ಹೋಗುತ್ತಾರೆ. ಆ ಜಾಗದಲ್ಲಿ ಆಕೆಗೆ ಚೆನ್ನಾಗಿ ಮದ್ಯಪಾನ ಮಾಡಿಸಿ, ಆಕೆ ಪ್ರಜ್ಞೆ ತಪ್ಪಿದ್ದು, ಪ್ರಜ್ಞೆ ಬಂದಾಗ' ಬಲಾತ್ಕಾರ' ನಡೆದಿರುವುದು ಆಕೆ ಗಮನಕ್ಕೆ ಬಂದಿದೆ.

ಸದ್ಯ ಈ ಪ್ರಕರಣದ ತನಿಖೆ ನಡೆಸಿ ಮೂವರನ್ನು ವಶಕ್ಕೆ ಪಡೆಯಲಾಗಿದೆ. ಮುಲ್ಕಿ ನಿವಾಸಿ 10 ವರ್ಷಕ್ಕಿಂತ ಹೆಚ್ಚು ಕಾಲ ಆಟೋ ಚಾಲಕನಾಗಿ ದುಡಿಯುತ್ತಿದ್ದ ಪ್ರಭುರಾಜ್ (38). ನಿನ್ನೆ ಮಧ್ಯಾಹ್ನ 2.30 ಸುಮಾರಿಗೆ ಆಕೆಯನ್ನು ಆಟೋದಲ್ಲಿ ಪ್ರಭುರಾಜ್ ಪಿಕಪ್ ನಡೆಸಿದ್ದನು. ಆ ಬಳಿಕ ಪ್ರಭುರಾಜ್ ಕುಂಪಲ ನಿವಾಸಿ ಇಲೆಕ್ಟ್ರೀಷಿಯನ್ ಕಾರ್ಯನಿರ್ವಹಿಸುವ ಮಿಥುನ್ (30) ಹಾಗೂ ಮಂಗಳೂರಿನಲ್ಲಿ ವಾಸ ಮಾಡುವ ಮತ್ತೋರ್ವ ಗೆಳೆಯ ಮಣಿ ಎಂಬಾತನನ್ನು ಕರೆದಿರುತ್ತಾರೆ. ಈ ಮೂವರು ಆಕೆಗೆ ಚೆನ್ನಾಗಿ ಕುಡಿಸಿ ಅವರು ಚೆನ್ನಾಗಿ ಕುಡಿದು ಬಲಾತ್ಕಾರ ಎಸಗಿದ್ದಾರೆ. ಯುವತಿ ತನ್ನ ಹೇಳಿಕೆಯಲ್ಲಿ ತನ್ನ ಮೇಲೆ ಬಲಾತ್ಕಾರ ಆಗಿರುವುದಾಗಿ ಹೇಳಿದ್ದಾಳೆ. ವೈದ್ಯಕೀಯ ವರದಿ ಬಂದ ಬಳಿಕ ಬಲಾತ್ಕಾರ ಆಗಿದೆ ಇಲ್ಲವೋ ಅನ್ನುವುದು ದಢಪಡಿಸಲಾಗುವುದು ಎಂದಿದ್ದಾರೆ. ☯

## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ,

ಬೆಂಗಳೂರು-560 079. ಮೊ : 9513892666

# ಟೆಕ್ಕಿಗಳಿಗೆ ಡ್ರಗ್ಸ್ ಮಾರುತ್ತಿದ್ದ ಎಂಜಿನಿಯರ್ ಸೆರೆ: 6 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ!

ಬೆಂಗಳೂರಿನಲ್ಲಿ ಸಿಸಿಬಿ ದಾಳಿ, 6 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ. ಸಿವಿಲ್ ಎಂಜಿನಿಯರ್ ಸೇರಿ ಇಬ್ಬರು ಬಂಧಿತರು. ಹೈಡ್ರೋಫೋನಿಕ್ ಗಾಂಜಾ ಮತ್ತು ಎಂಡಿಎಂಎ ಡ್ರಗ್ಸ್ ವಶ.

ರಾಜಧಾನಿಯ ಮಾದಕ ವಸ್ತು ಮಾರಾಟ ಜಾಲದ ಮೇಲೆ ಭರ್ಜರಿ ಕಾರ್ಯಾಚರಣೆ ನಡೆಸಿರುವ ಸಿಸಿಬಿ, ಸಿವಿಲ್ ಎಂಜಿನಿಯರ್ ಸೇರಿದಂತೆ ಇಬ್ಬರನ್ನು ಪ್ರತ್ಯೇಕವಾಗಿ ಬಂಧಿಸಿ 6 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದೆ. ಜಿಗಣಿ ನಿವಾಸಿ ಕ್ರಿಸ್ಟೋಫರ್ ಹಾಗೂ ಬೊಮ್ಮಸಂದ್ರದ ನಿವಾಸಿ ಜಿಜೋ ಪ್ರಸಾದ್ ಬಂಧಿತರಾಗಿದ್ದು, ಆರೋಪಿಗಳಿಂದ 3.5 ಕೆಜಿ ಹೈಡ್ರೋಫೋನಿಕ್ ಗಾಂಜಾ ಹಾಗೂ 1 ಕೆಜಿ ಎಂಡಿಎಂ ಡ್ರಗ್ಸ್ ಸೇರಿ 6 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿಯಾಗಿದೆ. ಈ ದಾಳಿ ವೇಳೆ ತಲೆಮರೆಸಿಕೊಂಡಿರುವ ಮತ್ತಿಬ್ಬರ ಪತ್ತೆಗೆ ಸಿಸಿಬಿ ತನಿಖೆ ಮುಂದುವರೆಸಿದೆ.

ಹಲವು ದಿನಗಳಿಂದ ಪ್ರತ್ಯೇಕವಾಗಿ ನಗರದಲ್ಲಿ ಡ್ರಗ್ಸ್ ದಂಧೆಯಲ್ಲಿ ಈ ಪೆಡ್ಲರ್‌ಗಳು ತೊಡಗಿದ್ದ ಬಗ್ಗೆ ಸಿಸಿಬಿಯ ಮಾದಕ ವಸ್ತು ನಿಗ್ರಹ ದಳಕ್ಕೆ ಖಚಿತ ಮಾಹಿತಿ ಸಿಕ್ಕಿತು. ಅಂತೆಯೇ ಡ್ರಗ್ಸ್ ಮಾರಾಟಕ್ಕೆ ಯತ್ನಿಸಿದ್ದಾಗ ಬೇಗೂರು ಕೆರೆ ಬಳಿ ಕ್ರಿಸ್ಟೋಫರ್‌ನನ್ನು ಇನ್ಸ್‌ಪೆಕ್ಟರ್ ಲಕ್ಷ್ಮೀನಾರಾಯಣ್ ಹಾಗೂ ಎಲೆಕ್ಟ್ರಾನಿಕ್ ಸಿಟಿ 2ನೇ ಹಂತದ ಸಮೀಪ ಜಿಜೋನನ್ನು ಇನ್ಸ್‌ಪೆಕ್ಟರ್ ಮಹಮ್ಮದ್ ಮಕ್ರಂ ನೇತೃತ್ವದ ತಂಡವು ಸೆರೆ ಹಿಡಿದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.


ಆರೋಪಿಗಳಾದ ಜಿಜೋ ಪ್ರಸಾದ್ ಹಾಗೂ ಕ್ರಿಸ್ಟೋಫರ್

### ಸಿವಿಲ್ ಎಂಜಿನಿಯರ್ ಬಳಿ 4 ಕೋಟಿ ಡ್ರಗ್ಸ್

ಸಿವಿಲ್ ಎಂಜಿನಿಯರ್ ಜಿಜೋ ಪ್ರಸಾದ್ ಮೂಲತಃ ಕೇರಳ ರಾಜ್ಯದವನಾಗಿದ್ದು, ಕಳೆದ ನಾಲ್ಕು ತಿಂಗಳಿಂದ ನಗರದ ಖಾಸಗಿ ಕಂಪನಿಯಲ್ಲಿ ಆತ ಕಾರ್ಯನಿರ್ವಹಿಸುತ್ತಿದ್ದ. ಬೊಮ್ಮಸಂದ್ರ ಸಮೀಪದ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದ ಜಿಜೋ, ಸುಲಭವಾಗಿ ಹಣ ಸಂಪಾದನೆಗೆ ತನ್ನ ಸ್ನೇಹಿತ ಜತೆ ಸೇರಿ ಡ್ರಗ್ಸ್ ದಂಧೆಗಿಳಿದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಅಂತೆಯೇ ಕೇರಳದ ಡ್ರಗ್ಸ್ ಮಾಫಿಯಾದಿಂದ ಕಡಿಮೆ ಬೆಲೆ ಡ್ರಗ್ಸ್ ಖರೀದಿಸಿ ತಂದು ನಗರದಲ್ಲಿ ದುಬಾರಿ ಬೆಲೆಗೆ ಎಲೆಕ್ಟ್ರಾನಿಕ್ ಸಿಟಿ-ಬೊಮ್ಮಸಂದ್ರ ವ್ಯಾಪ್ತಿ ಐಟಿ ಉದ್ಯೋಗಿಗಳಿಗೆ ಜಿಜೋ ಹಾಗೂ ಆತನ ಸ್ನೇಹಿತ ಮಾರುತ್ತಿದ್ದರು. ಯಾರಿಗೂ ಅನುಮಾನ ಬಾರದಂತೆ ಡಬಲ್ ಲೇಯರ್ ಏರ್ ಟೈಟ್ ಪ್ಲಾಸ್ಟಿಕ್ ಕವರ್‌ಗಳಲ್ಲಿ ತಲಾ 100 ಗ್ರಾಂನಂತೆ ಸಣ್ಣಸಣ್ಣ ಪೊಟ್ಟಣಗಳಲ್ಲಿ ಡ್ರಗ್ಸ್ ತುಂಬಿ ಬಿಕರಿ ಮಾಡುತ್ತಿದ್ದರು. ತಲಾ ಗ್ರಾಂ ಹೈಡ್ರೋಫೋನಿಕ್ ಗಾಂಜಾವನ್ನು 12 ಸಾವಿರಕ್ಕೆ ಮಾರಾಟ ಮಾಡಿ ಆರೋಪಿಗಳು ಹಣ ಸಂಪಾದಿಸುತ್ತಿದ್ದರು. ಈ ಬಗ್ಗೆ ದಂಧೆ ಬಗ್ಗೆ ಖಚಿತ ಮಾಹಿತಿ ಎಲೆಕ್ಟ್ರಾನಿಕ್ ಸಿಟಿ 2ನೇ ಹಂತದಲ್ಲಿ ಜಿಜೋ ಪ್ರಸಾದ್‌ನನ್ನು ಬಂಧಿಸಿ 1.05 ಕೆಜಿ ಹೈಡ್ರೋಫೋನಿಕ್ ಗಾಂಜಾವನ್ನು ಸಿಸಿಬಿ ಜಪ್ತಿ ಮಾಡಿದೆ. ಬಳಿಕ ಆತನ ಫ್ಲ್ಯಾಟ್ ಮೇಲೆ ದಾಳಿ ನಡೆಸಿ ಪೊಲೀಸರು ಪರಿಶೀಲಿಸಿದಾಗ 2.4 ಕೆಜಿ ಗಾಂಜಾ ಪತ್ತೆಯಾಯಿತು. ಒಟ್ಟಾರೆ ಆರೋಪಿಯಿಂದ 3.5 ಕೆಜಿ ಹೈಡ್ರೋಫೋನಿಕ್ ಗಾಂಜಾ, 26 ಲಕ್ಷ ನಗದು ಹಾಗೂ ಮೊಬೈಲ್ ಸೇರಿ ಒಟ್ಟು 4.52 ಕೋಟಿ ಮೌಲ್ಯದ ವಸ್ತುಗಳನ್ನು ಇನ್ಸ್‌ಪೆಕ್ಟರ್ ಮಕ್ರಂ ತಂಡವು ಜಪ್ತಿ ಮಾಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.




### ನೈಜೀರಿಯಾ ಪ್ರಜೆ ಬಳಿ 2 ಕೋಟಿ ರೂ. ಡ್ರಗ್ಸ್

ಬೇಗೂರು ಕೆರೆ ಸಮೀಪ ಇನ್ಸ್‌ಪೆಕ್ಟರ್ ಲಕ್ಷ್ಮೀನಾರಾಯಣ್ ಅವರು ನಡೆಸಿದ ಮತ್ತೊಂದು ಕಾರ್ಯಾಚರಣೆಯಲ್ಲಿ ನೈಜೀರಿಯಾ ದೇಶ ಪೆಡ್ಲರ್ ಕ್ರಿಸ್ಟೋಫರ್ ಸಿಕ್ಕಿಬಿದ್ದಿದ್ದಾನೆ. ಈತನ ಬಳಿ 2 ಕೋಟಿ ರೂ. ಮೌಲ್ಯದ 1 ... ಎಂದು ಅಧಿಕಾರಿಗಳು ವಿವರಿಸಿದ್ದಾರೆ.

2012ರಲ್ಲಿ ಬಿಜಿನೆಸ್ ವೀಸಾದಡಿ ಭಾರತಕ್ಕೆ ಬಂದ ಆತ, ಬಳಿಕ ಬೆಂಗಳೂರಿಗೆ ಬಂದು ಆನೇಕಲ್ ತಾಲೂಕಿನ ಜಿಗಣಿ ಸಮೀಪ ನೆಲೆಸಿದ್ದ. ಮೋಜಿನ ಜೀವನ ನಡೆಸುವ ದುರುದ್ದೇಶದಿಂದ ಡ್ರಗ್ಸ್ ದಂಧೆಗಿಳಿದ್ದ ಕ್ರಿಸ್ಟೋಫರ್, ನಗರದ ಪರಿಚಿತ ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ಮಾರಾಟ ಮಾಡುತ್ತಿದ್ದ. ತಲಾ ಗ್ರಾಂಗೆ 20 ಸಾವಿರಕ್ಕೆ ಎಂಡಿಎಂಎ ಡ್ರಗ್ಸ್ ಅನ್ನು ಆತ ಮಾರುತ್ತಿದ್ದ. ಈತನ ಬಗ್ಗೆ ಸ್ಪಷ್ಟ ಬಾತ್ಮಿ ಕಲೆ ಹಾಕಿ ಸಿಸಿಬಿ ಕಾರ್ಯಾಚರಣೆ ನಡೆಸಿದೆ. ನಕಲಿ ದಾಖಲೆ ಸೃಷ್ಟಿಸಿಕೊಂಡು ಅಕ್ರಮವಾಗಿ ಭಾರತದಲ್ಲಿ ಆರೋಪಿ ನೆಲೆಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಈ ಕುರಿತು ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗೆ (ಎಫ್‌ಆರ್‌ಆರ್‌ಒ) ಮಾಹಿತಿ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

### ಲೊಕೇಷನ್ ಕಳುಹಿಸಿ ಡ್ರಗ್ಸ್ ಪೂರೈಕೆ

ತಮ್ಮ ಪರಿಚಿತ ಗ್ರಾಹಕರಿಗೆ ಮಾತ್ರ ಆರೋಪಿಗಳು ಡ್ರಗ್ಸ್ ಪೂರೈಸುತ್ತಿದ್ದರು. ಈ ಡ್ರಗ್ಸ್ ದಂಧೆಯೂ ಆನ್‌ಲೈನ್ ಮೂಲಕ ನಡೆದಿತ್ತು. ತಮಗೆ ಆನ್‌ಲೈನ್ ಮೂಲಕ ಹಣವನ್ನು ಸ್ವೀಕರಿಸುತ್ತಿದ್ದ ಆರೋಪಿಗಳು, ಬಳಿಕ ತಾವು ಗೌಪ್ಯ ಸ್ಥಳದಲ್ಲಿ ಡ್ರಗ್ಸ್ ತಂದಿಟ್ಟು ನಂತರ ಗ್ರಾಹಕರಿಗೆ ಲೊಕೇಷನ್ ಕಳುಹಿಸುತ್ತಿದ್ದರು. ಆ ಲೊಕೇಷನ್‌ಗೆ ತೆರಳಿ ಡ್ರಗ್ಸ್ ತೆಗೆದುಕೊಂಡು ಗ್ರಾಹಕರು ತೆರಳುತ್ತಿದ್ದರು ಎಂದು ಪೊಲೀಸರು ವಿವರಿಸಿದ್ದಾರೆ.

# ಹೊಸ ಮನೆಗೆ ಕನ್ನ ಹಾಕಿದ್ದ ನೇಪಾಳಿ ಗ್ಯಾಂಗ್ ಸೆರೆ

## 50 ಲಕ್ಷ ಮೌಲ್ಯದ ಚಿನ್ನಾಭರಣ, 4.5 ಕೆಜಿ ಬೆಳ್ಳಿ, 2 ಮೊಬೈಲ್ ವಶ

ತಾನು ಕೆಲಸ ಮಾಡುತ್ತಿದ್ದ ಅಪಾರ್ಟ್ಮೆಂಟ್‌ನ ಪಕ್ಕದ ಬೀದಿಯ ಮನೆಯೊಂದಕ್ಕೆ ಕನ್ನ ಹಾಕಿ ನಗ ನಾಣ್ಯ ದೋಚಿದ್ದ ನೇಪಾಳಿ ಹಾಗೂ ಆತನ ನಾಲ್ವರು ಸ್ನೇಹಿತರು ತಲಘಟ್ಟಪುರ ಠಾಣೆ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ತಾನು ಕೆಲಸ ಮಾಡುತ್ತಿದ್ದ ಅಪಾರ್ಟಮೆಂಟ್‌ನ ಪಕ್ಕದ ಬೀದಿಯ ಮನೆಯೊಂದಕ್ಕೆ ಕನ್ನ ಹಾಕಿ ನಗ ನಾಣ್ಯ ದೋಚಿದ್ದ ನೇಪಾಳಿ ಹಾಗೂ ಆತನ ನಾಲ್ವರು ಸ್ನೇಹಿತರು ತಲಘಟ್ಟಪುರ ಠಾಣೆ ಪೊಲೀಸರ ಬಲೆಗೆ ಬಿದ್ದಿದ್ದಾರೆ. ನೇಪಾಳ ಮೂಲದ ಲಾಲ್‌ಬಹದ್ದೂರವ ಬೋಹರ್ ಅಲಿಯಾಸ್ ಲೋಕೇಶ್, ಕಮಲ್ ಬಹದ್ದೂರ್ ಚಲೌನಿ ಅಲಿಯಾಸ್ ಕೈಲಾಶ್, ಕಿರಣ್ ಬೋಹರ ಅಲಿಯಾಸ್ ಕಿರಣ್, ನೇತ್ರಾ ಬಹದ್ದೂರ್ ಚಲೌನಿ ಹಾಗೂ ರಾಜೇಶ್ ಬಹದ್ದೂರ್ ಸಹಾ ಅಲಿಯಾಸ್ ರಾಜೇಶ್ ಬಂಧಿತರಾಗಿದ್ದು, ಆರೋಪಿಗಳಿಂದ 502 ಗ್ರಾಂ ಚಿನ್ನಾಭರಣ, 4.5 ಕೆಜಿ ಬೆಳ್ಳಿ ವಸ್ತುಗಳು ಹಾಗೂ 2 ಮೊಬೈಲ್ ಸೇರಿದಂತೆ 50 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ತಿಂಗಳ ಹಿಂದಷ್ಟೇ ಗುಬ್ಬಲಾಳದ ಜೆಹೆಚ್‌ಬಿಸಿಎಸ್ ಲೇಔಟ್‌ನಲ್ಲಿ ಹೊಸ ಮನೆಗೆ ಪ್ರವೇಶ ಮಾಡಿದ್ದ ಸಿವಿಲ್ ಗುತ್ತಿಗೆದಾರ ರವಿಕುಮಾರ್ ಅವರ ಮನೆ ಬೀಗ ಮುರಿದು ಕಿಡಿಗೇಡಿಗಳು ಕಳ್ಳತನ ಮಾಡಿದ್ದರು. ರವಿಕುಮಾರ್ ಪತ್ನಿ ನಾಗಲಕ್ಷ್ಮಿ ಎಸ್‌ಬಿಐ ಬ್ಯಾಂಕ್‌ನಲ್ಲಿ ಹಾಗೂ ಸಾಫ್ಟ್‌ವೇರ್ ಕಂಪನಿಯಲ್ಲಿ ಅವರ ಪುತ್ರ ಉದ್ಯೋಗದಲ್ಲಿದ್ದಾರೆ. ಕೆಲಸದ ನಿಮಿತ್ತ ಮನೆಗೆ ಬೀಗ ಹಾಕಿಕೊಂಡು ಬೆಳಗ್ಗೆ ತೆರಳಿದರೆ ಈ ಕುಟುಂಬವು ಸಂಜೆ ಮರಳುತ್ತಿತ್ತು. ಈ ವೇಳೆ ಕಳ್ಳತನ ನಡೆದಿತ್ತು. ಈ ಕೃತ್ಯದ ತನಿಖೆಗಿಳಿದ ಇನ್ಸ್‌ಪೆಕ್ಟರ್ ಎನ್.ಜಗದೀಶ್ ನೇತೃತ್ವದ ತಂಡವು, ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ನೇಪಾಳಿ ಗ್ಯಾಂಗ್ ಅನ್ನು ಸೆರೆ ಹಿಡಿದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ರವಿಕುಮಾರ್‌ರವರ ಮನೆ ಸನಿಹದ ಅಪಾರ್ಟ್‌ಮೆಂಟ್‌ನಲ್ಲೇ ಸಹಾಯಕನಾಗಿದ್ದ ಲಾಲ್, ಮಧ್ಯಾಹ್ನದ ಹೊತ್ತಿನಲ್ಲಿ ಆ ಪ್ರದೇಶದಲ್ಲಿ ಅಡ್ಡಾಡಿ ಬೀಗ ಹಾಕಿದ ಮನೆಗಳನ್ನು ಗುರುತಿಸಿ ಮಾಹಿತಿ ಸಂಗ್ರಹಿಸುತ್ತಿದ್ದ. ಆಗ ರವಿಕುಮಾರ್‌ರವರ ಹೊಸ ಮನೆಯಲ್ಲಿ ಹೆಚ್ಚು ಚಿನ್ನ ಹಾಗೂ ಹಣವಿರುತ್ತದೆ ಎಂದು ಅಂದಾಜಿಸಿ ಆತ ಕಳ್ಳತನಕ್ಕೆ ಸಂಚು ರೂಪಿಸಿದ್ದ. ಅಂತೆಯೇ ಯುಗಾದಿಗೂ ಮುನ್ನ ದಿನ ಆ ಮನೆಯವರು ಕೆಲಸಕ್ಕೆ ತೆರಳಿದಾಗ ಕಳ್ಳತನ ಮಾಡಿದ್ದರು.

### ಬ್ರ್ಯಾಂಡ್ ಬಟ್ಟೆ ಧರಿಸಿ ಶೋಕಿ

ಗುತ್ತಿಗೆದಾರರ ಮನೆಗೆ ಪ್ರವೇಶಿಸಿದ್ದ ನೇಪಾಳಿಗರು, ಕೂಡಲೇ ಸಿಸಿಟಿವಿ ಕ್ಯಾಮೆರಾ ಸಂಪರ್ಕ ಕಡಿತಗೊಳಿಸಿದ್ದಾರೆ. ಬಳಿಕ ಬೀರುವಿನಲ್ಲಿಟ್ಟಿದ್ದ ಅರ್ಧ ಕೆಜಿ ಚಿನ್ನ ವಜ್ರ ಹಾಗೂ ಬೆಳ್ಳಿ ವಸ್ತುಗಳನ್ನು ಬ್ಯಾಗ್‌ಗೆ ತುಂಬಿಕೊಂಡಿದ್ದಾರೆ. ಆಗ ರವಿಕುಮಾರ್ ಅವರ ಪುತ್ರನ ಬ್ರ್ಯಾಂಡ್ ಬಟ್ಟೆಗಳನ್ನು ಧರಿಸಿ ನೇಪಾಳಿಗರು ಹೊರ ಬಂದು ಮನೆಯಿಂದ 2 ಕಿ.ಮೀ.ನಷ್ಟು ನಡೆದುಕೊಂಡು ಹೋಗಿ ಬಳಿಕ ಕ್ಯಾಬ್ ಬುಕ್ ಮಾಡಿ ವರ್ತೂರಿಗೆ ಆರೋಪಿಗಳು ಹೋಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

### ನೇಪಾಳಕ್ಕೆ ಹಾರುವ ಮುನ್ನ ಸಿಕ್ಕಿಬಿದ್ದರು

ಈ ಘಟನಾ ಸ್ಥಳ ಸಮೀಪದ ಮನೆಯೊಂದ ಸಿಸಿಟಿವಿ ಕ್ಯಾಮೆರಾದಲ್ಲಿ ಆರೋಪಿಗಳು ಚಲನವಲನ ಹಾಗೂ ಅವರು ತೆರಳಿದ್ದ ಕಾರಿನ ನೋಂದಣಿ ಸಂಖ್ಯೆ ದೃಶ್ಯಾವಳಿ ಪತ್ತೆಯಾಗಿತ್ತು. ಈ ಸುಳಿವು ಆಧರಿಸಿ ಕ್ಷಿಪ್ರವಾಗಿ ಇನ್ಸ್‌ಪೆಕ್ಟರ್ ಜಗದೀಶ್ ತಂಡವು ಕಾರ್ಯಾಚರಣೆ ನಡೆಸಿದೆ. ಕೃತ್ಯದ ನಡೆದ 24 ತಾಸಿನೊಳಗೆ ಆರೋಪಿಗಳು ಪೊಲೀಸರ ಬಲೆಗೆ ಬಿದ್ದಿದ್ದಾರೆ. ಒಂದು ದಿನ ತಡವಾಗಿದ್ದರು ತಮ್ಮ ದೇಶಕ್ಕೆ ನೇಪಾಳಿಗರು ಪರಾರಿಯಾಗುತ್ತಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

### ನೇಪಾಳಿ ಗ್ಯಾಂಗ್ ಹಿನ್ನೆಲೆ

ವರ್ಷದ ಹಿಂದೆ ಉದ್ಯೋಗ ಅರಸಿ ನಗರಕ್ಕೆ ಬಂದಿದ್ದ ಲಾಲ್ ಬಹದ್ದೂರ್, ಗುಬ್ಬಲಾಳ ಸಮೀಪದ ಅಪಾರ್ಟ್ಮೆಂಟ್‌ನಲ್ಲಿ ಕೆಲಸಗಾರನಾಗಿ ದುಡಿದು ಜೀವನ ಸಾಗಿಸುತ್ತಿದ್ದ. ವರ್ತೂರು ಸಮೀಪದ ಅಪಾರ್ಟ್ ಮೆಂಟ್‌ನಲ್ಲಿ ಕಮಲ್, ಹೋಟೆಲ್‌ನಲ್ಲಿ ಕಿರಣ್, ನೇತ್ರಾ ಹಾಗೂ ಬಾಗಲೂರು ಸಮೀಪ ಟ್ರಾವೆಲ್ಸ್ ಏಜೆನ್ಸಿ ಕಚೇರಿಯಲ್ಲಿ ರಾಜೇಶ್ ಕೆಲಸ ಮಾಡುತ್ತಿದ್ದರು. ಒಂದೇ ದೇಶದವರಾಗಿದ್ದರಿಂದ ಈ ಐವರು ಆತ್ಮೀಯ ಒಡನಾಡಿಗಳಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ಪಾತಕ ಪ್ರಪಂಚ

# ಚೆಲುವೆಯ ಚೆಲ್ಲಾಟ

ಸೌಂದರ್ಯವತಿಯರೆಲ್ಲಾ ಇವಳಂತೆ ವಿಲಕ್ಷಣ ಮತ್ತು ವಿಚಿತ್ರ ಮತ್ತು ವಿಕಲ್ಪ ಅಸಹಜ ಬಯಕೆಗಳನ್ನು ಹೊಂದಿರುತ್ತಾರೆ ಮತ್ತು ಸಾಮಾನ್ಯ ಸ್ತ್ರೀಯರು ಊಹೆ ಮಾಡದ ತೆವಲುಗಳನ್ನು ತೀರಿಸಿಕೊಳ್ಳಲು ಆಡಬಾರದ ಆಟಗಳನ್ನು ಆಡುತ್ತಾರೆ ಎಂಬುದೇ ಈ ಲೇಖನದ ಚೆಲುವೆಯ ಹಿನ್ನಲೆ.

ಆ ಚೆಲುವೆ ಯಾರು?

ಅನನ್ಯ ಪಟೇಲ್...!

●●●

ನಗರದ, ಬಸವನಗುಡಿ ಪೊಲೀಸ್ ಸ್ಟೇಷನ್‌ಗೆ, ಶ್ರೀಮಂತಿಕೆಯ ಲಕ್ಷಣಗಳಿರುವ ಗಂಡ-ಹೆಂಡತಿ ಮತ್ತು ಇಬ್ಬರು ಸಂಬಂಧಿಕರು ಬಂದಿದ್ದರು.

ರಾಜೇಂದ್ರ ಪಟೇಲ್.

ಶ್ರೀಮತಿ ಭಾರ್ಗವಿ ಪಟೇಲ್.

ರಾಜೇಂದ್ರ ಪಟೇಲ್ ರಾಜಕೀಯ ಹಿನ್ನಲೆ ಮತ್ತು ಶ್ರೀಮಂತಿಕೆ, ಸಮಾಜದಲ್ಲಿ ಗೌರವ, ಪ್ರತಿಷ್ಠೆ ಇರುವ ವ್ಯಕ್ತಿ. ಇವರ ಮುದ್ದಿನ ಮಗಳೇ ಅನನ್ಯ...!

ಇತ್ತೀಚೆಗೆ ನಡೆದ 'ಮಿಸ್ ಕರ್ನಾಟಕ' ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದು, ತನ್ನ ಬಲು ಅಪರೂಪದ ಸೌಂದರ್ಯ ಕರ್ನಾಟಕದ ಗಮನ ಸೆಳೆಯುವಂತೆ ಮಾಡಿದ್ದ ಚೆಲುವೆ ಈ ಅನನ್ಯ.

'ಇನೋವಾ' ಕಾರು ಈಗ ಪೊಲೀಸ್ ಸ್ಟೇಷನ್ ಮುಂದೆ ನಿಂತಿತು. ಮೊದಲು ಇಳಿದವರು ಇವರ ಹತ್ತಿರದ ಸಂಬಂಧಿಕರು. ನಂತರ ರಾಜೇಂದ್ರ ಪಟೇಲ್ ಇಳಿದರು.

ಅವರು ತಮ್ಮ ಪತ್ನಿಯನ್ನು ಇಲ್ಲಿಗೆ ಕರೆದುಕೊಂಡು ಬಂದಿರಲಿಲ್ಲ. ಇವರು ಬರುವ ವಿಚಾರವನ್ನು ಸೆಕ್ರೆಟರಿ ಮೊದಲೇ ಫೋನ್ ಮಾಡಿ ತಿಳಿಸಿದ್ದರಿಂದ, ಪೊಲೀಸ್ ಅಧಿಕಾರಿ ರಂಗನಾಥ ಗೌರವಯುತವಾಗಿ ಸ್ವಾಗತಿಸಿ ಕೂರಲು ಆಸನದ ವ್ಯವಸ್ಥೆ ಮಾಡಿದರು.

''ಸಾರ್... ನೀವು ಇಲ್ಲಿಗೆ ಬರುವ ಅಗತ್ಯ ಇರಲಿಲ್ಲ. ಫೋನ್ ಮಾಡಿದ್ದರೆ ನಾನೇ ನಿಮ್ಮ ಮನೆಗೆ ಬರುತ್ತಿದ್ದೆ.''

ರಾಜೇಂದ್ರ ಪಟೇಲ್ ಗತ್ತಿನಿಂದಲೇ ''ಕೆಲವು ಸನ್ನಿವೇಶಗಳಲ್ಲಿ ನಾವು ಪೊಲೀಸ್ ಸ್ಟೇಷನ್‌ಗೆ ಬರೋದು ಅನಿವಾರ್ಯ ಆಗುತ್ತದೆ.''

''ಪ್ರಾಬ್ಲಂ ಏನು ಸಾರ್?''

''ಮಿಸ್ಸಿಂಗ್ ಕಂಪ್ಲೆಂಟ್ ಕೊಡಲು ಬಂದಿದ್ದೀನಿ.''

''ಕಣ್ಮರೆಯಾಗಿರೋದು ಯಾರು ಸಾರ್?''

''ನನ್ನ ಮಗಳು ಅನನ್ಯ.''

ಪೊಲೀಸ್ ಅಧಿಕಾರಿ ಆಶ್ಚರ್ಯದಿಂದ ''ವಾಟ್... ನಿಮ್ಮ ಮಗಳು ಕಣ್ಮರೆಯಾಗಿದ್ದಾಳಯ'

''ಹೌದು ಇನ್ಸ್‌ಪೆಕ್ಟರ್.''

''ಯಾವತ್ತು... ಯಾವ ಸನ್ನಿವೇಶದಲ್ಲಿ ಸಾರ್?''

''ಇನ್ಸ್‌ಪೆಕ್ಟರ್... ಇದು ಬಹಿರಂಗ ಆಗಬಾರದು. ತುಂಬಾ ಗೌಪ್ಯವಾಗಿ ತನಿಖೆ ಮಾಡಬೇಕು. ಅನ್ ಅಫಿಷಿಯಲ್ ಆಗಿ ಟ್ರೈ ಮಾಡಿ. ಅದಕ್ಕಾಗಿ ಎಷ್ಟು ಹಣ ಖರ್ಚಾದರೂ ಕೊಡ್ತೀನಿ.'

ರಂಗನಾಥನ ಮುಖ ಅರಳಿತು.

ಉತ್ಸಾಹ ಉಕ್ಕೇರಿತು.

''ಸಾರ್... ನೀವು ಚಿಂತೆ ಮಾಡ್ಬೇಡಿ. ಸುಳಿವು ಹೊರಗೆ ಬರದಂತೆ ಗೌಪ್ಯವಾಗಿ ತನಿಖೆ ಮಾಡ್ತೀನಿ. ನನ್ನ ಕಂಟ್ರೋಲ್ ನಲ್ಲಿ ನಾಲ್ಕು ಮಂದಿ ಪೊಲೀಸ್ ಅಧಿಕಾರಿಗಳಿದ್ದಾರೆ. ಅವರೆಲ್ಲಾ ತುಂಬಾ ಬುದ್ಧಿವಂತರು. ನಾನು ಹೇಳಿದಂತೆ ತನಿಖೆ ಮಾಡ್ತಾರೆ. ನೀವು ಅವರ ಬಗ್ಗೆ ಚಿಂತೆ ಮಾಡ್ಬೇಡಿ. ಈಗ ನಾನು ಕೇಳುವ ಪ್ರಶ್ನೆಗಳಿಗೆ ನೀವು ಉತ್ತರಿಸಬೇಕು.''

''ಅದೇನು ಅಂತ ಕೇಳಿ.''

''ಅನನ್ಯ ಯಾರನ್ನಾದರೂ ಲವ್ ಮಾಡ್ತಿದ್ಲ? ನೀವು ನಿಮ್ಮ ಗೌರವ, ಶ್ರೀಮಂತಿಕೆ ಅವಳು ಲವ್ ಮಾಡುತ್ತಿದ್ದ ಯುವಕನನ್ನು ಒಪ್ಪಲಾರರು ಅಂತ ಏನಾದರೂ...''

''ನನ್ನ ಮಗಳ ಸ್ವಭಾವ ಬೇರೆ ಯುವತಿಯರಂತೆ ಅಲ್ಲ. ಅವಳು ಲವ್ ಮಾಡೋಲ್ಲ, ಲವ್ ಗೇಮ್ ಆಡ್ತಾಳೆ.''

''ಲವ್ ಗೇಮ್... ಹಾಗಂದ್ರೇನು ಸಾರ್?''

''ಲವ್ ಮಾಡಿದಂತೆ ಆಟ ಆಡಿ ಯುವಕರನ್ನು ಫೂಲ್ ಮಾಡಿ ಖುಷಿಪಡುತ್ತಿದ್ದಳು.''

''ಆ ಯುವಕ ಯಾರು ಸಾರ್?''

''ನನ್ನ ಮಗಳನ್ನು ಕಿಡ್ನಾಪ್ ಮಾಡಿರುವ ಯುವಕ ಮಹೇಂದ್ರ. ಅವನನ್ನು ಅವಳು ಫೂಲ್ ಮಾಡಿದ್ದಳು.''

ಆ ಕೂಡಲೇ ಅವರ ಜೊತೆ ಬಂದಿದ್ದ ರಾಜೇಂದ್ರ ಪಟೇಲರ ತಂಗಿಯ ಮಗ ಜೈರಾಜ್ ಬಾಗಡೆ ''ಸಾರ್... ಅವಳೇನೋ ತಮಾಷೆಗಾಗಿ ಲವ್ ಗೇಮ್ ಮಾಡಿದ್ಲು. ಆದರೆ ಅವನು ಸೇಡು ತೀರಿಸಿಕೊಳ್ಳಬೇಕು ಅಂತ ಅವಳನ್ನ ಕಿಡ್ನಾಪ್ ಮಾಡಿದ್ದಾನೆ'' ಎಂದನು.

''ಆರ್ ಯೂ ಶ್ಯೂರ್.''

''ಹಂಡ್ರೆಡ್ ಪರ್ಸೆಂಟ್ ಸಾರ್.''

ನಂಬರ್ ಮತ್ತು ಅವನ ಫ್ರೆಂಡ್ ಸರ್ಕಲ್ ಬಗ್ಗೆ ತಿಳಿಸಿ.''

ಜೈರಾಜ್ ಈಗ ಎಲ್ಲವನ್ನೂ ಸಹ ವಿವರವಾಗಿ ಹೇಳಿದಾಗ ಪೊಲೀಸ್ ಅಧಿಕಾರಿ ನೋಟ್ ನೋಡಿಕೊಂಡನು.

ಅವರು ಅಂತಿಮವಾಗಿ ''ಇನ್ಸ್‌ಪೆಕ್ಟರ್... ಬೀ ಕೇರ್‌ಫುಲ್. ಇದು ಬಹಿರಂಗ ಆಗಬಾರದು. ಮಹೇಂದ್ರನನ್ನು ಅರೆಸ್ಟ್ ಮಾಡಿದರೂ ಪ್ರಕರಣ ಹೊರಗೆ ಬರಬಾರದು. ನನಗೆ ನನ್ನ ಮಗಳು ಕ್ಷೇಮವಾಗಿ ಬರುವುದು ಮುಖ್ಯ. ಇದರ ಬಗ್ಗೆ ನಿಮಗೆ ವಿವರಿಸಿ ಹೇಳುವ ಅಗತ್ಯ ಇಲ್ಲ'' ಎಂದರು.

ಪೊಲೀಸ್ ಅಧಿಕಾರಿ ತಲೆಯಾಡಿಸಿದನು. ಸೂಟ್ ಕೇಸ್‌ನಲ್ಲಿದ್ದ ಎರಡು ಲಕ್ಷ ರೂಪಾಯಿ ಈಗ ರವಾನೆ ಆಯಿತು!

ತನಿಖೆ ಪ್ರಾರಂಭವಾಯಿತು.

●●●

ಕಳಿಂಗ ಬಾರ್ ಅಂಡ್ ರೆಸ್ಟೋರೆಂಟ್!

ನಗರದ ಡಿಲಕ್ಸ್ ಬಾರ್‌ಗಳಲ್ಲಿ ಇದೂ ಸಹ ಮುಖ್ಯವಾಗಿದೆ ಎಂದು ಹೇಳಬಹುದು. ಬಾರ್‌ನ ಸೆಕೆಂಡ್ ಫ್ಲೋರ್‌ನಲ್ಲಿ ಪ್ರೈವೇಟ್ ಕ್ಯಾಬಿನ್‌ಗಳಿವೆ. ಸಿಂಗಲ್, ಡಬ್ಬಲ್ ಮತ್ತು ಆರು ಮಂದಿ ಕೂರುವಂತ ಕ್ಯಾಬಿನ್‌ಗಳಿವೆ. ಈ ಕ್ಯಾಬಿನ್‌ಗೆ ಗಂಟೆಗೆ ಇಷ್ಟು ಬಾಡಿಗೆ ಕೊಡಬೇಕು.

ಅವನು ಕ್ಯಾಬಿನ್‌ನಲ್ಲಿ ಕುಳಿತಿದ್ದಾನೆ. ಟೇಬಲ್ ಮೇಲೆ ಎಲ್ಲಾ ಇದೆ.

ರಾಯಲ್ ಚಾಲೆಂಜ್ ವಿಸ್ಕಿ.

ಸ್ಪೆಷಲ್ ಸೋಡ.

ಚಿಕನ್ ಟಿಕ್ಕ.

ಚಿಕನ್ ಬಿರಿಯಾನಿ.

ಅವನು ವಿಸ್ಕಿ ಚಪ್ಪರಿಸುತ್ತಾ ಚಿಕನ್ ತಿನ್ನುತ್ತಿದ್ದಾನೆ.

ಒಳಗೆ ಯಾರೋ ಬಂದರು.

ಅವನಿಗೆ ಕೋಪ ಬಂದಿತು. ''ಮಿಸ್ಟರ್ ಇದು ಪ್ರೈವೇಟ್ ಚೇಂಬರ್. ಒಳಗೆ ಯಾರೂ ಸಹ ಬರಬಾರದು'' ಎಂದನು.

ಆ ವ್ಯಕ್ತಿ ಒಳಗೆ ಬಂದನು.

''ಯೂ ಆರ್ ಮಿಸ್ಟರ್ ಮಹೇಂದ್ರ?''

ಮಹೇಂದ್ರ ಆಶ್ಚರ್ಯದಿಂದ ''ನೀವ್ಯಾರು? ನನ್ನ ಹೆಸರು ಹೇಗೆ ಗೊತ್ತಾಯಿತು?''

''ನಾನು ಇನ್ಸ್‌ಪೆಕ್ಟರ್ ರಂಗನಾಥ್.''

ಮಹೇಂದ್ರ ಬೆಚ್ಚಿಬಿದ್ದನು.

''ಬಿಲ್ ಪೇ ಮಾಡಿ ಸೈಲೆಂಟ್ ಆಗಿ ನನ್ನ ಫಾಲೋ ಮಾಡಿದ್ರೆ ಗಲಾಟೆ ಆಗೋಲ್ಲ. ಇಲ್ಲಾಂದ್ರೆ...'' ಎಂದು ಬಲಕ್ಕೆ ತಿರುಗಿದನು.

ಮಹೇಂದ್ರ ಸಹ ಆ ಕಡೆ ತಿರುಗಿ ನೋಡಿದಾಗ ಕಂಡು ಬಂದಿತು ಆ ದೃಶ್ಯ. ಮೂರು ಮಂದಿ ನಿಂತಿದ್ದಾರೆ. ಒಬ್ಬ ಬೇರೆಯವರಿಗೆ ಕಾಣುವ ರೀತಿಯಲ್ಲಿ ಕೋಳ ತೋರಿಸಿದಾಗ ಗಾಬರಿಯಾದನು.

ಆ ಮೂವರೂ ಸಹ ಪೊಲೀಸರು. ಆದರೆ ಯೂನಿಫಾರಂ ಇಲ್ಲದೆ ಬಂದಿದ್ದಾರೆ.

ಮಹೇಂದ್ರ ಮೆಲ್ಲಗೆ ''ಸಾರ್... ನಾನು ನಿಮ್ಮ ಜೊತೆ ಬರ್ತೀನಿ. ಆದರೆ... ಆದರೆ ನಾನು ಏನು ಅಪರಾಧ ಮಾಡಿದ್ದೀನಿ ಅಂತ ಹೇಳ್ತೀರ?''

''ಇದು ಬಾರ್. ಪೊಲೀಸ್ ಲಾಕಪ್ ಇಲ್ಲ. ನೀನು ಯಾವ ತಪ್ಪನ್ನು ಮಾಡದಿದ್ದರೆ ಇಲ್ಲಿಗೆ ಬಂದು ನಿನ್ನನ್ನು ಕರ್ಕೊಂದು ಹೋಗ್ತೀವ? ವಿವರ ಎಲ್ಲಾ ಪೊಲೀಸ್ ಲಾಕಪ್‌ನಲ್ಲಿ ಹೇಳ್ತೀನಿ. ಮರುಪ್ರಶ್ನೆ ಮಾಡದೆ ಬಾ.''

ಮಹೇಂದ್ರ ಹೆದರಿದನು. ಬಿಲ್ ಪೇ ಮಾಡಿ ಅವರನ್ನು ಫಾಲೋ ಮಾಡಿದನು.

ಆ ಕ್ಯಾಬೀನ್ ಬೇರರ್‌ಗೆ ತುಂಬಾ ಖುಷಿ ಜೊತೆಗೆ ಆಶ್ಚರ್ಯ ಆಯಿತು.

ಕಾರಣ ಏನು?

ನೂರು ರೂಪಾಯಿ ಜಾಸ್ತಿ ಕೊಟ್ಟಿದ್ದಾನೆ.

ವಿಸ್ಕಿ, ನಾನ್‌ವೆಜ್ ಐಟಂಗಳನ್ನು ಪೂರ್ತಿ ತಿಂದಿರಲಿಲ್ಲ.

ಕ್ಯಾಬಿನ್ ಡೋರ್ ಲಾಕ್ ಆಯಿತು.

ಬೇರರ್ ವಿಸ್ಕಿಗೆ ಸೋಡಾ, ನೀರು ಬೆರೆಸಿ ಕುಡಿದು ಖಾಲಿ ಮಾಡಿದ ನಂತರ ಉಳಿದಿದ್ದ ಐಟಂಗಳನ್ನು ಗಬಗಬನೆ ತಿಂದು ಕಾಲಿ ಮಾಡಿದನು.

●●●

''ಮಾವ ಗುಡ್‌ನ್ಯೂಸ್.''

ಜೈರಾಜ್ ಚೇಂಬರ್‌ನೊಳಗೆ ಬರುತ್ತಾ ಈ ರೀತಿ ಹೇಳಿದ್ದನ್ನು ಕೇಳಿ ''ಏನದು'' ಎಂದು ಗಂಭೀರವಾಗಿ ಕೇಳಿದರು ರಾಜೇಂದ್ರ ಪಾಟೀಲ್.

''ಇನ್ಸ್‌ಪೆಕ್ಟರ್ ರಂಗನಾಥ್ ಫೋನ್ ಮಾಡಿದ್ರು.''

''ಹೌದಾ... ಏನಂತೆ?''

''ಮಹೇಂದ್ರನನ್ನು ಅರೆಸ್ಟ್ ಮಾಡಿ ವಿಚಾರಣೆ ಮಾಡುತ್ತಿದ್ದಾರೆ. ಮಾವ... ಈ ಲೋಫರ್ ನಮ್ಮ ಅನನ್ಯಳನ್ನು ಕಿಡ್ನಾಪ್ ಮಾಡಿ ತೊಂದರೆ ಕೊಟ್ಟಿರಬೇಕು. ಬೇಗ ವಿಚಾರಣೆ ಮುಗಿಸಿ ಅನನ್ಯಳನ್ನ ಅವನ ಬಂಧನದಿಂದ ಬಿಡಿಸಲು ಹೇಳಿ.''

ರಾಜೇಂದ್ರ ಪಟೇಲ್ ''ನಿನ್ನ ಕಾಳಜಿ, ಆತಂಕ ನನಗೆ ಅರ್ಥವಾಗುತ್ತಿದೆ. ನಿನಗೆ ಮೊದಲಿನಿಂದಲೂ ಅವಳ ಬಗ್ಗೆ ಪ್ರೀತಿ ಇದೆ. ನಾನು ನನ್ನ ತಂಗಿ ಅಂದರೆ ನಿನ್ನ ಅಮ್ಮನಿಗೆ ಪ್ರಾಮೀಸ್ ಮಾಡಿದ್ದೀನಿ. ಅನನ್ಯ ಒಪ್ಪಿಕೊಂಡರೆ ನಿಮ್ಮಿಬ್ಬರಿಗೆ ಮದುವೆ ಮಾಡಿಸುತ್ತೇನೆ ಅಂತ.''

ಜೈರಾಜ್ ಉತ್ಸಾಹದಿಂದ ''ಮಾವ... ಅನನ್ಯಳಿಗೆ ನನ್ನ ಬಗ್ಗೆ ಆಸಕ್ತಿ ಇದೆ. ಅವಳು ಖಂಡಿತಾ ಒಪ್ಪುತ್ತಾಳೆ'' ಎಂದನು.

ರಾಜೇಂದ್ರ ಪಟೇಲರು ಗಂಭೀರ ಸ್ವರದಲ್ಲಿ ''ಏ... ಏ ಜೈರಾಜ್... ಅನನ್ಯಳನ್ನು ಕಿಡ್ನಾಪ್ ಮಾಡಿ ಎರಡು ದಿನಗಳಾಗಿವೆ. ಒಂದು ವೇಳೆ ಆ ಮಹೇಂದ್ರ ಅವಳ ಮೇಲೆ ಅತ್ಯಾಚಾರ ಮಾಡಿದ್ದರೆ ಏನು ಮಾಡ್ತೀಯ? ಶೀಲ ಕಳೆದುಕೊಂಡಿದ್ದರೆ ಮದುವೆ ಆಗ್ತೀಯ?''

ಜೈರಾಜ್ ಭಾವುಕನಾದನು.

ಕಣ್ಣುಗಳು ಹನಿಗೂಡಿದವು.

''ಮಾವ... ನಾಲ್ಕು ವರ್ಷಗಳಿಂದ ಅವಳನ್ನು ಇಷ್ಟಪಟ್ಟಿದ್ದೀನಿ. ಆ ಲೋಫರ್, ಅಸಹಾಯಕ ಸ್ಥಿತಿಯಲ್ಲಿರುವ ಅವಳ ಮೇಲೆ ಅತ್ಯಾಚಾರ ಮಾಡಿದರೆ ಪಾಪ ಅವಳೇನು ಮಾಡುತ್ತಾಳೆ? ಅವಳು ಆ ಸ್ಥಿತಿಯಲ್ಲಿದ್ದರೂ ಮದುವೆ ಆಗುತ್ತೇನೆ. ಅವಳನ್ನು ಬದುಕಿನ ಉದ್ದಕ್ಕೂ ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಳ್ತೀನಿ.''

ರಾಜೇಂದ್ರ ಪಟೇಲ್ ಅವನ ಬೆನ್ನು ತಟ್ಟಿ ಧೈರ್ಯ ತುಂಬಿದರು.

ಫೋನ್ ಕಾಲ್ ಬಂದಿತು.

ಎಸ್.ಐ. ರಂಗನಾಥ್ ಮಾತಾಡುತ್ತಿದ್ದಾನೆ.

''ಸಾರ್... ಈ ಪ್ರಕರಣ ನಾವು ಊಹೆ ಮಾಡಿದ ರೀತಿ ಇಲ್ಲ.''

''ನೀವೇನು ಹೇಳುತ್ತಿದ್ದೀರ?''

ಪೊಲೀಸ್ ಅಧಿಕಾರಿ ವಿವರಿಸುತ್ತಿದ್ದಾನೆ.

●●●

ಪೊಲೀಸ್ ಲಾಕಪ್!

ವಿಚಾರಣೆ ನಡೆಯುತ್ತಿದೆ.

''ಅನನ್ಯ ಚೆಲ್ಲಾಟದ ಚೆಲುವೆ. ಅವಳಿಗೆ ಸೌಂದರ್ಯದ ಜೊತೆಗೆ ಶ್ರೀಮಂತಿಕೆ ಇದೆ. ಹಾಗಾಗಿ ಅವಳು ನಿನ್ನ ಜೊತೆ ಲವ್ ಗೇಮ್ ಆಡಿದ್ದಾಳೆ. ನಿನ್ನನ್ನು ಫೂಲ್ ಮಾಡಿ ಎಂಜಾಯ್ ಮಾಡಿದ್ದಾಳೆ. ನಿನಗೆ ಕೋಪ-ದ್ವೇಷ ಉಂಟಾಗಿದೆ. ನೀನು ಅವಳನ್ನ ಕಿಡ್ನಾಪ್ ಮಾಡಿ ರೇಪ್ ಮಾಡಿ ಸೇಡು ತೀರಿಸಿಕೊಂಡಿದ್ದೀಯ.''

ಮಹೇಂದ್ರ ''ಸಾರ್... ಅವಳ ಮೇಲೆ ಕೋಪ ಇತ್ತು. ಈಗಲೂ ಇದೆ. ಆದರೆ ಸೇಡು ತೀರಿಸಿಕೊಳ್ಳಲು ನನಗೆ ಅವಕಾಶ ಸಿಗಲಿಲ್ಲ.''

''ವಾಟ್ ಡು ಯೂ ಮೀನ್.''

''ಅವಳು ಕಾರಲ್ಲಿ ಒಬ್ಬಳೇ ಬರುತ್ತಿದ್ದ ಟೈಂ ನೋಡಿಕೊಂಡು ರಸ್ತೆಗೆ ಅಡ್ಡಲಾಗಿ ಕಲ್ಲುಗಳನ್ನು ಇಟ್ಟೆ. ಅವಳು ಬ್ರೇಕ್ ಹಾಕಿದಳು.''

ಇನ್ಸ್‌ಪೆಕ್ಟರ್ ''ಸೋ... ಆಗ ನೀನು ಅವಳನ್ನ ಕಿಡ್ನಾಪ್ ಮಾಡಿದೆ'' ಎಂದನು.

ಅವಳಿದ್ದ ಕಾರಿನ ಕಡೆ ನುಗ್ಗಿ ಅವಳ ಮೇಲೆ ಅಟ್ಯಾಕ್ ಮಾಡಿದೆ. ಆದರೆ ನನಗೆ ಗೊತ್ತಿಲ್ಲದಂತೆ ಮತ್ತೊಬ್ಬ ಬಂದು ನನ್ನ ಕತ್ತಿನ ಭಾಗಕ್ಕೆ ಹೊಡೆದು ಪ್ರಜ್ಞೆ ತಪ್ಪಿಸಿದ. ನಂತರ ಆಸ್ಪತ್ರೆಯಲ್ಲಿದ್ದೆ. ಎರಡು ದಿನಗಳ ಕಾಲ ಅಡ್ಮಿಟ್ ಆಗಿದ್ದೆ. ಬೇಕಾದರೆ ನೀವು ವಿಚಾರಣೆ ಮಾಡಿ ಸತ್ಯ ತಿಳಿಯಬಹುದು'' ಎಂದು ಹೇಳಿ ಆಸ್ಪತ್ರೆಯ ವಿವರ ನೀಡಿದನು.

ಪಿ.ಸಿ. ಯೊಬ್ಬನನ್ನು ವಿಚಾರಣೆಗಾಗಿ ಆಸ್ಪತ್ರೆಗೆ ಕಳಿಸಲಾಯಿತು.

ಪೊಲೀಸ್ ಅಧಿಕಾರಿ ರಂಗನಾಥ್ ''ಸಧ್ಯಕ್ಕೆ ನೀನು ಹೇಳಿದ್ದನ್ನು ನಂಬುತ್ತೇನೆ. ನಿನ್ನನ್ನು ಪ್ರಜ್ಞೆ ತಪ್ಪಿಸಿದವರು ಯಾರು? ನೀನು ಅವರನ್ನು ನೋಡಿದ್ದೀಯ?''

''ನೋವಿನಿಂದ ತತ್ತರಿಸುತ್ತಾ ಅವರ ಕಡೆ ತಿರುಗಿದೆ. ಪ್ರಜ್ಞೆ ತಪ್ಪುವ ಮೊದಲು ಅವರನ್ನು ಗುರುತಿಸಿದೆ. ಅವರು ನನಗೆ ತುಂಬಾ ಚಿರಪರಿಚಿತರು.''

''ಯಾರು... ಯಾರವರು?''

''ಪ್ರೊಫೆಸರ್ ಬಾದಾಮಿಗೌಡ.''

●●●

''ವಾಟ್... ಪ್ರೊಫೆಸರ್ ಬಾದಾಮಿಗೌಡನಾ'' ಎಂದು ಉದ್ಗಾರ ತೆಗೆದರು ರಾಜೇಂದ್ರ ಪಟೇಲ್. ಪೊಲೀಸ್ ಅಧಿಕಾರಿ ರಂಗನಾಥ್ ಫೋನ್ ಮಾಡಿ, ಕಿಡ್ನಾಪಿಂಗ್ ಪ್ರಕರಣ ಬೇರೆ ತಿರುವನ್ನು ಪಡೆದಿರೋದನ್ನು ಕಂಡು ಆಶ್ಚರ್ಯಗೊಂಡಿದ್ದರು.

ಅವರಿಗೆ ನಂಬಿಕೆ ಬರುತ್ತಿಲ್ಲ. ಪ್ರೊಫೆಸರ್ ಬಾದಾಮಿಗೌಡ ಇವರ ಕುಟುಂಬದ ಆತ್ಮೀಯ ವ್ಯಕ್ತಿ.

ಅನನ್ಯ ಇವರ ಸ್ಟುಡೆಂಟ್!

ಪ್ರೊಫೆಸರ್ ರಾಜೇಂದ್ರ ಪಟೇಲರ ಬಂಗಲೆಗೆ ಆಗಾಗ ಬರುತ್ತಿದ್ದರು. ಕೆಲವು ವಿಶೇಷ ಕಾರ್ಯಕ್ರಮಗಳಲ್ಲಿ ಪಟೇಲರು ಈ ಪ್ರೊಫೆಸರ್‌ಗೆ ಫೋನ್ ಮಾಡಿ ಕರೆಸಿಕೊಳ್ಳುತ್ತಿದ್ದರು. ಅಂತಹ ವ್ಯಕ್ತಿ ಅನನ್ಯಳನ್ನು ಕಿಡ್ನಾಪ್ ಮಾಡಿದ್ದಾರ? ಆದರೆ ಯಾಕೆ? ಕಾರಣ ಏನು?

ಅಲ್ಲೇ ಇದ್ದ ಜೈರಾಜ್ 'ಮಾವ... ಆ ಪ್ರೊಫೆಸರ್ ಚಪಲಗಾರ. ನಲವತ್ತರ ಪ್ರಾಯ ಆಗಿದ್ದರೂ ಇಪ್ಪತ್ತರ ಪ್ರಾಯದ ಚೆಲುವೆಯರ ಬಗ್ಗೆ ಚಪಲ, ಆಸೆ ಜಾಸ್ತಿ. ಅನನ್ಯ ಈ ಕುಟುಂಬದಲ್ಲಿ ಒಬ್ಬರು ಅಂತ ಅವರ ಜೊತೆ ಸಲಿಗೆಯಿಂದ ಇದ್ದಾಳೆ.''

☞ 14

13 ☞

ರಾಜೇಂದ್ರ ಪಟೇಲ್ ''ಅಂದರೆ ಅದನ್ನೇ ತಪ್ಪು ತಿಳಿದಿದ್ದಾರ?''

''ಅಷ್ಟೇ ಅಲ್ಲ... ಅನನ್ಯ ಅವರನ್ನೂ ಸಹ ಪೂಲ್ ಮಾಡಿದ್ದಾಳೆ ಅಂತ ಅನಿಸುತ್ತಿದೆ.''

ಪಟೇಲರ ಬೇಸರ, ಕೋಪದಿಂದ ''ಇಂತಹ ಹುಚ್ಚಾಟಗಳಿಂದ ಅವಳು ತನ್ನ ಬದುಕನ್ನು ತಾನೇ ಹಾಳು ಮಾಡಿಕೊಂಡಿದ್ದಾಳೆ'' ಎಂದನು.

ಜೈರಾಜ್ ''ಮಾವ... ಅವಳು ಹೇಗೆ ಇರಲಿ, ಅವಳಿಗೇನೇ ಆಗಿರಲಿ ನಾನವಳನ್ನು ಮದುವೆ ಆಗುತ್ತೇನೆ'' ಎಂದನು.

ಪಟೇಲರು ಅವನ ಕೈ ಅದುಮುತ್ತಾ ''ಬೇಗ ಅವಳನ್ನು ಪತ್ತೆ ಮಾಡಿ ಮನೆಗೆ ಕರ್ಕೊಂಡು ಬರಬೇಕು. ಆಮೇಲೆ ಬೇಗ ಮದುವೆ ನಿನ್ನ ಜೊತೆ ಮಾಡಿದರೆ ನನ್ನ ಗೌರವ, ಮರ್ಯಾದೆ ಉಳಿಯುತ್ತೆ'' ಎಂದರು.

ಜೈರಾಜ್ ಭಾವುಕನಾಗಿ ''ಅನನ್ಯ ನನ್ನ ಉಸಿರು, ನನ್ನ ಪ್ರಾಣ'' ಎಂದನು.

ರಾಜೇಂದ್ರ ಪಟೇಲರು ಇನ್ಸ್‌ಪೆಕ್ಟರ್‌ಗೆ ಫೋನ್ ಮಾಡಿ ''ಗಲಾಟೆಗೆ ಅವಕಾಶ ಆಗದ ರೀತಿ ಪ್ರೊಫೆಸರ್‌ನ ಅರೆಸ್ಟ್ ಮಾಡಿ ವಿಚಾರಣೆ ಮಾಡಿ'' ಎಂದರು.

●●●

ಪ್ರೊಫೆಸರ್ ಬಾದಾಮಿಗೌಡ ಅವರನ್ನು ಅರೆಸ್ಟ್ ಮಾಡಿ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬರಲಿಲ್ಲ. ಇದು ಬಹಿರಂಗಗೊಂಡರೆ ಕಾಲೇಜಿನ ವಿದ್ಯಾರ್ಥಿಗಳು ಗಲಾಟೆ ಮಾಡುತ್ತಾರೆ ಮತ್ತು ಅನನ್ಯಳ ಬಗ್ಗೆ ಅಪಪ್ರಚಾರ ಆಗುತ್ತದೆ ಎಂಬ ಕಾರಣದಿಂದ ನಾರ್ಮಲ್ ಡ್ರೆಸ್‌ನಲ್ಲಿ ಬಂದಿದ್ದಾನೆ ಪೊಲೀಸ್ ಅಧಿಕಾರಿ ರಂಗನಾಥ್!

''ಯಾರು ನೀವು? ಪರ್ಮಿಷನ್ ಇಲ್ಲದೆ ಒಳಗೆ ಹೇಗೆ ಬಂದ್ರಿ?''

ರಂಗನಾಥ್ ಐಡೆಂಟಿಟಿ ಕಾರ್ಡ್ ತೆಗೆದು ತೋರಿಸಿದಾಗ ಪ್ರೊಫೆಸರ್ ಗಾಬರಿಯಾದರು. ಅವರ ಎದುರಿಗೆ, ಸಿಂಗಲ್ ಸೋಫಾ ಎಳೆದುಕೊಂಡು ಕುಳಿತನು.

''ಈ ವಯಸ್ಸಿನಲ್ಲಿ ಗೌರವಾನ್ವಿತ ಕೆಲಸದಲ್ಲಿರೋ ನೀವು ಇಂತಹ ಕಚಡಾ ಕೆಲಸ ಮಾಡ್ತೀರ ಅಂತ ನಾನು ಅಂದುಕೊಂಡಿರಲಿಲ್ಲ.''

ಅವರು ಗಾಬರಿಯಾದರು.

''ನಾನು... ನಾನೇನು ಮಾಡಿದೆ?''

ಇನ್ಸ್‌ಪೆಕ್ಟರ್ ಕೋಪದಿಂದ ''ಅದನ್ನ ನಾನೇ ಹೇಳ್ಬೇಕಾ. ನೀವೆಂತಹ ಹೊಲಸು ಕೆಲಸ ಮಾಡಿದ್ದೀರ ಅಂತ ಗೊತ್ತಿಲ್ವ? ಸಗಣಿ ತಿನ್ನುವ ಕೆಲಸ ಮಾಡಿದ್ದರೂ ಅಮಾಯಕರ ರೀತಿ ನನ್ನ ಪ್ರಶ್ನೆ ಮಾಡುತ್ತಿದ್ದೀರ. ಡೈರೆಕ್ಟ್ ಆಗಿ ಕೇಳ್ತೀನಿ ಉತ್ತರ ಕೊಡಿ.''

ಪ್ರೊಫೆಸರ್ ಚಡಪಡಿಸಿದರು.

''ಅನನ್ಯಳನ್ನ ಕಿಡ್ನಾಪ್ ಮಾಡಿರೋದು ನಿಜ ತಾನೆ?''

ಅವರು ನಡುಗಿದರು.

''ಅವಳನ್ನು ಏನು ಮಾಡಿದ್ದೀರ? ರೇಪ್ ಮಾಡಿ ಪ್ರಾಣ ತೆಗೆದಿದ್ದೀರ?''

ಪ್ರೊಫೆಸರ್ ಗಾಬರಿ, ಆತುರ ಮತ್ತು ಒಂದು ರೀತಿ ಉದ್ವೇಗದಿಂದ ''ನೀವು... ನೀವು ಏನು ಹೇಳ್ತಾ ಇದ್ದೀರ?''

''ನೀವು ಮಾಡಿರೋದನ್ನ.''

''ಅರೆ ಏನೂ ಅಂತ.''

''ಪ್ರೊಫೆಸರ್ ಅಮಾಯಕತೆ ನಾಟಕ ಆಡ್ಬೇಡಿ. ಮಹೇಂದ್ರ ಎಲ್ಲಾ ಹೇಳಿದ್ದಾನೆ.''

ಮುಖ ಬಿಳುಚಿಕೊಳ್ಳುತ್ತಿದೆ.

''ಅವನಿಗೂ ಅವಳ ಮೇಲೆ ಕೋಪ, ದ್ವೇಷ ಇತ್ತು. ಅವಳನ್ನು ಕಿಡ್ನಾಪ್ ಮಾಡಲು ಪ್ರಯತ್ನ ಮಾಡುತ್ತಿರುವಾಗ ನೀವು ವಿಲನ್ ರೀತಿ ಅವನ ಪ್ರಜ್ಞೆ ತಪ್ಪಿಸಿ ಅವಳನ್ನು ಕಿಡ್ನಾಪ್ ಮಾಡಿದ್ದೀರ.''

ಅವರು ತಡಬಡಿಸುತ್ತಿದ್ದಾರೆ.

''ಅನನ್ಯಳ ಕುಟುಂಬದಲ್ಲಿ ನೀವು ಒಬ್ಬರಾಗಿ ಆಗಾಗ ಆ ಬಂಗಲೆಗೆ ಹೋಗುತ್ತಿದ್ದದ್ದು ನಿಜ. ಚೆಲುವೆ ಅನನ್ಯ ನಿಮ್ಮ ಸ್ಟುಡೆಂಟ್. ಅವಳ ಮೋಹಕ ಸೌಂದರ್ಯದಿಂದ ಚಂಚಲ ಗೊಂಡಿದ್ದು ನಿಜ.''

''ಅದು... ಅದು... ನಾನು...''

''ಚೆಲುವೆಯರ ಚಪಲಗಾರ. ಅವಳು ನಿಮ್ಮ ವೀಕ್‌ನೆಸ್ ತಿಳಿದುಕೊಂಡು ಆಟ ಆಡಿದ್ಲು. ನಿಮ್ಮ ಜೊತೆ ಸಲಿಗೆ ಬೆಳೆಸಿದ್ಲು, ನಿಮ್ಮಲ್ಲಿ ಆಸೆ ಪ್ರಚೋದನೆ ಆಗುವಂತ ಮೋಹಕ ಆಟ ಆಡಿ ವಿಜೃಂಭಿಸಿದಳು. ನಿಮ್ಮನ್ನು ಪೂಲ್ ಮಾಡಿದ್ಲು. ಇದರಿಂದ ನಿರಾಸೆಯೊಂದಿಗೆ ಕೋಪ-ದ್ವೇಷ ಉಂಟಾಯಿತು. ಅವಳ ಪ್ರತಿನಿತ್ಯದ ಚಟುವಟಿಕೆಗಳ ಬಗ್ಗೆ ನಿಮಗೆ ತಿಳಿದಿತ್ತು. ನೀವು... ನೀವು ಅವಳನ್ನ ಫಾಲೋ ಮಾಡಿದ್ರಿ. ಮಹೇಂದ್ರನ ಪ್ರಜ್ಞೆ ತಪ್ಪಿಸಿ ಕಿಡ್ನಾಪ್ ಮಾಡಿದ್ದು ನಿಜ ತಾನೆ?''

ಪ್ರೊಫೆಸರ್ ಗಾಬರಿಯಿಂದಲೇ ಈಗ ಪೊಲೀಸ್ ಅಧಿಕಾರಿಯ ಕಡೆ ನೋಡಿದರು.

ರಂಗನಾಥ್ ''ಒಂದೇ ವಾಕ್ಯದಲ್ಲಿ ಸತ್ಯ ಹೇಳಿ ಬಾದಾಮಿಗೌಡ. ಅನನ್ಯ ಬದುಕಿದ್ದಾಳ...? ಈ ಪ್ರಶ್ನೆಗೆ ಉತ್ತರ ಕೊಡಬೇಕು'' ಎಂದನು.

ಅವರು ಕಂಪಿಸುವ ಧ್ವನಿಯಲ್ಲಿ ''ನನಗೆ ಗೊತ್ತಿಲ್ಲ'' ಎಂದರು.

ಕೋಪ ಭುಗಿಲೆದ್ದಿತು.

ಮುಷ್ಠಿ ಬಿಗಿದು ಕೈ ಮೇಲೆದ್ದಿತು. ಆದರೆ ರಾಜೇಂದ್ರ ಪಟೇಲರ ಎಚ್ಚರಿಕೆಯ ಮತ್ತು ನೆನಪಾಗಿ ಕಂಟ್ರೋಲ್ ಮಾಡಿಕೊಂಡು ಗಡುಸಾಗಿ ಕೇಳಿದನು.

''ಕಿಡ್ನಾಪ್ ಮಾಡಿರೋ ನಿಮಗೆ ಗೊತ್ತಿಲ್ವ? ನಿಜ ಬಾಯಿ ಬಿಡದಿದ್ದರೆ ರಾಜೇಂದ್ರ ಪಟೇಲರನ್ನ ಕರೆಸಬೇಕಾಗುತ್ತದೆ.''

''ಮತ್ತಷ್ಟು ಭಯವಾಯಿತು.''

''ಕಿಡ್ನಾಪ್ ಮಾಡಿದ್ದು ರೇಪ್ ಮಾಡಿ ಸೇಡು ತೀರಿಸಿಕೊಳ್ಳಲು ತಾನೆ?''

ಅವರು ತಲೆಯಾಡಿಸಿದರು.

''ಅವಳು ಬದುಕಿದ್ದಾಳಾ? ಬದುಕಿದ್ದರೆ ಎಲ್ಲಿ ಬಂಧಿಸಿ ಇಟ್ಟಿದ್ದೀರ?''

ಪ್ರೊಫೆಸರ್ ಉಸಿರು ಬಿಡುತ್ತಾ ''ನಾನು ಅವಳನ್ನ ಕಿಡ್ನಾಪ್ ಮಾಡಿ ಅಲಕಾಪುರದಲ್ಲಿರೋ ನನ್ನ ಫಾರಂ ಹೌಸ್‌ನಲ್ಲಿ ಬಂಧಿಸಿದ್ದೆ. ಆದರೆ ರೇಪ್ ಮಾಡಲಿಲ್ಲ. ಯಾಕೆ ಅಂದರೆ ನಾನು ಮಹೇಂದ್ರನನ್ನು ಯಾಮಾರಿಸಿ ಅವಳನ್ನ ಅಪಹರಿಸಿದಂತೆ ಮತ್ತೊಬ್ಬ ಅದೇ ಕೆಲಸ ಮಾಡಿದ ಇನ್ಸ್‌ಪೆಕ್ಟರ್.''

''ವಾಟ್... ನೀವು ಏನು ಹೇಳುತ್ತಿದ್ದೀರ?''

''ಸತ್ಯವನ್ನು ಇನ್ಸ್‌ಪೆಕ್ಟರ್ ಫಾರಂ ಹೌಸ್‌ನಲ್ಲಿ ಅವಳನ್ನು ಬಂಧಿಸಿದ್ದೆ. ಯಾರೋ ಒಬ್ಬ ಬಂದು ಕ್ಲೋರೋ ಸ್ಪ್ರೇಯರ್ ಸ್ಪ್ರೇ ಮಾಡಿ ನನ್ನ ಪ್ರಜ್ಞೆ ತಪ್ಪಿಸಿದ. ಎಚ್ಚರವಾದಾಗ ಅವಳು ಅಲ್ಲಿ ಇರಲಿಲ್ಲ.''

ಆ ಸೆಕೆಂಡ್ ಕಿಡ್ನಾಪರ್ ಯಾರು?''

''ಅವನ್ಯಾರು ಅಂತ ನನಗೆ ಗೊತ್ತಿಲ್ಲ. ಅವನು ತನ್ನ ಗುರುತು ಸಿಗಬಾರದು ಅಂತ ಗೆಟಪ್ ಬದಲಿಸಿಕೊಂಡಿದ್ದ.''

ಕೆಲವು ಕ್ಷಣಗಳು ಆಲೋಚನೆ ಮಾಡಿದ ನಂತರ ''ನೀವು ಫಾರಂ ಹೌಸ್‌ಗೆ ಆ ಘಟನೆ ನಡೆದ ಮೇಲೆ ಬೀಗ ಹಾಕಿಕೊಂಡು ಬಂದಿದ್ದೀರ ಅಲ್ವ'' ಎಂದು ಕೇಳಿದನು.

''ಹೌದು ಸಾರ್.''

''ಕಮಾನ್... ನಾನೊಂದು ಸಲ ನಿಮ್ಮ ಫಾರಂ ಹೌಸ್ ನೋಡಬೇಕು'' ಎಂದು ಅವರನ್ನು ಅಲ್ಲಿಂದ ಹೊರಡಿಸಿಕೊಂಡು ಹೊರಟನು.

ಸುಮಾರು ಒಂದು ಗಂಟೆಯ ಕಾಲ ಪರಿಶೀಲನೆ ನಡೆಸಿದ ನಂತರ ಪ್ರೊಫೆಸರ್ ಅವರನ್ನು ಕರೆದುಕೊಂಡು ಹೊರಟನು.

●●●

ರಾಜೇಂದ್ರ ಪಟೇಲ್ ಅವರು ಸಂತೋಷ, ಆಶ್ಚರ್ಯದಿಂದ ''ವಾಟ್... ಅನನ್ಯಳ ಕಿಡ್ನಾಪರ್ ಸಿಕ್ಕಿದ್ನ? ಎಲ್ಲಿ... ಎಲ್ಲಿ ನನ್ನ ಮಗಳೆಲ್ಲಿ?''

''ಅದನ್ನ ಆ ಕಿಡ್ನಾಪರ್ ಹೇಳಿದ್ದಾನೆ.''

''ಕಿಡ್ನಾಪರ್ ಎಲ್ಲಿ?''

''ನೀವು ಈಗಲೇ ಚಂದ್ರ ಲೇಔಟ್‌ನಲ್ಲಿರೋ ನಿಮ್ಮ ಫಾರಂ ಹೌಸ್‌ಗೆ ಬನ್ನಿ.''

''ಅರೆ... ಅಲ್ಲಿಗ್ಯಾಕೆ?''

''ಅನನ್ಯಳ ಕಿಡ್ನಾಪರ್ ಅಲ್ಲಿದ್ದಾನೆ.''

●●●

'ರಪ್ಪನೆ ಅವನ ಕೆನ್ನೆಯ ಮೇಲೆ ಹೊಡೆದರು ರಾಜೇಂದ್ರ ಪಟೇಲ್! ಕೋಪ, ಆವೇಶ ಕಡಿಮೆ ಆಗಲಿಲ್ಲ. ಹಾಗಾಗಿ ಅವನ ತಲೆ ಕೂದಲು ಹಿಡಿದು ಎಳೆದಾಡುತ್ತಾ ರಪರಪನೆ ಹೊಡೆದರು. ಪೊಲೀಸ್ ಅಧಿಕಾರಿ ತನ್ನವರ ಸಹಾಯದಿಂದ ಪಟೇಲರನ್ನು ಕಂಟ್ರೋಲ್ ಮಾಡಿದನು.

ಕಿಡ್ನಾಪರ್ ಜೈರಾಜ್...!

ಪಟೇಲರ ತಂಗಿಯ ಮಗ.

ಅವಳು... ಅಂದರೆ ಅನನ್ಯಳನ್ನು ಫಾರಂ ಹೌಸ್‌ನ ಹಿಂಭಾಗದಲ್ಲಿರುವ ಗೆಸ್ಟ್ ರೂಮಿನಲ್ಲಿ ಬಂಧಿಸಿದ್ದನು. ಅವಳ ಮೇಲೆ ಆಗಾಗ ಅತ್ಯಾಚಾರ ಮಾಡುತ್ತಿದ್ದನು ಮತ್ತು ಅವಳು ಗಲಾಟೆ ಮಾಡಬಾರದು ಅಂತ ವಿಸ್ಕಿ, ರಮ್ ಕುಡಿಸುತ್ತಿದ್ದನು.

ಕಾರಣ ಏನು?

ಕೋಟಿಗಳ ಆಸ್ತಿ ಇರುವ ಸೋದರಮಾವನ ಮಗಳು ಅನನ್ಯಳನ್ನು ವಿವಾಹವಾದರೆ ತನಗೆ ಶ್ರೀಮಂತಿಕೆ ಬರುತ್ತದೆ. ಅವಳನ್ನು ಒಲಿಸಿಕೊಳ್ಳಲು ಟ್ರೈ ಮಾಡಿ ಪೂಲ್ ಆಗಿದ್ದನು. ಅವಳ ಶೀಲ ಹಾಳು ಮಾಡಿ ವೀಡಿಯೋ ಕವರೇಜ್ ಮಾಡಿದ್ದನು. ಅವಳನ್ನು ಬ್ಲಾಕ್‌ಮೇಲ್ ಮಾಡಿ ಮದುವೆಗೆ ಒಪ್ಪಿಸಬೇಕು ಎಂದು ಪ್ಲಾನ್ ಮಾಡಿದ್ದನು.

ಪ್ಲಾನ್ ಪ್ಲಾಪ್ ಆಯಿತು!

ಅವನ ಹತ್ತಿರ ಇದ್ದ ವೀಡಿಯೋ ಕ್ಲಿಪ್ ಅನ್ನು ವಶಪಡಿಸಿಕೊಂಡು ಜೈರಾಜ್ ಈ ರಾಜ್ಯ ಬಿಟ್ಟು ಹೋಗುವಂತೆ ಮಾಡಿದರು. ಈ ಘಟನೆ ನಡೆದ ಮೇಲೆ ಅನನ್ಯ ಸೈಲೆಂಟ್ ಆಗಿದ್ದಾಳೆ. ☯

# ಎಣ್ಣೆಗೆ ಪಿಂಚಣಿ ಹಣ ಕೊಡದ್ದಕ್ಕೆ ಹೆತ್ತ ತಾಯಿ ಕೊಂದ ಮಗ!

ತನಗೆ ಮದ್ಯ ಸೇವನೆಗೆ ಪಿಂಚಣಿ ಹಣ ಕೊಡಲು ನಿರಾಕರಿಸಿದ ಕಾರಣಕ್ಕೆ ತಾಯಿ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಕೊಂದು ಪರಾರಿಯಾಗಿದ್ದ ಕಿಡಿಗೇಡಿ ಮಗನೊಬ್ಬನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಕೊಲೆಯಾದ ಶಾಂತಾ ಬಾಯಿ

ತನಗೆ ಮದ್ಯ ಸೇವನೆಗೆ ಪಿಂಚಣಿ ಹಣ ಕೊಡಲು ನಿರಾಕರಿಸಿದ ಕಾರಣಕ್ಕೆ ತಾಯಿ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಕೊಂದು ಪರಾರಿಯಾಗಿದ್ದ ಕಿಡಿಗೇಡಿ ಮಗನೊಬ್ಬನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮುನೇಶ್ವರ ಬಡಾವಣೆ ನಿವಾಸಿ ಮಹೇಂದ್ರ ಸಿಂಗ್ ಬಂಧಿತನಾಗಿದ್ದು, ಮನೆಯಲ್ಲಿ ಗುರುವಾರ ರಾತ್ರಿ ತನ್ನ ತಾಯಿ ಶಾಂತಾ ಬಾಯಿ (80) ಅವರ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿ ಆರೋಪಿ ಕಾಲ್ಕಿತ್ತಿದ್ದ. ಈ ಬಗ್ಗೆ ಮೃತರ ಪುತ್ರಿ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲೂಕಿನ ಮೃತ ಶಾಂತಾ ಬಾಯಿ ಅವರು, ಹಲವು ವರ್ಷಗಳಿಂದ ಬಾಗಲಗುಂಟೆ ಸಮೀಪದ ಮುನೇಶ್ವರ ಬಡಾವಣೆಯಲ್ಲಿ ಕುಟುಂಬದ ಜತೆ ನೆಲೆಸಿದ್ದರು. ವಿಪರೀತ ಮದ್ಯ ವ್ಯಸನಿಯಾಗಿದ್ದ ಆತ, ಯಾವುದೇ ಕೆಲಸಕ್ಕೆ ಹೋಗದೆ ಅಲೆಯುತ್ತಿದ್ದ. ಈ ಮೊದಲು ಖಾಸಗಿ ಆಸ್ಪತ್ರೆಯಲ್ಲಿ ಮಹೇಂದ್ರ ಡಿ-ದರ್ಜೆ ನೌಕರನಾಗಿದ್ದ ಇನ್ನು ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಏಳು ವರ್ಷಗಳ ಹಿಂದೆ ಆತನಿಂದ ಪತ್ನಿ ಹಾಗೂ ಮಗ ದೂರವಾಗಿದ್ದರು. ಚನ್ನಪಟ್ಟಣ ತಾಲೂಕು ಕಚೇರಿಯಲ್ಲಿ ಡಿ ಗ್ರೂಪ್ ನೌಕರಾಗಿದ್ದ ತಂದೆ ನಿಧನದ ಬಳಿಕ ಆತನ ತಾಯಿ ಶಾಂತಾ ಬಾಯಿ ಅವರಿಗೆ ಮಾಸಿಕ 13 ಸಾವಿರ ಪಿಂಚಣಿ ಬರುತ್ತಿತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

**ಪ್ರತಿ ತಿಂಗಳು ಹಣಕ್ಕೆ ತಾಯಿಗೆ ಕಿರುಕುಳ**

ಪ್ರತಿ ತಿಂಗಳು ಪಿಂಚಣಿ ಹಣ ಕೊಡುವಂತೆ ತಾಯಿಯನ್ನು ಆತ ಪೀಡಿಸುತ್ತಿದ್ದ. ಈ ಹಣ ಕೊಡಲು ನಿರಾಕರಿಸಿದಾಗ ತಾಯಿ ಮೇಲೆ ಮಹೇಂದ್ರ ಸಿಂಗ್ ಗಲಾಟೆ ಮಾಡುತ್ತಿದ್ದ. ಅಂತೆಯೇ ಗುರುವಾರ ರಾತ್ರಿ ಮದ್ಯ ಸೇವನೆ ಹಣಕ್ಕಾಗಿ ತಾಯಿ ಬಳಿ



ಆರೋಪಿ ಮಹೇಂದ್ರ ಸಿಂಗ್

ಆತ ಒತ್ತಾಯಿಸಿದ್ದಾನೆ. ಆದರೆ ಹಣ ಕೊಡಲು ಅವರು ಒಪ್ಪದೆ ಹೋದಾಗ ಗಲಾಟೆ ಮಾಡಿ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದ, ತಲೆಗೆ ತೀವ್ರ ಪೆಟ್ಟು ಬಿದ್ದ ಕಾರಣ ಶಾಂತಾ ಬಾಯಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಚೀರಾಟದ ಸದ್ದು ಕೇಳಿ ಸ್ಥಳೀಯರು ಜಮಾಯಿಸಿದ್ದಾರೆ. ಆದರೆ ಅಷ್ಟರಲ್ಲಿ ಆರೋಪಿ ಪರಾರಿಯಾಗಿದ್ದ ಬಳಿಕ ವಿಷಯ ತಿಳಿದು ಪೊಲೀಸರಿಗೆ ಮೃತರ ಮಗಳು ದೂರು ನೀಡಿದ್ದಾರೆ. ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ☯

# ರಜನಿಕಾಂತ್‌ರ 'ಜೈಲರ್ 2' ಚಿತ್ರದಲ್ಲೂ ನಟಿಸಲಿದ್ದಾರೆ ನಟ ಶಿವರಾಜ್‌ಕುಮಾರ್!





ನಟ ಶಿವರಾಜ್‌ಕುಮಾರ್ ಸದ್ಯ ತಮ್ಮ ಮುಂಬರುವ ಅರ್ಜುನ್ ಜನ್ಯ ನಿರ್ದೇಶನದ '45' ಪ್ರಚಾರದಲ್ಲಿ ನಿರತರಾಗಿದ್ದಾರೆ. ಹೈದರಾಬಾದ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ, ನೆಲ್ಸನ್ ನಿರ್ದೇಶನದ ರಜಿನಿಕಾಂತ್ ನಟನೆಯ 'ಜೈಲರ್ 2' ಚಿತ್ರದ ಭಾಗವಾಗಿರುವುದಾಗಿ ತಿಳಿಸಿದ್ದಾರೆ.

'ಜೈಲರ್ 2' ಚಿತ್ರದಲ್ಲಿ ನೀವು ಕಾಣಿಸಿಕೊಳ್ಳುತ್ತೀರಾ ಎಂದು ವರದಿಗಾರರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿವಣ್ಣ, 'ಹೌದು. ನಾನು ಜೈಲರ್ 2 ಚಿತ್ರದ ಭಾಗವಾಗಿದ್ದೇನೆ ಎಂದು ನೆಲ್ಸನ್ ನನಗೆ ಹೇಳಿದ್ದಾರೆ. ಈಗಾಗಲೇ ಚಿತ್ರದ ಚಿತ್ರೀಕರಣ ಪ್ರಾರಂಭಿಸಲಾಗಿದ್ದು, ನಾನು ಇನ್ನೂ ಚಿತ್ರೀಕರಣದಲ್ಲಿ ಭಾಗಿಯಾಗಿಲ್ಲ. ಜೈಲರ್ ಚಿತ್ರದಲ್ಲಿನ ತಮ್ಮ ಪಾತ್ರಕ್ಕೆ ಇಷ್ಟೊಂದು ಮಹತ್ವ ಸಿಗುತ್ತದೆ ಎಂದು ನಾನು ನಿರೀಕ್ಷಿಸಿರಲಿಲ್ಲ ಎಂದರು.

'ನಾನು ಜೈಲರ್ ಸಿನಿಮಾ ಮಾಡೋಕೆ ಕಾರಣ ರಜನಿಕಾಂತ್ ಸರ್. ಅವರು ನನಗೆ ತಂದೆಯಂತೆ ಮತ್ತು ನಾನು ನೆಲ್ಸನ್‌ಗೆ ಹೇಳಿದ್ದೆ, ಈ ಸಿನಿಮಾದಲ್ಲಿ ನಟಿಸಲು ನನಗೆ ಕಥೆಯ ಅವಶ್ಯಕತೆಯೂ ಇಲ್ಲ ಅಂತ. ರಜನಿ ಸರ್ ಅವರ ಸಿನಿಮಾದಲ್ಲಿ ಒಂದು ಕ್ಷಣ ಕಾಣಿಸಿಕೊಳ್ಳುವ ಪಾತ್ರವಾದರೂ ನಾನು ನಟಿಸಲು ಸಿದ್ಧನಿದ್ದೆ. ಈಗಲೂ ಸಹ, ಜೈಲರ್ ಸಿನಿಮಾದ ನನ್ನ ಪಾತ್ರಕ್ಕೆ ಅಷ್ಟೊಂದು ಮೆಚ್ಚುಗೆ ಏಕೆ ಸಿಕ್ಕಿತು ಎಂದು ನನಗೆ ಅರ್ಥವಾಗುತ್ತಿಲ್ಲ. 'ಜೈಲರ್ ಸಿನಿಮಾದಲ್ಲಿ ನೀನು ಏನು ಮಾಡಿದ್ದೀಯ? ಸಿಗಾರ್ ಹಚ್ಚಿ ಟಿಶ್ಯೂ ಬಾಕ್ಸ್ ತಳ್ಳಿದ್ದೀಯ ಅಷ್ಟೆ ಎಂದು ನನ್ನ ಹೆಂಡತಿ ಕೇಳುತ್ತಾಳೆ. ನನ್ನನ್ನು ಅತ್ಯುತ್ತಮವಾಗಿ ತೋರಿಸಿದ್ದಕ್ಕಾಗಿ ಛಾಯಾಗ್ರಾಹಕರಿಗೆ ಮತ್ತು ಹಿನ್ನೆಲೆ ಸಂಗೀತಕ್ಕಾಗಿ ಅನಿರುದ್ಧ್‌ಗೆ ನಾನು ಕೃತಜ್ಞನಾಗಿರುತ್ತೇನೆ' ಎಂದರು.

ಜೈಲರ್ 2 ನಲ್ಲಿ ನಂದಮೂರಿ ಬಾಲಕೃಷ್ಣ ಅವರೊಂದಿಗೆ ತೆರೆ ಹಂಚಿಕೊಳ್ಳುತ್ತೀರಾ ಎಂದು ಮತ್ತೊಬ್ಬ ವರದಿಗಾರ ಕೇಳಿದ್ದಕ್ಕೆ, 'ಚಿತ್ರದಲ್ಲಿ ಬಾಲಕೃಷ್ಣ ಸರ್ ಇದ್ದಾರೆಯೇ ಎಂದು ನನಗೆ ಖಚಿತವಿಲ್ಲ. ನಾನು ನನ್ನ ಪಾತ್ರವನ್ನು ಪುನರಾವರ್ತಿಸುತ್ತೇನೆ ಎಂದು ನೆಲ್ಸನ್ ನನಗೆ ತಿಳಿಸಿದರು. ಆದರೆ, ನಾನು ಬಾಲಕೃಷ್ಣ ಸರ್ ಜೊತೆಗೆ ನಟಿಸಲು ಇಷ್ಟಪಡುತ್ತೇನೆ. ಸರ್ ಮತ್ತು ನಾನು ಎಂದಿಗೂ ತೆರೆಯ ಮೇಲೆ ಒಟ್ಟಿಗೆ ಬಂದಿಲ್ಲ, ಆದರೆ, ನಾವು ತೆರೆಯ ಹಿಂದೆ ತುಂಬಾ ಹತ್ತಿರವಾಗಿದ್ದೇವೆ. ವಾಸ್ತವವಾಗಿ, ಅವರು ನನ್ನ ತಂದೆಯನ್ನು 'ಚಿಕ್ಕಪ್ಪ' ಎಂದು ಕರೆಯುತ್ತಿದ್ದರು. ಅವರು ನಮ್ಮ ಕುಟುಂಬಕ್ಕೆ ತುಂಬಾ ಆಪ್ತರು ಮತ್ತು ಅವರೊಂದಿಗೆ ಕೆಲಸ ಮಾಡುವುದು ಸಂತೋಷವಾಗುತ್ತದೆ' ಎಂದರು.

ಜೈಲರ್ 2 ಚಿತ್ರದ ಚಿತ್ರೀಕರಣ ಸುಮಾರು ಒಂದು ತಿಂಗಳ ಹಿಂದೆ ಚೆನ್ನೈನಲ್ಲಿ ಪ್ರಾರಂಭಗೊಂಡಿತು. ಜೈಲರ್ ಚಿತ್ರದಲ್ಲಿ ಶಿವರಾಜ್‌ಕುಮಾರ್ ಜೊತೆಗೆ ಮೋಹನ್ ಲಾಲ್, ಜಾಕಿಶ್ರಾಫ್ ಮತ್ತು ಸುನಿಲ್ ಅತಿಥಿ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು. ವಿನಾಯಕನ್, ರಮ್ಯಾ ಕೃಷ್ಣನ್, ತಮನ್ನಾ ಭಾಟಿಯಾ, ವಸಂತ್ ರವಿ, ಮಿನಾರ್ ಮೆನನ್ ಮತ್ತು ಯೋಗಿ ಬಾಬು ಮೊದಲ ಚಿತ್ರದಲ್ಲಿ ನಟಿಸಿದ್ದರು.

---





# ನ್ಯಾಯ- ಅನ್ಯಾಯದ ನಡುವೆ ಲಾಯರ್ ಭರತ್ 'ಯುದ್ಧಕಾಂಡ'


ಜಯ್ ರಾವ್ ನಿರ್ಮಿಸಿ, ನಟಿಸಿರುವ ಸಿನಿಮಾ ಕೋರ್ಟ್ ಡ್ರಾಮಾ ಸಿನಿಮಾ 'ಯುದ್ಧಕಾಂಡ' ಚಾಪ್ಟರ್-2 ರಾಜ್ಯಂದ್ಯಂತೆ ತೆರೆಗೆ ಬಂದಿದೆ. ಪವನ್ ಭಟ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಹೆಣ್ಣಿಗೆ ಆಗಿರುವ ಅನ್ಯಾಯದ ವಿರುದ್ಧ ಕೋರ್ಟ್‌ನಲ್ಲಿ ನಾಯಕ ಹೋರಾಡುವ ಕತೆ ಸಾಕಷ್ಟು ಸಿನಿಮಾಗಳಲ್ಲಿ ನೋಡಿದ್ದೇವೆ. ಈ ಚಿತ್ರದಲ್ಲಿ ಕೂಡ ಅದೇ ಕೇಂದ್ರಬಿಂದು.

ಒಂದೊಳ್ಳೆ ಸಂದೇಶವನ್ನು ಹೊತ್ತು 'ಯುದ್ಧಕಾಂಡ' ಸಿನಿಮಾ ಪ್ರೇಕ್ಷಕರ ಮುಂದೆ ಬಂದಿದೆ. ಇದೇ ಮೊದಲ ಬಾರಿಗೆ ವಕೀಲನ ಪಾತ್ರದಲ್ಲಿ ಅಜಯ್ ರಾವ್ ಮಿಂಚಿದ್ದಾರೆ. ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಸಾಕಷ್ಟು ವಿಚಾರಗಳನ್ನು ಚಿತ್ರದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಅಪರಾಧಿಗಳಿಗೆ ಅಷ್ಟು ಸುಲಭವಾಗಿ ಶಿಕ್ಷೆ ಸಿಗಲ್ಲ, ಹಣ ಇರುವವರು, ಪ್ರಭಾವಿಗಳು ಎಲ್ಲರನ್ನು ಕೊಂಡುಕೊಳ್ಳುತ್ತಾರೆ. ಕೋರ್ಟ್‌ಗೆ ಸಾಕ್ಷಿಯೇ ಮುಖ್ಯ ಎನ್ನುವ ಆರೋಪಗಳು ಪದೇ ಪದೆ ಕೇಳಿಬರುತ್ತದೆ. ಅಂತಹ ವಿಚಾರಗಳನ್ನೆಲ್ಲಾ ಚಿತ್ರದಲ್ಲಿ ಹೇಳಲಾಗ್ತಿದೆ.

ಕಥೆ ಬಹಳ ಸಿಂಪಲ್. ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ನಡೆಯುತ್ತದೆ. ನ್ಯಾಯ ಕೇಳಿ ಕೋರ್ಟ್‌ಗೆ ಹೋಗುವ ಆ ಬಾಲಕಿಯ ತಾಯಿ ನಿವೇದಿತಾ(ಅರ್ಚನಾ ಜೋಯಿಸ್)ಗೆ ಅಷ್ಟು ಸುಲಭಕ್ಕೆ ನ್ಯಾಯ ಸಿಗಲ್ಲ. ಹಾಗಾಗಿ ಆಕೆ ಕೋರ್ಟ್ ಆವರಣದಲ್ಲೇ ಅತ್ಯಾಚಾರಿಯನ್ನು ಗುಂಡಿಕ್ಕಿ ಕೊಲ್ಲುತ್ತಾಳೆ. ನಿವೇದಿತಾ ಬಂಧನವಾಗುತ್ತದೆ. ಆಕೆಗೆ ಶಿಕ್ಷೆ ಆಗುತ್ತಾ? ವಕೀಲ ಭರತ್ (ಅಜಯ್ ರಾವ್) ಕೋರ್ಟ್‌ನಲ್ಲಿ ವಾದ ಮಾಡಿ ಆಕೆಯನ್ನು ನಿರಪರಾಧಿ ಎಂದು ಬಿಡಿಸುತ್ತಾನಾ? ಈ ಪ್ರಶ್ನೆಗಳಿಗೆ ಉತ್ತರ ಬೇಕು ಅಂದ್ರೆ ಸಿನಿಮಾ ನೋಡಬೇಕು.

ಕನ್ನಡದಲ್ಲಿ ಕೋರ್ಟ್ ರೂಮ್ ಡ್ರಾಮಾ ಸಿನಿಮಾಗಳ ಸಂಖ್ಯೆ ಬಹಳ ಕಮ್ಮಿಯಿದೆ. 'ಯುದ್ಧಕಾಂಡ' ಆ ಬರವನ್ನು ನೀಗಿಸುವಂತಿದೆ. ಚಿಕ್ಕ ಕಥೆಯನ್ನು ಪರಿಣಾಮಕಾರಿಯಾಗಿ ಹೇಳಲು ಚಿತ್ರತಂಡ ಬಹಳ ಶ್ರಮಿಸಿದೆ. ದಿನದಿಂದ ದಿನಕ್ಕೆ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಇದೆ. ಸಾಕಷ್ಟು ಪ್ರಕರಣಗಳು ಬಯಲಿಗೆ ಬರುವುದು ಇಲ್ಲ. ಇನ್ನು ಕೆಲ ಪ್ರಕರಣಗಳು ಹಳ್ಳ ಹಿಡಿಯುತ್ತಿದೆ. ಇಂತಾದೊಂದು ಗಂಭೀರ ವಿಚಾರವನ್ನು ಚಿತ್ರದಲ್ಲಿ ಹೇಳುವ ಪ್ರಯತ್ನವನ್ನು ನಿರ್ದೇಶಕ ಪವನ್ ಭಟ್ ಮಾಡಿದ್ದಾರೆ. ಅದಕ್ಕೆ ಅಜಯ್ ರಾವ್ ಸೇರಿದಂತೆ ಇತರೆ ಕಲಾವಿದರು ಸಾಥ್ ಕೊಟ್ಟಿದ್ದಾರೆ.

ಚಿತ್ರಕ್ಕೆ ಆಯ್ಕೆ ಮಾಡಿಕೊಂಡಿರುವ ಕಥೆ, ಹೇಳಲು ಬಯಸಿರುವ ಸಂದೇಶ, ಎಲ್ಲವೂ ಚೆನ್ನಾಗಿದೆ. ಆದರೆ ಅಷ್ಟು ಪರಿಣಾಮಕಾರಿಯಾಗಿ ಅದು ತೆರೆಮೇಲೆ ಮೂಡಿ ಬಂದಿಲ್ಲ. ಸಣ್ಣಪುಟ್ಟ ತಪ್ಪುಗಳು ಸಾಕಷ್ಟು ಭಾಗಗಳಲ್ಲಿ ಸಿಗುತ್ತದೆ. ಗುರು ಸಮಾನರಾದ ವಕೀಲರ ಮುಂದೆಯೇ ಭರತ್ ವಾದ ಮಾಡಿ ಗೆಲ್ಲುವ ಹಠಕ್ಕೆ ಬೀಳುತ್ತಾನೆ. ಕೋರ್ಟ್ ಒಳಗೆ ನಡೆಯುವ ವಾದ- ಪ್ರತಿವಾದದ ಸನ್ನಿವೇಶಗಳು ಚೆನ್ನಾಗಿದೆ. ಇನ್ನುಳಿದಂತೆ ಕೆಲವರು ಕಡೆ ಲಾಜಿಕ್ ಮಿಸ್ ಆಗುತ್ತದೆ. ಬರವಣಿಗೆ ಇನ್ನು ಚೆನ್ನಾಗಿ ಇರಬೇಕಿತ್ತು.


ನಿರ್ದೇಶಕ ಪವನ್ ಭಟ್

ವಕೀಲನ ಪಾತ್ರದಲ್ಲಿ ಅಜಯ್ ರಾವ್ ವಿಭಿನ್ನವಾಗಿ ತೆರೆಮೇಲೆ ಕಾಣುತ್ತಾರೆ. ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಅರ್ಚನಾ ಜೋಯಿಸ್ ಹೆಚ್ಚು ಅಂಕ ಗಿಟ್ಟಿಸುತ್ತಾರೆ. ಭರತ್ ಎದುರು ನಿಲ್ಲುವ ವಕೀಲರಾಗಿ ಪ್ರಕಾಶ್ ಬೆಳವಾಡಿ ಕೂಡ ಗಮನ ಸೆಳೆಯುತ್ತಾರೆ. ಹಾಡು ಅಷ್ಟೇನು ಸದ್ದು ಮಾಡಲ್ಲ, ಬಿಜಿಎಂ ಚಿತ್ರಕ್ಕೆ ಪೂರಕವಾಗಿದೆ.

ಒಟ್ಟಾರೆ ಚಿತ್ರತಂಡ ಒಂದು ವಿಭಿನ್ನ ಪ್ರಯತ್ನದ ಮೂಲಕ ಪ್ರೇಕ್ಷಕರ ಮುಂದೆ ಬಂದಿದೆ. ಚಿತ್ರದಲ್ಲಿರುವ ಸಂದೇಶವನ್ನು ಸಾಕಷ್ಟು ಜನ ಮೆಚ್ಚಿಕೊಳ್ಳುತ್ತಿದ್ದಾರೆ. ಕೋರ್ಟ್ ರೂಮ್ ಡ್ರಾಮಾ ಇಷ್ಟಪಡುವವರಿಗೆ 'ಯುದ್ಧಕಾಂಡ'-2 ಸಿನಿಮಾ ಇಷ್ಟವಾಗುತ್ತದೆ. ಚಿತ್ರದಲ್ಲಿರುವ ಸಂದೇಶ ಎಲ್ಲರಿಗೂ ತಲುಪಬೇಕಿದೆ.

---

# ಮೆಜೆಸ್ಟಿಕ್ 2 ಚಿತ್ರದ ನಾಯಕಿ ಸಂಹಿತಾ ವಿನ್ಯಾ

ನಟಿಯಾಗಿ ಮತ್ತು ಮಾಡೆಲ್ ಆಗಿಯೂ ಗುರುತಿಸಿಕೊಂಡಿರುವ 'ಮೆಜೆಸ್ಟಿಕ್ 2' ಚಿತ್ರದ ನಾಯಕಿ ಸಂಹಿತಾ ವಿನ್ಯಾ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಅದ್ಧೂರಿಯಾಗಿ ಆಚರಿಸಿದ್ದಾರೆ. 'ಹಾಲು ತುಪ್ಪ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿರುವ ಸಂಹಿತಾ ವಿನ್ಯಾ ಅವರ 'ಸೀತಮ್ಮ ಬಂದ್ಲು ಸಿರಿಮಲ್ಲಿಗೆ ತೊಟ್ಟು', 'ಅಮೃತ ಘಳಿಗೆ' ಮುಂತಾದ ಸಿನಿಮಾದಲ್ಲಿ ನಟಿಸಿದ್ದಾರೆ. ತೆಲುಗು, ತಮಿಳು ಸಿನಿಮಾಗಳಲ್ಲೂ ರಾಷ್ಟ್ರೀಯ, ಅಂತಾರಾಷ್ಟ್ರೀಯ ಫ್ಯಾಷನ್ ಷೋಗಳಲ್ಲಿ ಭಾಗವಹಿಸಿದ್ದಾರೆ. ಫಾರೆವರ್ ನವೀನ್ ಇವರ ಫ್ಯಾಷನ್ ಡಿಸೈನರ್ ಆಗಿದ್ದಾರೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 20.4.2025



# ನಿರ್ಮಾಪಕರಿಗೆ ಇಳಯರಾಜ ಲೀಗಲ್ ನೋಟಿಸ್!

ಕಾಲಿವುಡ್ ನಟ ಅಜಿತ್‌ಕುಮಾರ್ ಅಭಿನಯಿಸಿರುವ ಗುಡ್ ಬ್ಯಾಡ್ ಅಗ್ಲಿ ಚಿತ್ರಕ್ಕೆ ಪಾಸಿಟಿವ್ ರೆಸ್ಪಾನ್ಸ್ ವ್ಯಕ್ತವಾಗುತ್ತಿದೆ. ರಿಲೀಸ್ ಆಗಿ ಐದು ದಿನ ಕಳೆದರೂ ಚಿತ್ರದ ಬಗೆಗಿನ ಕ್ರೇಜ್ ಕಡಿಮೆ ಆಗುತ್ತಿಲ್ಲ.

ಯಶಸ್ಸಿನ ಖುಷಿಯಲ್ಲಿರುವಾಗಲೇ ಗುಡ್ ಬ್ಯಾಡ್ ಅಗ್ಲಿಗೆ ಕಾನೂನು ಸಂಕಷ್ಟ ಎದುರುರಾಗಿದೆ. ಕಾಪಿ ರೈಟ್ಸ್ ಆರೋಪ ಮಾಡಿ ಖ್ಯಾತ ಹಿರಿಯ ಸಂಗೀತ ನಿರ್ದೇಶಕ ಇಳಯರಾಜ ಚಿತ್ರತಂಡಕ್ಕೆ ನೊಟೀಸ್ ಕಳುಹಿಸಿದ್ದಾರೆ.



ತಮಿಳು ಆ್ಯಕ್ಷನ್-ಕಾಮಿಡಿ ಗುಡ್ ಬ್ಯಾಡ್ ಅಗ್ಲಿ' ನಿರ್ಮಾಪಕರಿಗೆ ಸಂಗೀತ ಮಾಂತ್ರಿಕ ಇಳಯರಾಜ ಲೀಗಲ್ ನೊಟೀಸ್ ಕಳುಹಿಸಿದ್ದಾರೆ. ಇಳಯರಾಜ ಅವರ ಓತ ರುಬಾಯುವಮ್ ತಾರೆನ್', ಇಲಮೈ ಇದೋ ಇಧೋ' ಮತ್ತು ಏನ್ ಜೋಡಿ ಮಂಜ ಕುರುವಿ' ಹಾಡುಗಳ ಬದಲಾದ ಆವೃತ್ತಿಗಳನ್ನು ಬಳಸಿದ್ದಕ್ಕಾಗಿ ಚಿತ್ರತಂಡಕ್ಕೆ ಕಾನೂನು ಸಂಕಷ್ಟ ಎದುರಾಗಿದೆ.

'ನಮ್ಮ ಕ್ಲೈಂಟ್‌ನ ನಟ್ಟುಪುರ ಪಟ್ಟು' ಚಿತ್ರದ 'ಒಥ ರುಬಾಯುಮ್ ತರೇನ್', 'ಸಕಲಕಲಾ ವಲ್ಲವನ್' ಚಿತ್ರದ 'ಇಲಮೈ ಇಧೋ 'ಇಧೋ' ಮತ್ತು 'ವಿಕ್ರಮ್' ಚಿತ್ರದ ಎನ್ ಜೋಡಿ ಮಂಜ ಕುರುವಿ' ಹಾಡುಗಳನ್ನು ಸ್ಪಷ್ಟ ಒಪ್ಪಿಗೆ/ ಅನುಮತಿ ಪಡೆಯದೆ ಚಿತ್ರದಲ್ಲಿ ಬಳಸಲಾಗಿದೆ. ಹಾಡುಗಳನ್ನು ಮಾರ್ಪಡಿಸಿ ಚಿತ್ರದಲ್ಲಿ ಬಳಸಿರುವುದು ಗಮನಕ್ಕೆ ಬಂದಿದೆ ಎಂದು ನೊಟೀಸ್‌ನಲ್ಲಿ ತಿಳಿಸಲಾಗಿದೆ. ಇದು ಅನಧಿಕೃತ ಬಳಕೆ, ಸ್ವಾಧೀನ ಆಗಿದ್ದು, ನಮ್ಮ ಕ್ಲೈಂಟ್ನ ಹಕ್ಕುಸ್ವಾಮ್ಯ ಮತ್ತು ನೈತಿಕ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ.

ಚಿತ್ರದಲ್ಲಿನ ನನ್ನ ಶೀಘ್ರವೇ ಹಾಡುಗಳನ್ನು ತೆಗೆದು ಹಾಕಬೇಕು. ಇಲ್ಲದಿದ್ರೆ ಚಿತ್ರದ ಬಾಕ್ಸ್ ಆಫೀಸ್ ಗಳಿಕೆಯಲ್ಲಿ 5 ಕೋಟಿ ರೂಪಾಯಿ ಪರಿಹಾರವನ್ನು ನೀಡಬೇಕೆಂದು ನೊಟೀಸ್‌ನಲ್ಲಿ ತಿಳಿಸಲಾಗಿದೆ. ☯



# ಕನ್ನಡದ ಮೊದಲ AI ಆಧಾರಿತ ಚಿತ್ರ 'LOVE YOU'

ಕನ್ನಡ ಚಿತ್ರರಂಗವು LOVE YOU ಮೂಲಕ ಜಾಗತಿಕ ಚಲನಚಿತ್ರೋದ್ಯಮದಲ್ಲಿ AI ಕ್ರಾಂತಿ ಮಾಡಲು ಸಜ್ಜಾಗಿದ್ದು, ಕೃತಕ ಬುದ್ಧಿಮತ್ತೆಯ ಬಳಕೆಯಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಿದೆ.

ಕನ್ನಡದ 'ಲವ್ ಯು' ಸಿನಿಮಾ ವಿಶ್ವದ ಮೊದಲ ಸಂಪೂರ್ಣವಾಗಿ AI-ಆಧಾರಿತ ಸಿನಿಮಾ ಆಗಿದ್ದು, ಎಸ್. ನರಸಿಂಹಮೂರ್ತಿ ಅವರು ಈ ಚಿತ್ರವನ್ನು ನಿರ್ದೇಶಿಸಿ, ನಿರ್ಮಿಸಿದ್ದಾರೆ. ಅವರೇ ಹೇಳಿದಂತೆ, ಇದು ಒಂದು ಡಿಜಿಟಲ್ ಅದ್ಭುತ. ನಿರ್ದೇಶಕ, ನಿರ್ಮಾಪಕ, AI ಇನ್‌ಸ್ಟ್ರಕ್ಟರ್ ಹಾಗೂ ಪಿಆರ್‌ಓ ಬಿಟ್ಟು ಬೇರೆ ಯಾರೂ ನಿಜವಾದ ವ್ಯಕ್ತಿಗಳು ಈ ಚಿತ್ರಕ್ಕೆ ಕೆಲಸ ಮಾಡಿಲ್ಲ. ಎಲ್ಲಾ AIಮಯ. ಸಂಗೀತ, ಹಾಡುಗಳು, ಲೋಕೇಶನ್ಸ್ ಕೂಡ AIನಲ್ಲೇ ಮಾಡಲಾಗಿದೆ. 95 ನಿಮಿಷಗಳ ಈ ಸಿನಿಮಾ ಸೆನ್ಸಾರ್ ಮುಗಿಸಿ ಇದೀಗ ಬಿಡುಗಡೆಗೆ ಸಜ್ಜಾಗಿದೆ.


ಪ್ರತಿಯೊಂದು ಫ್ರೇಮ್, ಹಾಡು, ಸಂಭಾಷಣೆ, ಪಾತ್ರದ ಅನಿಮೇಷನ್, ಲಿಪ್-ಸಿಂಕ್ ಮತ್ತು ಕ್ಯಾಮೆರಾ ಚಲನೆಯನ್ನು ಸಂಪೂರ್ಣವಾಗಿ ಕೃತಕ ಬುದ್ಧಿಮತ್ತೆಯಿಂದ ನಿರ್ಮಿಸಲಾಗಿದೆ. ಕೋಡ್ ಮತ್ತು ಸೃಜನಶೀಲತೆಯ ಹಿಂದೆ AI ಎಂಜಿನಿಯರ್ ನೂತನ್ ಇದ್ದಾರೆ. ಸುಂದರ್ ರಾಜ್, ಗುಂಡೂರಾವ್ ಅವರು ಇಡೀ ಪ್ರಾಜೆಕ್ಟ್ ನೇತೃತ್ವ ವಹಿಸಿದ್ದಾರೆ. ಇಡೀ ತಂಡ ಕ್ರಿಯೇಟಿವ್ ಆಗಿ ಕೆಲಸ ಮಾಡಿದೆ ಎಂದು 'ಲವ್ ಯು' ಸಿನಿಮಾದ ನಿರ್ದೇಶಕ ನರಸಿಂಹಮೂರ್ತಿ ಹೇಳಿದ್ದಾರೆ.

95 ನಿಮಿಷಗಳ 'ಲವ್ ಯೂ' ಚಿತ್ರದಲ್ಲಿ ಒಟ್ಟು 12 ಹಾಡುಗಳಿವೆ. ಆ ಹಾಡುಗಳನ್ನು ಕೂಡ AIನಲ್ಲೇ ಕಂಪೋಸ್ ಮಾಡಿ ರೆಕಾರ್ಡಿಂಗ್ ಮಾಡಿದ್ದಾರೆ. ಇದು ಬರೀ ಒಂದು ಸಿನಿಮಾ ಅಲ್ಲ, ಒಂದು ಕ್ರಾಂತಿ ಆಗಲಿದೆ ಎಂದು ಚಿತ್ರತಂಡ ವಿಶ್ವಾಸ ವ್ಯಕ್ತಪಡಿಸಿದೆ.

ಲವ್ ಯು ಚಿತ್ರ CBFC ಪ್ರಮಾಣಪತ್ರ (U/A) ಪಡೆದ ಮೊದಲ ಅಐ ಚಿತ್ರವಾಗಿದ್ದು, ಅಧಿಕೃತವಾಗಿ ಇದು ಥಿಯೇಟ್ರಿಕಲ್ ಬಿಡುಗಡೆಗೆ ಅರ್ಹತೆ ಪಡೆದಿದೆ. ಸಂಪೂರ್ಣ ಅಐ ನಿಂದ ನಿರ್ಮಿಸಲ್ಪಟ್ಟ ಲವ್ ಯು ಸಿನಿಮಾ ಮುಂಬರುವ ತಿಂಗಳುಗಳಲ್ಲಿ ಜಾಗತಿಕ ಥಿಯೇಟ್ರಿಕಲ್ ಬಿಡುಗಡೆಗೆ ಸಜ್ಜಾಗುತ್ತಿದೆ. ಶೀಘ್ರದಲ್ಲೇ ಅಧಿಕೃತವಾಗಿ ಚಿತ್ರದ ಬಿಡುಗಡೆ ದಿನಾಂಕವನ್ನು ಘೋಷಿಸಲಾಗುವುದು ಎಂದು ನಿರ್ದೇಶಕರು ತಿಳಿಸಿದ್ದಾರೆ. ☯

# ಮಗಳ ಮೊದಲ ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿ ಶಿವಣ್ಣ

ಶ್ರೀ ಮುತ್ತು ಸಿನಿ ಸರ್ವೀಸಸ್ ಬ್ಯಾನರ್ ಅಡಿಯಲ್ಲಿ ಶಿವರಾಜ್ ಕುಮಾರ್ ಅವರ ಪುತ್ರಿ ನಿವೇದಿತಾ ಶಿವರಾಜ್‌ಕುಮಾರ್ ಅವರ ಚೊಚ್ಚಲ ನಿರ್ಮಾಣ ಉದ್ಯಮ ಫೈರ್‌ಫ್ಲೈನಲ್ಲಿ ಶಿವರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಈ ಹಿಂದೆ ವರದಿ ಮಾಡಿತ್ತು.



ಕಿಚ್ಚ ಸುದೀಪ್ ಬಿಡುಗಡೆ ಮಾಡಿದ ಟ್ರೇಲರ್, ಭಾವನಾತ್ಮಕವಾಗಿ ಮುರಿದ ನಾಯಕನ ಮೇಲೆ ಬೆಳಕು ಚೆಲ್ಲುತ್ತದೆ, ಆದರೆ ಕೊನೆಯಲ್ಲಿ ಶಿವಣ್ಣ ಅವರ ಅನಿರೀಕ್ಷಿತ ಅತಿಥಿ ಪಾತ್ರವು ನಿಜವಾಗಿಯೂ ಕುತೂಹಲವನ್ನು ಹುಟ್ಟುಹಾಕುತ್ತದೆ.

ಫೈರ್‌ಫ್ಲೈ ವಿವೇಕಾನಂದ, ಅಕಾ ವಿಕ್ಕಿ (ವಂಶಿ ಕೃಷ್ಣ) ಅವರ ಜೀವನವನ್ನು ಅನುಸರಿಸುತ್ತದೆ. ಅವರು ನಿದ್ರಾಹೀನತೆಯಿಂದ



ಹೋರಾಡುವ ಮತ್ತು ಮರೆಯಾಗಲು ನಿರಾಕರಿಸುವ ನೆನಪುಗಳನ್ನು ಎದುರಿಸುತ್ತಿರುವ ವ್ಯಕ್ತಿಯ ಪಾತ್ರದಲ್ಲಿ ನಟಿಸಿದ್ದಾರೆ. ಟ್ರೇಲರ್ ನಮ್ಮನ್ನು ಅವರ ಲೋಕಕ್ಕೆ ಆಳವಾಗಿ ಕರೆದೊಯ್ಯುತ್ತದೆ – ಅವರ ನಿದ್ದೆಯಿಲ್ಲದ ರಾತ್ರಿಗಳು, ಸಮಾಧಿ ಮಾಡಿದ ದುಃಖ ಮತ್ತು ನೋವು, ಶಾಂತಿಗಾಗಿ ಹುಡುಕಾಟ. ಮತ್ತು ನೀವು ಎಲ್ಲವನ್ನೂ ಕಂಡುಕೊಂಡಿದ್ದೀರಿ ಎಂದು ನೀವು ಭಾವಿಸಿದಾಗ, ಶಿವರಾಜ್‌ಕುಮಾರ್ ಹೆಜ್ಜೆ ಹಾಕುತ್ತಾರೆ. ಏಪ್ರಿಲ್ 24 ರಂದು ಚಿತ್ರ ಬಿಡುಗಡೆಯಾಗುವಾಗ ಇನ್ನೂ ಹೆಚ್ಚಿನ ಮಾಹಿತಿ ಬಹಿರಂಗವಾಗಲಿದೆ.

ಈ ಚಿತ್ರ ಸಂಕೀರ್ಣವಾದ ಭಾವನೆಯನ್ನು ಹಗುರವಾಗಿ ಪ್ರದರ್ಶಿಸುವ ಪ್ರಯತ್ನವಾಗಿದೆ ಎಂದು ನಿರ್ಮಾಪಕಿ ನಿವೇದಿತಾ ಹೇಳಿದ್ದಾರೆ. ಇದು ಪ್ರದರ್ಶನದ ಬಗ್ಗೆ ಅಲ್ಲ; ಇದು ಭಾವನೆಯ ಕುರಿತದ್ದಾಗಿದೆ.

ಶಿವರಾಜ್‌ಕುಮಾರ್ ಈ ಹಿಂದೆ ಹೇಳಿದ್ದ ಪ್ರಕಾರ, ಫೈರ್‌ಫ್ಲೈ ದುಃಖ ಮತ್ತು ಗುಣಪಡಿಸುವಿಕೆಯನ್ನು ಆಧಾರವಾಗಿ ಮತ್ತು ಹೃತ್ಪೂರ್ವಕವಾಗಿ ಅನ್ವೇಷಿಸುತ್ತದೆ. ಅಪ್ಪಾಜಿಯವರ ಜನ್ಮದಿನದಂದು ಬಿಡುಗಡೆಯಾಗಿರುವುದು ಅದನ್ನು ಇನ್ನಷ್ಟು ಅರ್ಥಪೂರ್ಣವಾಗಿಸುತ್ತದೆ – ಅವರ ಪರಂಪರೆಗೆ ಗೌರವ ಮತ್ತು ಪ್ರೇಕ್ಷಕರಿಗೆ ಉಡುಗೊರೆ.

ಚರಣ್‌ರಾಜ್ ಅವರ ಸಂಗೀತ, ಅಭಿಲಾಷ್ ಕಲಾಥಿ ಅವರ ಛಾಯಾಗ್ರಹಣ ಮತ್ತು ರಘು ನಿಡುವಳ್ಳಿ ಅವರ ಸಂಭಾಷಣೆಯೊಂದಿಗೆ, ಈ ಚಿತ್ರದಲ್ಲಿ ರಚನಾ ಇಂದರ್, ಶೀತಲ್ ಶೆಟ್ಟಿ, ಅಚ್ಯುತ್ ಕುಮಾರ್, ಸುಧಾರಾಣಿ, ವೀಣಾ, ಸುಂದರ್ ಮತ್ತು ಸಿಹಿಕಹಿ ಚಂದ್ರು ಕೂಡ ಇದ್ದಾರೆ. ☯

Vol. 40 No. 46 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 📱 9513892666
Email: policenewsreporter@gmail.com